ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 73,14,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ - ೫೭ - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 157,87,73,000ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ - ೫೮-ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 536,35,27,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು ಮಂಡಿಸಲಾಗಿದೆ.

ಅಧ್ಯಕ್ಷರು :- 1994-95ನೇ ಸಾಲಿನ ಅನುಪೂರಕ ಅಂದಾಜುಗಳ ಮೇಲಿನ ಚರ್ಚೆ.

* ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : - ಮಾನ್ಯ ಅಧ್ಯಕ್ಷರೇ, ಈ ದಿವಸದ ಮುಖ್ಯ ಮಂತ್ರಿಗಳ ಎಲ್ಲಾ ಬೇಡಿಕೆಗಳ ಮೇಲೆ ವಿಸ್ತಾರವಾಗಿ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ, ಆದರೆ ಆ ಗಾಬರಿ ಅವರೂ ಇಟ್ಟುಕೊಳ್ಳುವುದು ಬೇಡ. ಕಾರಣ ಏನೆಂದರೆ ನನ್ನ ಪ್ರೊಟೆಸ್ಟ್ ಏತಕ್ಕೆ ರಿಜಿಸ್ಟರ್ ಮಾಡಿದೆ ಎನ್ನುವುದಕ್ಕೆ ಇಷ್ಟೇ ಹೇಳುತ್ತೇನೆ. ರಾಜ್ಯದ ಜವಾಬ್ದಾರಿಯನ್ನು ಹೊತ್ತ ಮಂತ್ರಿಗಳು ಅವರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾವು ಹಿಂದೆ ಆ ಬೇಡಿಕೆ ಮಂಜೂರಾದ ದಿವಸ ಸಂಬಂಧಪಟ್ಟ ಮಂತ್ರಿಗಳು ಶಾಸಕರನ್ನು ಕರೆದು ಊಟ ಹಾಕಿಸಿ ಸಂತೋಷವನ್ನು ವ್ಯಕ್ತಪಡಿಸಿದಂತಹ ದಿನಗಳು ಇದ್ದದು. ಅಂದ್ರೆ ನನ್ನ ಒಂದು ವರ್ಷದ ಕಾರ್ಯ ಆರಂಭ ಮಾಡುತ್ತಿದ್ದೇನೆ ನನ್ನ ಜವಾಬ್ದಾರಿಯನ್ನು ನಿಭಾಯಿಸತಕ್ಕಂಥ ಕೆಲಸಕ್ಕೆ ನೀವೆಲ್ಲ ಒಪ್ಪಿಗೆ ಮತ್ತು ಜವಾಬ್ದಾರಿಯನ್ನು ವಹಿಸಿದ್ದೀರಿ ಎಂದು ಹೇಳತಕ್ಕಂಥಾದ್ದರ ಬಗ್ಗೆ ಇತ್ತು. ಇವತ್ತು ಅನಿವಾರ್ಯ ಕಾರಣಗಳಿಂದ ಒಬ್ಬಬ್ಬರು ಮಂತ್ರಿಗಳು

ಬರುವುದಕ್ಕಾವುದಿಲ್ಲ ನನಗೂ ಅರ್ಥವಾಗುತ್ತದೆ. ಅಂತಹ ಸಂದರ್ಭದಲ್ಲಿ ಅಧ್ಯಕ್ಷರ ಪೀಠಕ್ಕೆ ಗೌರವ ತರುವ ದೃಷ್ಟಿಯಿಂದ ತಮ್ಮ ಪರವಾನಿಗೆಯನ್ನು ತಡೆದು ಬೇರೆಯವರು ಅದನ್ನು ಕೇಳತಕ್ಕಂಥ ಕ್ರಮ ಇತ್ತು. ಸದನಕ್ಕೂ ಗೌರವ ಇಲ್ಲ ಅಧ್ಯಕ್ಷರಿಗೂ ಗೌರವ ಇಲ್ಲ ಬೇಡಿಕೆಗಳಿಗೂ ಗೌರವ ಇಲ್ಲದಂತಹ ಸ್ಥಿತಿಗೆ ಬರಬಾರದು ಎನ್ನುವ ದೃಷ್ಟಿಯಿಂದ ನನ್ನ ಅಭಿಪ್ರಾಯವನ್ನು ನಾನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ ವಿದ್ಯುತ್‌ಗೆ ಸಂಬಂಧಪಟ್ಟಂತಹ ಕೆಲವು ಮಾತುಗಳನ್ನು ಹೇಳಬೇಕು ಅಂತ ಹೇಳಿ ಬಹಳ ಮುಖ್ಯವಾಗಿ ಈ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕು ಎನ್ನತಕ್ಕಂಥ ಉದ್ದೇಶಕ್ಕೆ ಕಾರಣಗಳು ಯಾವುದೇ ಬೇಡಿಕೆ ಯಾವುದೇ ಇಲಾಖೆ ತನ್ನ ಕಾರ್ಯವನ್ನು ಮಾಡತಕ್ಕಂಥಾ ಕಾಲದಲ್ಲಿ ನಿಯಮಗಳ ಶಾಸನಗಳ ಮತ್ತು ರಾಜ್ಯಾಂಗದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು ಬಹಳ ಮುಖ್ಯವಾದ ಪ್ರಜಾತಂತ್ರದ ಅತ್ಯಂತ ಗೌರವಿಸಬೇಕಾದಂತಹ ಒಂದು ಮೌಲ್ಯ. ನಮ್ಮ ರಾಜ್ಯದ ವಿದ್ಯುತ್ಶಕ್ತಿ ಇಲಾಖೆ ಖಾಸಗಿ ಕಂಪನಿಯಿಂದ ಸುಮಾರು 200 ಕೋಟಿ ರೂಪಾಯಿಗಳ ಸಾಲ ಪಡೆದುಕೊಂಡಿದೆ. ಅದನ್ನು ನಾನು ಹೇಳುವುದಕ್ಕಿಂತ ಮುಂಚೆ ಇಲಾಖೆಗೆ ಸಂಬಂಧಿಸಿದಂತೆ ಎರಡೂ ಮೂರು ಮಾತುಗಳನ್ನು ಹೇಳಬೇಕು. ನಮ್ಮ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಸುಮಾರು 3900 ಮೆಗಾವಾಟ್ಸ್ ಉತ್ಪಾದನೆ 3300 ಅನ್ನು ಮೀರಿಲ್ಲ ಹಾಗಾಗಿ ಸುಮಾರು 600 ಮೆಗಾವಾಟ್ಸ್. ವಿದ್ಯುತ್‌ನ ಕೊರತೆ ರಾಜ್ಯಕ್ಕೆ ಇದೆ. ಪ್ರತಿನಿತ್ಯ ಸುಮಾರು 52 ದಶಲಕ್ಷ ಮಿಲಿಯನ್ ಯೂನಿಟ್‌ಗಳಲ್ಲಿ ವಿದ್ಯುತ್ತನ್ನು ನಾವು ಬಳಕೆ ಮಾಡುತ್ತೇವೆ. ಆದರೆ ಅದು ಈಗ 56 ದಶಲಕ್ಷ ಯೂನಿಟ್‌ಗಳವರೆಗೂ ಹೋಗಿದೆ. ನಮ್ಮ ಉತ್ಪಾದನೆ ಕೇವಲ 42 ದಶಲಕ್ಷ ಯೂನಿಟ್‌ಗಳಷ್ಟೇ ಸೀಮಿತ.

ಉಳಿದಿರುವ ಸುಮಾರು 14,13 ದಶಲಕ್ಷ ಯೂನಿಟ್‌ಗಳನ್ನು ನಾವು ಕೇಂದ್ರದ ಗ್ರಿಡ್ ಮೂಲಕ ಖಾಸಗಿಯಾಗಿ ಬೇರೆ ಬೇರೆ ಆಯಾಮಗಳಲ್ಲಿ ಅದನ್ನು ಪಡೆಯಲು ಪ್ರಯತ್ನ ಮಾಡುತ್ತೇವೆ, ಆದರೂ ಸಾಧ್ಯವಾಗುವುದಿಲ್ಲ. ಇಷ್ಟೊಂದು ವಿದ್ಯುತ್ ಕೊರತೆ ನಮ್ಮ ರಾಜ್ಯದ ಅಭಿವೃದ್ಧಿಯ ಸಂಕೇತವೇ? ಕೇಂದ್ರ ರಾಜ್ಯ ಸರ್ಕಾರಗಳ ಆಧ್ಯತಾಪಟ್ಟಿಯಲ್ಲಿ ವಿದ್ಯುದುತ್ಪಾದನೆ ಅಭಿವೃದ್ಧಿ ಮಾಡಬೇಕೆಂದು ಕೂಡ ಇದೆ. ಅದನ್ನು ಉತ್ಪಾದಿಸಲು ಬಹಳ ಹೆಚ್ಚಾಗಿ ಜಲವಿದ್ಯುತ್ ಯೋಜನೆಗಳು, ಶಾಖ ವಿದ್ಯುತ್ ಯೋಜನೆಗಳು, ಮತ್ತು ಅಟಾಮಿಕ್ ವಿದ್ಯುತ್ ಯೋಜನೆಗಳೆಂದು ಎರಡು ಮೂರು ಭಾಗ ಮಾಡಿಕೊಂಡಿದ್ದೇವೆ ಈ ಮೂಲಗಳಿಂದ ಸಿಗುವ ವಿದ್ಯುತ್ತಿನ ಒಟ್ಟು ಪ್ರಮಾಣವನ್ನು ಗಮನಿಸಿದರೂ ನಮ್ಮ ರಾಜ್ಯದಲ್ಲಿ ಸ್ವಲ್ಪ ಕೊರತೆ ಇದೆ. ಈ ಕೊರತೆ ತುಂಬಿಸಿಕೊಳ್ಳಲು ಖಾಸಗೀ ಕಂಪನಿಗಳಿಗೆ ವಿದ್ಯುತ್ ಉತ್ಪಾದನೆಗೆ ಕೊಡುವ ಆಲೋಚನೆ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಮಾಡಿದವು. ಹಾಗೆ ಮಾಡುವಾಗ ಒಂದನ್ನು ವಿಶೇಷವಾಗಿ ಗಮನಿಸಬೇಕು. ನಾನು ಬೆಳಿಗ್ಗೆ ಕೂಡ ಪ್ರಸ್ತಾಪಿಸಿದ್ದೆ. ಉತ್ಪಾದನೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಬಯಸಿವೆಯೋ ಹಾಗೇ ಅದರ ವಿತರಣೆ ಮತ್ತು ಹಂಚಿಕೆಗೆ ಆ ಪ್ರಮಾಣದ ಒತ್ತು ಕೊಟ್ಟಿಲ್ಲ. ಉತ್ಪಾದನೆ ಖಾಸಗಿಯವರ ಕೈಗೆ ಕೊಡಲು ಆಲೋಚಿಸಿದ್ದಾರೋ, ಆದರೆ ವಿತರಣೆ

ಕಾರ್ಯವನ್ನು ಖಾಸಗಿಯವರು ಯಾರೂ ಜವಾಬ್ದಾರಿ ಹೊತ್ತಿಲ್ಲ. ವಿತರಣೆಯ ಸಂಪೂರ್ಣ ಜವಾಬ್ದಾರಿ ವಿದ್ಯುನ್ಮಂಡಲಿಗೆ ಸೇರಿದೆ. ಕೆಇಬಿ. ಈ ಜವಾಬ್ದಾರಿ ಹೊತ್ತಿದೆ ನಿಜ, 9 ಸಹಸ್ರ ಮೇಗಾವಾಟ್ಸ್ ವಿದ್ಯುದುತ್ಪಾದಿಸುವ ಗುರಿ ಏನಿಟ್ಟು ಕೊಂಡಿದ್ದಾರೆ ಹಾಗೆ ಉತ್ಪಾದಿಸಿದ ವಿದ್ಯುತ್ತಿನ ಹಂಚಿಕೆ ಮತ್ತು ರವಾನೆಗೆ ಆಲೋಚನೆ ಮಾಡದೇ ಇದ್ದರೆ ಉತ್ಪಾದನೆ ಮಾಡಿದ ವಿದ್ಯುತ್ತನ್ನು ಏನು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಬಹಳ ಮುಖ್ಯವಾಗಿ ಇದನ್ನು ಗಮನಿಸಬೇಕಾಗಿದೆ. ಇದರ ಜೊತೆಗೆ ನಮ್ಮ ವಿದ್ಯುತ್ ಉತ್ಪಾದನೆಗೆ ಹೊಸ ಹೊಸ ಆಯಾಮಗಳನ್ನು ಮಾಡುವುದಕ್ಕಿಂತ ಇರುವ ಸ್ಥಾಪಿತ ಯೋಜನೆಗಳಲ್ಲಿ ಉದ್ದೇಶಿತ ಗುರಿ ತಲುಪದೇ ಇರುವ ಅನೇಕ ಸಂದರ್ಭಗಳುಂಟು. ಅದರಲ್ಲಿ ಕೆಲವು ಬಹಳ ಮುಖ್ಯವಾದುವನ್ನು ಇಲ್ಲಿ ನಾನು ಪ್ರಸ್ತಾಪಿಸಿದ್ದೇನೆ, ವಿವರಕ್ಕೆ ಹೋಗುವುದಿಲ್ಲ. ಗರಿಷ್ಠ ಉತ್ಪಾದನೆಗೆ ಗಮನ ಕೊಡುವುದು ಬಹಳ ಮುಖ್ಯವಾದ ಕೆಲಸ. ಗರಿಷ್ಠ ಉತ್ಪಾದನೆ ಎಂದರೇನು? ಶರಾವತಿಯಲ್ಲಿ ಸುಮಾರು 10 ಘಟಕಗಳಿವೆ, ಒಂದೊಂದು ಘಟಕದ ಉತ್ಪಾದನಾ ಸಾಮರ್ಥ್ಯ 89 ಮೆಗಾವಾಟ್ಸ್. ಈ ಸಾರಿ 8 ಘಟಕಗಳನ್ನು ರಿಪೇರಿ ಮಾಡಿದ್ದಾರೆ ಅರ್ಥಾತ್ ಒಂದೊಂದು ಘಟಕದಲ್ಲಿ 15 ಮೆಗಾವಾಟ್ಸ್ ಉತ್ಪಾದಿಸುವ ಸಾಮರ್ಥ್ಯ ಹೆಚ್ಚಾಯಿತು, ಅಲ್ಲಿಗೆ ಸುಮಾರು 103 ರಿಂದ 104 ಮೆಗಾವಾಟ್ಸ್‌ನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಶರಾವತಿ ಒಂದು ಘಟಕ ಮಾಡಬಹುದು. ಸರಿಸುಮಾರು ಒಂದು ಸಾವಿರ ಮೆಗಾವಾಟ್ಸ್ ಉತ್ಪಾದಿಸುವ ಸಾಮರ್ಥ್ಯ ಒಟ್ಟು ಘಟಕಗಳದ್ದು. ಇದು ಒಂದು ಭಾಗ. ಮತ್ತೊಂದು ಭಾಗ, ಶರಾವತಿಯಲ್ಲಿ 1819 ಅಡಿ ಗರಿಷ್ಟ ಮಿತಿಯಿದೆ. 1715 ಅಡಿ ಕನಿಷ್ಠಮಿತಿ. ಈ ಪ್ರಮಾಣದಲ್ಲಿ ಬರುವ ನೀರು ಗರಿಷ್ಠಮಿತಿ ಮುಟ್ಟಿದರೆ ಎಷ್ಟು ದೂರಕ್ಕೆ ಆ ಜಲಮಟ್ಟವನ್ನು ಬಳಕೆ ಮಾಡಬಹುದು ವಿದ್ಯುತ್ ಉತ್ಪಾದನೆಗೆ ಎಂದು ಒಂದು ಲೆಕ್ಕ ನೋಡಿದ್ದೇವೆ. 1726 ಅಡಿವರೆಗೂ ಹೋಗಬಹುದು. ಸರಿಸುಮಾರು 1740ರವರೆಗೂ ಹೋಗುತ್ತಾರೆ ಮುಂದಿನವರ್ಷ ಮಳೆ ಬರದಿದ್ದರೆ ಗತಿಯೇನು? ಅನ್ನುವ ಕಾರಣಕ್ಕಾಗಿ ಸ್ವಲ್ಪಮಟ್ಟಿಗೆ ನೀರನ್ನು ಶೇಖರಣೆ ಮಾಡಿಟ್ಟು ಕೊಳ್ಳುತ್ತಾರೆ. ನಾನು ಇದರ ಲೆಕ್ಕ ತೆಗೆದಿದ್ದೇನೆ. 1990-91ಕ್ಕೆ 1819 ಅಡಿ ನೀರು ಬಂದರೆ, ಬಳಕೆಯಾದದ್ದು 1740 ಅಡಿ, 91-92, 92-93ರಲ್ಲಿ 1767 ಅಡಿ ನೀರು ಬಳಕೆ ಮಾಡಿಕೊಂಡಿದ್ದಾರೆ. 1762 ಅಡಿ ನೀರು 93ರಲ್ಲಿ ಬಳಸಿದ್ದಾರೆ. 93-94ರಲ್ಲಿ 1813 ಅಡಿ ನೀರು ಬಂದರೆ, 1772 ಅಡಿಗಳಷ್ಟು ಮಾತ್ರ ಬಳಕೆ ಮಾಡಿಕೊಂಡಿದ್ದಾರೆ. ಹೀಗೆ ಬಳಕೆ ಮಾಡದೇ ಉಳಿದ ನೀರು ವ್ಯರ್ಥವಾಗುತ್ತದೆ. ಎರಡು ರೀತಿಯಿಂದ, ಈ ಸಾರಿ 1819 ಅಡಿಗಿಂತ ಮೇಲೆ ನೀರು ಹೋಯಿತು, ಅದು ರನಾಫ್ ವಾಟರ್, ಸಮದ್ರಕ್ಕೆ ಹೋಗುತ್ತದೆ. ನೀವು ತೀರ 1726 ಅಡಿ ಬಳಕೆ ಮಾಡಿ ಕೊಂಡಿದ್ದರೆ ಯಾವ ನೀರು ವ್ಯರ್ಥವಾಯಿತೋ ಆ ನೀರಿನ ಬಳಕೆಯೂ ಆಯಿತು. ಮತ್ತು 1772ಕ್ಕೂ 1726ರಕ್ಕೂ ಮಧ್ಯೆ ಸುಮಾರು 45-50 ಅಡಿಗಳಿಗೆ ಬಳಕೆಯಾಗದೆ ಉಳಿದಿರುವ ನೀರು ಅಷ್ಟರಮಟ್ಟಿಗೆ ವಿದ್ಯುದುತ್ಪಾದನೆಗೆ ಘಾತಕವಾಯಿತು. ಆದ್ದರಿಂದ ಗರಿಷ್ಟ ಪ್ರಮಾಣದಲ್ಲಿ ದೇವರು ಕೊಟ್ಟ ವರ, ಇದನ್ನು ಬಳಕೆ ಮಾಡಿಕೊಳ್ಳದೆ ಹೊಸ ಹೊಸ ಯೋಜನೆಗಳನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಹಾಗೇ ಶಾಖೋತ್ಪನ್ನ ಘಟಕ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೇ, ಶರಾವತಿಯಲ್ಲಿರುವ 10 ಜನರೇಟರ್ಸ್‌ಗಳ ಪೈಕಿ 8ನ್ನು ಆಪರೈಟ್ ಮಾಡಿದ್ದಾರೆ. ಈ ಜನರೇಟರ್ಸ್ ಬಹುತೇಕ ಯಾವತ್ತೂ ಅವುಗಳ ಕೆಪಾಸಿಟಿಗೆ ತಕ್ಕಂತೆ ಕೆಲಸ ಮಾಡಿಲ್ಲ. ಹಣ ಮಾತ್ರ ಅಲ್ಲಿ ಖರ್ಚಾಯಿತು ಮತ್ತು ನೀರು ಕೂಡ ಸಮುದ್ರಕ್ಕೆ ಹೋಯಿತು. ಒಂದು ಕಡೆ ನಮ್ಮ ಭಾಗಗಳಲ್ಲಿ ವಿದ್ಯುತ್ತಿಲ್ಲ ಎಂದು ದಿವಸವೂ ಬೊಂಬಡ ಹೊಡೆಯುತ್ತಿದ್ದೇವೆ. ಅಲ್ಲಿ ನೀರಿದ್ದು ಹಣ ಖರ್ಚಾಗಿದ್ದರೂ ಸಹ ಅಲ್ಲಿನ ಕೆಲವು ಅಧಿಕಾರಿಗಳ ಲೋಪದೋಷಗಳಿಂದ ಇವತ್ತು ಅದರ ಪ್ರತಿಫಲ ಜನಕ್ಕೆ ಸಿಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ವಿವರಕ್ಕೆ ಹೋದರೆ ಸಾಕಷ್ಟು ವಿವರವಾಗಿ ಚರ್ಚೆ ಮಾಡುವುದಿದೆ. ಆದ್ದರಿಂದ ಹೋಗುವುದಿಲ್ಲ. ನಾನು ಸ್ಥಾಪಿತ ಸಾಮರ್ಥ್ಯವನ್ನು ಬಳಕೆ ಮಾಡಿಕೊಳ್ಳುವುದರಲ್ಲಿ ಜಲವಿದ್ಯುತ್ ಘಟಕಗಳಲ್ಲಿಯೂ ಮತ್ತು ಶಾಖೋತ್ಪನ್ನ ಘಟಕಗಳಲ್ಲಿಯೂ ಆಗಿಲ್ಲ ಎಂಬುದು ನನ್ನ ಆಪಾದನೆ. ಆ ರೀತಿ ಆಗದೆ ಹಾಗೆ ನೋಡಿಕೊಳ್ಳಬೇಕು. ಇನ್ನೊಂದು ವಿಚಿತ್ರ ಪರಿಸ್ಥಿತಿಯೇನು? ಶ್ರೀ ಭೈರೇಗೌಡರು ಹೇಳಿದಂತೆ ರಾಯಚೂರಿನ ವಿದ್ಯುತ್ ಘಟಕದಲ್ಲಿ ಪೂರ್ಣಪ್ರಮಾಣದ ವಿದ್ಯುತ್ತನ್ನು ಇವರು ಉತ್ಪಾದಿಸಿದರೆ ಅದನ್ನು ಸಾಗಣೆ ಮಾಡಲು ಲೈನ್‌ಗಳಿಲ್ಲ.

ಅದೆಲ್ಲಾದರೂ ಸ್ಥಾಪಿತ ಸಾಮರ್ಥ್ಯ ಬಳಕೆ ಆಗಿಬಿಟ್ಟರೆ ಆ ವಿದ್ಯುತ್ ರಾಮಗುಂಡಂಗೆ ಹೋಗುತ್ತದೆ. ಕರ್ನಾಟಕಕ್ಕೆ ಸಿಗುವುದಿಲ್ಲ. ಏಕೆಂದರೆ ಲೈನ್ ಅಲ್ಲಿ ಬಿಲ್ಡ್ ಮಾಡಿದ್ದಾರೆ. ಇಲ್ ವಿದ್ಯುತ್ ಯೋಜನೆಯನ್ನು ಕ್ರಮವಾಗಿ ಹೇಗೆ ನೀವು ಮಾಡುವುದಿಲ್ಲ ಹಾಗೆಯೇ ನೀರಾವರಿಯಲ್ಲಿ ನಮ್ಮ ಹೇಮಾವತಿಯಲ್ಲಿ ನೀರು ತುಂಬಿಸಿಟ್ಟು ಕಾಲುವೆ ಮಾಡುವುದಕ್ಕೆ ಆಗಿಲ್ಲವೋ ಹಾಗೆ ವಿದ್ಯುತ್ ಉತ್ಪಾದನೆಗೆ ಬೇಕಾದ ಸಾಮರ್ಥ್ಯ ಇದೆ, ಅದನ್ನು ಬಳಸಲು ಬೇಕಾದ ಹಂಚಿಕೆ ಮತ್ತು ವಿತರಣೆ ಲೈನ್‌ಗಳಿಲ್ಲ. ಇದನ್ನು ಸ್ಟ್ರೆಂತನ್ ಮಾಡಲು ಸರ್ಕಾರ ಪ್ರಯತ್ನ ಮಾಡಬೇಕು. ಈಗ ಖಾಸಗೀಕರಣಕ್ಕೆ ಆಲೋಚನೆ ನಡೆದಿದೆ. ಕೆಪಿಸಿಯಲ್ಲಿ ಸುಮಾರು 8 ಸಾವಿರ ಜನ ಕೆಲಸ ಮಾಡುತ್ತಾರೆ, ಕಾಳಿ ವಿದ್ಯುತ್ ಮತ್ತು ಜಲವಿದ್ಯುತ್ ಯೋಜನೆಗಳಲ್ಲಿ 2300 ಜನ ಕೆಲಸ ಮಾಡುತ್ತಾರೆ.

ವಿದ್ಯುತ್ ಮಂಡಳಿಯಲ್ಲಿ 42 ಸಾವಿರ ಜನ ಕೆಲಸ ಮಾಡುತ್ತಾರೆ. ಈ ಶರಾವತಿಯಲ್ಲಿ ಉತ್ಪತ್ತಿ ಮಾಡತಕ್ಕಂತಹ ವಿದ್ಯುಚ್ಛಕ್ತಿಯನ್ನು ನಾವು ಜನರಿಗೆ 12 ಪೈಸೆ ದರದಲ್ಲಿ ಕೊಡುತ್ತಿದ್ದೇವೆ. ಸೂಪಾ, ನಾಗಾರ್ಜುರಿಯಿಂದ 26 ಪೈಸೆಗೆ ಕೊಡುತ್ತಿದ್ದೇವೆ. ವರಾಹಿಯಲ್ಲಿ 50 ಪೈಸೆಗೆ ಕೊಡುತ್ತಿದ್ದೇವೆ. ಕಂಪ್ಯಾರಿಸನ್ ಮಾಡಿ ಹೇಳುತ್ತಿದ್ದೇನೆ. ರಾಯಚೂರು ಶಾಖೋತ್ಪನ್ನದಲ್ಲಿ 1 ಯೂನಿಟ್‌ಗೆ 1.70 ಪೈಸೆ ಆಗುತ್ತದೆ. ಯಲಹಂಕದಲ್ಲಿ ಒಂದು ಡೀಸೆಲ್ ಪ್ಲಾಂಟ್ ಮಾಡಿದ್ದಾರೆ 120 ಮೆಗಾವ್ಯಾಟ್ಸ್‌ನದ್ದು ಇದರ ಉತ್ಪತ್ತಿಯ ಖರ್ಚೇ ಎರಡೂವರೆ ರೂಪಾಯಿ ಇದರ ಮೇಲೆ ಟ್ರಾನ್ಸ್‌ಮಿಷನ್ ಸೇರಿಸಿದರೆ ಮೂರು ರೂಪಾಯಿಗಿಂತ ಕಡಿಮೆ ಬೆಲೆಗೆ ವಿದ್ಯುತ್‌ನ್ನು ಜನರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಸಾಲಾ ಮಾಡಿ ವಿದ್ಯುತ್ತನ್ನು ಪಡೆದುಕೊಳ್ಳುವುದು ಸಾಲ ಮಾಡಿ ಮಾಡಿದ ವಿದ್ಯುತ್ ಅನ್ನು ಕಡಿಮೆ

ದರದಲ್ಲಿ ಮಾರುವುದು, ಸಾಲ ಮಾಡಿದ ವಿದ್ಯುತ್ತನ್ನು ಮುಫತ್ತಾಗಿ ಕೊಡುವುದು ಹೀಗೆ ಎಷ್ಟು ದಿವಸ ಇದನ್ನು ಮಾಡುತ್ತೀರಿ. ಈಗ ಕೆ ಇ ಬಿ ದಿವಾಳಿಯಾಗಿದೆ. 670 ಕೋಟಿ ರೂ ಗಳಷ್ಟು ವಿದ್ಯುತ್ತನ್ನು ರೈತರಿಗೆ ಮುಫತ್ತಾಗಿ ನೀಡಿದ್ದೀರಿ. ಇದು ನೀವು ಒದಗಿಸಿದ ಮಾಹಿತಿಯೇ. ತಮಿಳುನಾಡಿನಲ್ಲಿ ಏನು ಮಾಡುತ್ತಾರೆಂದರೆ ಎಷ್ಟು ವಿದ್ಯುಚ್ಛಕ್ತಿಯನ್ನು ದುರ್ಬಲ ವರ್ಗದವರಿಗೆ ಮತ್ತು ರೈತರಿಗೆ ಕೊಡುತ್ತಾರೆ 9 1/2 ಯಿಂದ 10 ಲಕ್ಷ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ ಖರ್ಚು ಬೀಳುತ್ತದೆ ಅದನ್ನು ರಾಜ್ಯ ಸರಕಾರ ತುಂಬಿ ಕೊಡುತ್ತದೆ. ಇಲ್ಲಿ ನೀವು ತುಂಬಿ ಕೊಡುವುದಿಲ್ಲ ಪ್ರತಿ ವರ್ಷ ರಿಯಾಯಿತಿ ತೋರಿಸುತ್ತಾ ಹೋಗುತ್ತೀರಿ ಅದು ಹೇಗೆ ಬದುಕಿರಬೇಕು. ಅಲ್ಲಿರತಕ್ಕಂತಹ ಆರಕ್ಷತೆ ಒಂದು ಭಾಗ ಮತ್ತೊಂದು ಭಾಗ ಸರಕಾರವೇ ಆ ವಿದ್ಯುಚ್ಛಕ್ತಿ ಮಂಡಲಿಯ ಕತ್ತು ಹಿಸುಕತಕ್ಕಂತಹ ಪ್ರಯತ್ನ ನಡೆದರೆ ಭವಿಷ್ಯದಲ್ಲಿ ಏನಾಗಬಹುದು ಎಂದು ವಿಚಾರ ಮಾಡಿ. ಖಾಸಗೀಕರಣದಿಂದ ಆಗಬಹುದಾದದ್ದು ಏನು ಕರ್ನಾಟಕದಲ್ಲಿ 128 ಸಣ್ಣ ದೊಡ್ಡ ವಿದ್ಯುಚ್ಛಕ್ತಿ ಘಟಕ ಅಂದರೆ ಜಲ ವಿದ್ಯುತ್ ಘಟಕಗಳನ್ನು ಗುರುತಿಸಿದ್ದಾರೆ. ಚೀಪೆಸ್ಟ್ ಪವರ್ ನೀವು ಯಾವುದೇ ಫೋರಮ್‌ನಿಂದ ತೆಗೆದುಕೊಳ್ಳಿ ಅದು ಹೇರಳವಾಗಿ ರಾಜ್ಯದಲ್ಲಿ ಇದ್ದಾವೆ. ಹತ್ತಿರ ಹತ್ತಿರ ಇದರಿಂದ ನಮ್ಮ ರಾಜ್ಯದ ಬೇಡಿಕೆಗಿಂತ ಸುಮಾರು ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ. ಸುಮಾರು 7-8 ಸಾವಿರ ಮೆಗಾವ್ಯಾಟ್ಸ್ ವಿದ್ಯುತ್ತನ್ನೂ ಜಲವಿದ್ಯುತ್‌ನಿಂದ ಉತ್ಪತ್ತಿ ಮಾಡಬಹುದು. ಆದರೆ ಈ ಕೆಲಸ ಏಕೆ ಆಗಿಲ್ಲವೆನ್ನುವುದಕ್ಕೆ ನಾನು ಹೋಗುವುದಿಲ್ಲ. ಇನ್ನಾದರೂ ಅವರು ಮಾಡತಕ್ಕಂತಹ ಪ್ರಯತ್ನ ಮಾಡಬೇಕು. ಹಾಗೆ ಮಾಡದೆ ಖಾಸಗಿಯವರಿಗೆ ಕೊಟ್ಟು ಮುಂದೆ ಖಾಸಗಿಯವರು ಕನಿಷ್ಠ ದರ 3 ರೂಪಾಯಿ ನಿಗದಿ ಮಾಡಿದರೆ ರೈತರಿಗೂ ಇಲ್ಲಸಾಮಾನ್ಯ ನಾವೂ ನೀವೂ ಬಳಕೆದಾರರು ಕೂಡ 1 ಯೂನಿಟ್‌ಗೆ 3 ರೂಪಾಯಿ ಕೊಡಬೇಕಾಗುತ್ತದೆ ಆ ಒಂದು ಕಾಲ ಬರಬಹುದು. ವಿತರಣೆ ಕೂಡ ಖಾಸಗಿಯವರಿಗೆ ಕೊಡತಕ್ಕಂತಹ ಆಲೋಚನೆ ಮಾಡಿದ್ದೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಅಂತಹ ಸಂದರ್ಭ ಬಂದರೆ ನಾವು 1 ಯೂನಿಟ್‌ಗೆ 5 ರೂಪಾಯಿ ಕೊಡಬೇಕಾದ ಪರಿಸ್ಥಿತಿಯನ್ನು ನಾವು ಬದುಕಿದ್ದಾಗಲೇ ನೋಡಬಹುದೆಂದು ಅನಿಸುತ್ತದೆ. 1 ಯೂನಿಟ್ಟಿಗೆ 5 ರೂಪಾಯಿ ಕೊಡಬೇಕಾದ ದಿನಗಳೇನೂ ದೂರ ಇಲ್ಲ. ಆವತ್ತೂ ರೈತರಿಗೆ ಇದೇ ಸ್ಥಿತಿ ಇದ್ದರೆ ಅಂದರೆ ಆತ ಬೆಳೆದ ಬೆಲೆಗೆ ದರ ಸಿಗದೇ ಇರತಕ್ಕಂತಹ ಸ್ಥಿತಿ ಇದ್ದರೆ ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್ಟಿಗೆ ಬಳಸಲಾರದಂತಹ ಸ್ಥಿತಿಗೆ ಬರಬಹುದು. ರಾಜ್ಯದಲ್ಲಿ ನಾವು ನೀರಾವರಿಗೆ ಕಟ್ಟೆ ಕಟ್ಟಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಒಟ್ಟು ನಮ್ಮ ರಾಜ್ಯದಲ್ಲಿ ನೀರಾವರಿಯಿಂದ ಬರತಕ್ಕಂತಹ ಕೃಷಿಗಿಂತಲೂ ಸರಿಸುಮಾರು ಅರ್ಧ ಭಾಗದಷ್ಟು ಕೃಷಿ ವಿದ್ಯುತ್ತಿನ ಮೂಲಗಳಿಂದಲೇ ಉತ್ಪಾದನೆಯಾಗುತ್ತಿದೆ. ಆ ಕಾರಣದಿಂದಾಗಿ ರಾಜ್ಯ ಸರಕಾರ ಹೀಗೆ ಕೊಡತಕ್ಕಂತಹ ವಿದ್ಯುಚ್ಛಕ್ತಿಗೆ ಯಾವುದಾದರೂ ಮೂಲದಿಂದ ಹಣವನ್ನು ತುಂಬಿ ಕೊಡತಕ್ಕಂಥ ಕೆಲಸ ಮಾಡಿದಿದ್ದರೆ ಕಷ್ಟವಾಗುತ್ತದೆ. ಜನ ಪ್ರಿಯತೆಗಾಗಿ ಏನಾದರೂ ಹೇಳಬಹುದು ಮುಫತ್ತಾಗಿ ಕೊಡಿ ಇಲ್ಲವೇ ಮತ್ತೊಂದು

ಹೇಳಬಹುದು. ರೈತರು ಎಲ್ಲಾ ಪಂಪ್‌ಸೆಟ್‌ಗಳನ್ನು ಮುಚ್ಚಿ ಮನೆಗೆ ಹೋಗುವುದನ್ನು ನಾವು ಬದುಕಿದ್ದಾಗ ನೋಡಬೇಕಾಗುತ್ತದೆ. ಯಾವುದಾದರೂ ಒಂದು ರೀತಿಯಲ್ಲಿ ಸರಕಾರ ಆಲೋಚನೆ ಮಾಡಬೇಕು. ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಮೊನ್ನೆ ಪಿಯರ್‌ಲೆಸ್ ಕಂಪನಿಯಿಂದ ಎರಡು ನೂರು ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ ವಿದ್ಯುತ್ ಮಂಡಲಿಯವರು. ಆ ಸಾಲ ತರುವುದಕ್ಕೆ ಮಂಡಳಿಗೆ - ಕೆಲವು ಮತ್ತು ರಾಜ್ಯ ಸರ್ಕಾರಕ್ಕೆ ಹಾಗೂ ಶಾಸನ ಸಭೆಗೆ ಕೆಲವು ಜವಾಬ್ದಾರಿಗಳು ಇದ್ದಾವೆ. Electricity Supply Act, 1948 I quote. ಏನು ಹೇಳುತ್ತದೆ ಸೆಕ್ಷನ್ 65 ಎಂದರೆ:

"The maximum amount which the Board may at any time have on loan under sub-section(1) shall be 10 crores of rupees" -

ಸಬ್‌ಸಿಕ್ಷೆಂಟ್‌ಲಿ ಇದನ್ನು ಅಮೆಂಡ್ ಮಾಡಿದ್ದಾರೆ. ಅಮೆಂಡ್ ಮಾಡಿ 20 ಕೋಟಿ ರೂಪಾಯಿ 1964 ರಲ್ಲಿ ಈ ಶಾಸನಕ್ಕೆ ಅಮೆಂಡ್‌ಮೆಂಟ್ ತಂದು 10 ಕೋಟಿ ಇದ್ದುದನ್ನು 20 ಕೋಟಿಯವರೆಗೆ ಸಾಲ ಪಡೆಯಬಹುದು ಎಂದು ಪರವಾನಿಗೆ ಕೊಟ್ಟಿದ್ದಾರೆ. ಹಾಗೆ ಪಡೆಯುವುದಕ್ಕೆ ನಿಬಂಧನೆಗಳು ಇವೆ.

"Unless the State Government with the approval of the State Legislative Assembly fixes a higher maximum amount"

The maxmum amount fixed under the Act is 20 crores.

ಅದನ್ನು ಬೈ ಸರ್ಕ್ಯುಲೇಷನ್ ಜಾಸ್ತಿ ಮಾಡಿದ್ದೇವೆ. 600 ಕೋಟಿ ರೂಪಾಯಿಯೂ ಮಾಡಿದ್ದೇವೆ ಎಂದು ಹೇಳಿ ಶಾಸನಸಭೆಗೆ ಹೇಳಿದರು. ನನಗೆ ಗೊತ್ತಿಲ್ಲ. ಯಾವಾಗ ಈ ಶಾಸನಸಭೆಯ ಪರವಾನಿಗೆಯನ್ನು ತೆಗೆದುಕೊಂಡರೋ ಅಥವಾ ತೆಗೆದುಕೊಳ್ಳಬೇಕು ಎಂದು ಆಲೋಚನೆ ಮಾಡಿದ್ದೀರೋ ಸಾಲ ತೆಗೆದುಕೊಂಡು ಬಂದ ಮೇಲೆ, ಅದು for the approval of the House, we have to be seen

ಇದರ ಜೊತೆಗೆ ಸೆಕ್ಷನ್ 66ರಲ್ಲಿ,

" The State Government may guarantee in such manner as it thinks fit the payment of the principal and interest of any loan proposed to be raised by the Board or on either the principal or interest"

5.00 ಪಿ.ಎಂ.

ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರ 17-3-94ಕ್ಕೆ issued a Government Order No. DE 51 KEB 94 dt. 17.3.1994. In the Government order dt. 17.3.94,. the Karnataka Electricity Board has been permitted to borrow Rs. 200/- crores from M/s. Peerless General Financial and Investment Company, Calcutta. The Karnataka Electricity Board has indicated that the said loan will be available at 16.5% rate of interest per annum. The Karnataka Electircity Board has sought Government's guarantee for the said loan and for the approved of 16.5% interest.

ಇದಕ್ಕೆ ಸರ್ಕಾರ ಒಂದು ಆಜ್ಞೆಯನ್ನು ಮಾಡುತ್ತದೆ.

"Government accords guarantee for a loan of Rs. 200/- crores to borrow from M/s. Peerless Company and permit the electricity board to avail the loan at the rate of 16.5% interest.

ಎರಡಕ್ಕೂ ಕೊಡುತ್ತಾರೆ. ಇದರ ವಿಶೇಷವೇನು? 17ನೇ ತಾರೀಖು ಇದು ಹಿಂದೆ Macintosh Computer ಹಗರಣ ಬಂದಾಗ ಯಾವ ವೇಗದಲ್ಲಿ ಕೆಲಸ ನಡೆಯಿತು ಎಂದು ನಾವೆಲ್ಲ ಇಲ್ಲಿ ಆಪಾದನೆ ಮಾಡಿದೆವೋ ಅದಕ್ಕಿಂತಲೂ ಅತ್ಯಂತ ತ್ವರಿತವಾದ ಕೆಲಸವಾಗಿದೆ. ಇದಕ್ಕೆ ಕಾರಣ ಏನು ಎಂದು ನಾನು ಊಹಿಸಿರುವುದನ್ನು ಆಮೇಲೆ ಹೇಳುತ್ತೇನೆ. ರೆಸಲ್ಯೂಷನ್ ನಂ. 18593 dated 18th March,1994.

Minutes of circulations agenda circulated amongst the members of the Board on 18th March, 1994. Cabinet approved on 17.3.1994. Karnataka Electricity Board meets on 18th. Before the Board meets, before the Board requests this benevolant Government

ಬಹಳ ಮುಂದಕ್ಕೆ ಹೋಗುತ್ತಾರೆ. 17ನೇ ತಾರೀಖು ಇದಕ್ಕೆ ಮಂಜೂರಾತಿಯನ್ನು ಕೊಡುತ್ತಾರೆ. ಅವರೇನು

"It is hereby resolved to avail a loan of Rs. 200/- crore from the Peerless General Financial and Investment Company Ltd. Calcutta. The Chairman, KEB and Finance Member, KEB are hereby authorised to finalise the loan agreement.

ಇವರು ಕೇಳುವುದಕ್ಕೆ ಮುಂಚೆ, ಒಂದು ದಿವಸದ ಮುಂಚೆ ಕ್ಯಾಬಿನೆಟ್‌ನಲ್ಲಿ ನಿರ್ಣಯ ಆಗುತ್ತದೆ, ಹದಿನಾರುವರೆ ಪರ್‌ಸೆಂಟ್ ಬಡ್ಡಿಯಲ್ಲಿ ಖಾಸಗಿ ಕಂಪನಿಯಿಂದ 200 ಕೋಟಿ ರೂಪಾಯಿ ಸಾಲ ತರುವುದಕ್ಕೆ ಮಂಜೂರಾತಿ. 18ನೇ ತಾರೀಖು ನಮಗೆ ಮಂಜೂರಾತಿ ಕೊಡಿ ಎಂದು ಕೆಇಬಿಯವರ ಬೇಡಿಕೆ.

ಅದೇ 17ನೇ ತಾರೀಖಿಗೆ ಸೆಕ್ರಟರಿ, ಗೌರ್ನಮಂಟ್, ಎನರ್ಜಿ ಡಿಪಾರ್ಟ್‌ಮೆಂಟ್, ಅವರು ಒಂದು ಪತ್ರವನ್ನು ಬರೆಯುತ್ತಾರೆ.

" Peerless General Financial and Investment Company Ltd. Calcutta has come forward to give a loan of Rs. 200/- crores to K.E.B. for a period of three years at the rate of 18% less 1.5%. However, the Company requires Government guarantee to release the loan amount. This may kindly be obtained".

ಸೆಕ್ರಟರಿ ಟು ಗೌರ್ನಮೆಂಟ್ 17ನೇ ತಾರೀಖು ಪತ್ರ : K.E.B. Boards meets on 18th. 17th Cabiet gives approval.

28ನೇ ತಾರೀಖಿಗೆ 100 ಕೋಟಿ ರೂಪಾಯಿ, ಇದು ಜೊತೆಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಆ ದಿವಸವೇ ಕ್ಯಾಬಿನೆಟ್‌ಗೆ ಮಂಜೂರಾತಿಗೆ ಬರೆಯುತ್ತಾರೆ. Finance Department has been consulted before the Cabinet meets. Finance Department vide U.O. No. Fd.JS. 1033 dt. 17.3.1994 has concurred with the proposal of the Department of Energy for issue of Government guarantee and approval for 16.5% rate of interest per annum on the said loan.

ಇದರ ಬೇಸಿಸ್ ಮೇಲೆ Under the circumstances explained, the Government was pleased to concur or give guarantee to K.E.B. to borrow the loan to the extent of Rs. 200/- crores.

ಇದು ಒಂದು ಭಾಗ. ಎಷ್ಟು ಯಾವ ಸ್ಥಿತಿ ಬಂದಿತ್ತು ಸರ್ಕಾರಕ್ಕೆ ಎಂದರೆ ಆ ದಿವಸ ಎಂದರೆ ಮಾರ್ಚಿ ತಿಂಗಳಲ್ಲಿ ರಾಜ್ಯಸರ್ಕಾರದ ನೌಕರರಿಗೆ ಸಂಬಳ ಕೊಡಲಾರದಂಥ ಸ್ಥಿತಿ. ಅದಕ್ಕೆ ಕೆ.ಇ.ಬಿ.ಯನ್ನು ಬಳಕೆ ಮಾಡಿಕೊಂಡರು. ಒಂದು ಕಡೆ ...

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಅತಿರಂಜಿತ ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಹತ್ತಿರ ಪೇಪರ್ಸ್ ಇದ್ದಾವೆ. ನಾನು ಹೇಳಿಬಿಡುತ್ತೇನೆ. ತಮ್ಮ ಉತ್ತರದಲ್ಲಿ ಅದನ್ನು ಹೇಳಿ. ಇದು ರಂಜಿತ ಅಲ್ಲ. Basis of papers are available with me, ನನ್ನ ಮೊದಲನೆಯ ಆಪಾದನೆ ಏನೆಂದರೆ ಸೆಕ್ಷನ್ 65ನ್ನು ವಯಲೇಟ್ ಮಾಡಿದಿರಿ. ಆತುರಾತುರವಾಗಿ ಪ್ರಪಂಚ ಸಂಸ್ಥೆಯವರು ಆರುಕಾಲು ಪರ್‌ಸೆಂಟ್‌ನಲ್ಲಿ ಬಡ್ಡಿಗೆ ಸಾಲವನ್ನು ಕೊಡುತ್ತಾರೆ. ಕೆಲವು ಸಾರಿ ಹ್ಯಾಂಡ್ಲಿಂಗ್ ಛಾರ್ಜಸ್ ಎಂದು ಒಂದು-ಎರಡು ಪರ್‌ಸೆಂಟ್ ತೆಗೆದುಕೊಂಡು ಹೆಚ್ಚುಕಡಿಮೆ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟಿರತಕ್ಕಂಥ ಪ್ರಸಂಗಗಳು ಉಂಟು. ನಾನು ವಿವರಕ್ಕೆ ಹೋಗುವುದಿಲ್ಲ. ಪ್ರಪಂಚ ಸಂಸ್ಥೆಯಲ್ಲಿ ನಮಗೆ ಬರಬೇಕಾದಂಥ ಸಾಲವನ್ನು ಮಂಜೂರು ಮಾಡಲಾರದಂಥ ಸ್ಥಿತಿಗೆ ನಾವು ಕೆಇಬಿಯನ್ನು ಮುಂದೊಡ್ಡಿ ಅದಾದ ಮೇಲೆ ಈ ಹಣವನ್ನು ಖಾಸಗಿ ಕಂಪನಿಯಿಂದ ಹದಿನಾರುವರೆ ಪರ್‌ಸೆಂಟ್‌ನಲ್ಲಿ ತಂದರು. ಇಷ್ಟು ವೇಗವಾಗಿ ತೀರ್ಮಾನ ಮಾಡಿದಿರಲ್ಲ, ಕೆ.ಇ.ಬಿ. ನವರಿಗೆ ಜವಾಬ್ದಾರಿ ನಮ್ಮದು ಗ್ಯಾರಂಟಿ ಮಾತ್ರ ನಮ್ಮ ಸರ್ಕಾರದ್ದು. ನಮ್ಮ ಜವಾಬ್ದಾರಿ ಎಷ್ಟು? ಗ್ಯಾರಂಟಿ. ಶಾಸನಸಭೆಯ ಜವಾಬ್ದಾರಿಯೇನು ಈ ಗ್ಯಾರಂಟಿ ಕೊಡುವುದಕ್ಕೆ ಸಾಲ ತೆಗೆದುಕೊಳ್ಳುವುದಕ್ಕೆ ಈ ಸದನದ ಅನುಮತಿ ಇದೆ ಎಂದು ಹೇಳತಕ್ಕಂಥದ್ದು ನಮ್ಮ ಜವಾಬ್ದಾರಿ. ಆದ್ದರಿಂದ ಸದನಕ್ಕೆ ಸಂಬಂಧ ನಾನು ಮಾತನಾಡುತ್ತಿದ್ದೇನೆ. ಇದು ಸದನಕ್ಕೆ ಸಂಬಂಧಿಸಿರುವುದರಿಂದ ನಾನು ಮಾತನಾಡುತ್ತಿದ್ದೇನೆ. ಈ ಹಣವನ್ನು ಇಲಾಖೆಯವರು ಡ್ರಾ ಮಾಡಿ ಸಂಬಂಧಪಟ್ಟ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಟ್ಟಿದ್ದರೆ ಅದಕ್ಕೆ ಬಡ್ಡಿ ಬರುತ್ತಿತ್ತು. ಆದರೆ, ಹಾಗೆ, ಮಾಡದೆ ಹಣವನ್ನು ಸರ್ಕಾರಿ ಖಜಾನೆಯಲ್ಲಿಟ್ಟರು. ಕೆ.ಇ.ಬಿ. ಯಾವ ಕಾರಣಕ್ಕಾಗಿ ಸಾಲ ಮಾಡಿತೋ ಆ ಕಾರಣಕ್ಕೆ ಬಳಕೆಯಾಗಿಲ್ಲ. ನಾನು ಹಿಂದೆ ಆಪಾದನೆ ಮಾಡಿದೆ. ಬರೀ 40 ಕೋಟಿ ರೂಪಾಯಿಗಳನ್ನು ಮಾತ್ರ ಬಳಕೆ ಮಾಡಿ ಉಳಿದ ಹಣವನ್ನು ಖಜಾನೆಯಲ್ಲಿಟ್ಟಿದ್ದೀರಲ್ಲ. ಆ ಹಣಕ್ಕೆ ವಿದ್ಯುಚ್ಛಕ್ತಿ ಮಂಡಳಿ ಬಡ್ಡಿ ತುಂಬಿಸಬೇಕು. ಮೊನ್ನೆ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ ವಿದ್ಯುಚ್ಛಕ್ತಿ ಮಂಡಳಿ 190 ಕೋಟಿ ರೂಪಾಯಿಗಳನ್ನು ಮಾತ್ರ ಬಳಕೆ ಮಾಡಿಕೊಂಡಿದೆಯೆಂದು ಹೇಳಿದರು. ಹಾಗಾದರೆ ಉಳಿದ 110 ಕೋಟಿ ರೂಪಾಯಿಗಳನ್ನು ಸರ್ಕಾರ ಬಳಕೆ ಮಾಡಿಕೊಂಡಿತೇ? ಎಂಬುದನ್ನು ಹೇಳಬೇಕು? ವಿದ್ಯುಚ್ಛಕ್ತಿ ಮಂಡಳಿಯಿಂದ ಪಡೆದ ಹಣಕ್ಕೆ

ಸರ್ಕಾರ ಗ್ಯಾರಂಟಿ ಕೊಡುತ್ತದೆ. ನಾನು ಗ್ಯಾರಂಟಿಯಾಗಿ ನಿಮಗೆ ಸಾಲ ಕೊಡಿಸುತ್ತೇನೆ, ಹಾಗೆಯೇ ನೀವು ಗ್ಯಾರಂಟಿಯಾಗಿ ಸಾಲ ಕೊಡಿಸಿ ಎನ್ನುವ ರೀತಿಯಲ್ಲಿ ಉಪಯೋಗಿಸಿಕೊಂಡಿರುವುದೆಲ್ಲವೂ ನೀವೇ. ಇದಕ್ಕೆ ಗ್ಯಾರಂಟಿ ಯಾರಿದ್ದರೋ the entire amount guarantor ಸರ್ಕಾರ ಸಾಲ ತೆಗೆದುಕೊಂಡಿದೆ. This is all my concern. ಕೆ.ಇ.ಬಿ. ಯನ್ನು ಏತಕ್ಕೆ ಬಳಸಿಕೊಳ್ಳುತ್ತೀರಿ? ನಾವು ಪಾಪರ್ ಆಗಿದ್ದೇವೆ, ಅದಕ್ಕಾಗಿ 200 ಕೋಟಿ ರೂಪಾಯಿಗಳ ಸಾಲ ಬೇಕು, ಎಂದು ಕೇಳಿದ್ದರೆ ಪಿಯರ್‌ಲೆಸ್ ಕಂಪನಿಯವರು ಕೊಡುತ್ತಿದ್ದದ್ದು. ಕೆ.ಇ.ಬಿ.ಗೆ ಸಾಲ ಕೊಡುವವರು ಸರ್ಕಾರಕ್ಕೆ ಸಾಲ ಕೊಡುವುದಿಲ್ಲ ಎಂದು ಹೇಳುತ್ತಿದ್ದರೆ? ಕೊಡಬಹುದಿತ್ತು. ಮ್ಯೆಕಿಂಟೋಷ್ ಕಂಪ್ಯೂಟರ್ ಹಗರಣದಲ್ಲಿ ಕಂಪ್ಯೂಟರ್‌ಗಳನ್ನು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದೆ 2 ಗಂಟೆಗೆ ಬಂದು, ಎರಡೂವರೆ ಗಂಟೆಗೆ ಪ್ರಸ್ತಾವನೆಗೆ ಅನುಮೋದನೆ ದೊರಕಿ ಮೂರು ಮುಕ್ಕಾಲು ಗಂಟೆಗೆ ಖಜಾನೆಗೆ ಹೋಗಿ 3.50 ನಿಮಿಷಕ್ಕೆ ಕ್ಯಾಷ್ ಆಯಿತು ಎಂದು ಹೇಳಿದ್ದೆವಲ್ಲ, ಅದಕ್ಕಿಂತಲೂ ವೇಗವಾಗಿ ಇದು ಆಗಿದೆ. ಇದರ ಕುರಿತು ತನಿಖೆಯಾಗಬೇಕೇ? ಬೇಡವೇ? I only want to know how KEB could allow ವಿದ್ಯುಚ್ಛಕ್ತಿ ಮಂಡಳಿ ಪಡೆದಂಥ 200 ಕೋಟಿ ರೂಪಾಯಿ ಹಣವನ್ನು ಸರ್ಕಾರಕ್ಕೆ ಸಾಲವಾಗಿ ಕೊಟ್ಟಿದ್ದರೆ? ಈ ಪ್ರಶ್ನೆಗೆ ಉತ್ತರ ನನಗೆ ಬೇಕು. ಸರ್ಕಾರಕ್ಕೆ ವಿದ್ಯುಚ್ಛಕ್ತಿ ಮಂಡಳಿ ಸಾಲ ಕೊಡುವಂಥ ಉತ್ತಮ ಸ್ಥಿತಿಯಲ್ಲಿದ್ದರೆ ಇನ್ನೂ ಉತ್ತಮ ಸ್ಥಿತಿಗೆ ಬರಲಿ, ಸರ್ಕಾರಕ್ಕೆ ಹೆಚ್ಚು ಹಣ ಕೊಡಲೆಂದು ಪ್ರಾರ್ಥಿಸುತ್ತೇನೆ. ಆದುದರಿಂದ, ವಿದ್ಯುನ್ಮಂಡಲಿಗೆ ವಿದ್ಯುಚ್ಛಕ್ತಿ ಉತ್ಪಾದನೆಗಾಗಿ, ವಿದ್ಯುಚ್ಛಕ್ತಿ ಮಂಡಳಿಯ ಶ್ರೇಯಸ್ಸಿಗಾಗಿ ತೆಗೆದುಕೊಂಡು ಬಂದ ಹಣ ಅಲ್ಲವೆಂದು ನನ್ನ ಆಪಾದನೆ. ಅದರಲ್ಲಿ ಏನೇನೋ ಗೋಲ್‌ಮಾಲ್ ನಡೆದಿದೆಯೆಂದು ಹೇಳುವುದಕ್ಕೆ ಹೋಗುವುದಿಲ್ಲ. ಅಷ್ಟಕ್ಕೆ ಬಿಟ್ಟು ಬಿಡುತ್ತೇನೆ. ಇದೊಂದು ಭಾಗ. ಇದಕ್ಕಿಂತ ಹೆಚ್ಚು ವಿಚಾರಗಳನ್ನು ವಿದ್ಯುಚ್ಛಕ್ತಿ ಮಂಡಳಿಗೆ ಸಂಬಂಧಿಸಿದಂತೆ ಚರ್ಚಿಸುವುದಕ್ಕೆ ಹೋಗುವುದಿಲ್ಲ. ಆದುದರಿಂದ, ಶಾಸನಬಾಹಿರವಾದ ಈ ಕ್ರಮವನ್ನು ಅನುಸರಿಸಬೇಕಾದ ಅಗತ್ಯವೇನಿತ್ತು? ನಾವು ಇದಕ್ಕೆ ಪರವಾನಗಿ ಕೊಡುವುದಿಲ್ಲವೆಂದು ಹೇಳುತ್ತಿದ್ದೇವೆಯೇ? ಹಣ ಬೇಕಾದರೆ 600 ಕೋಟಿ ರೂಪಾಯಿಯಲ್ಲ 1000ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಿ ಬೇಡವೆಂದು ಹೇಳುವುದಿಲ್ಲ. ಆದರೆ, ಶಾಸನಸಭೆಗೆ ಈ ವಿಷಯವನ್ನು ಮುಂಚಿತವಾಗಿ ತಿಳಿಸದೆ, ಅಧಿಕಾರಗಳನ್ನು ತೆಗೆದುಕೊಳ್ಳದೆ ಸಾಲ ಮಾಡುವಂಥ ಪರಿಸ್ಥಿತಿಗೆ ಏಕೆ ಹೋದಿರಿ? ಇದರ ಕುರಿತ ವಿವರ ನನಗೆ ಬೇಕು. ನಾನು ಬೇರೆ ವಿಚಾರಗಳನ್ನು ಪ್ರಸ್ತಾಪಿಸುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಒಂದು ಮಾತು ಹೇಳುತ್ತಾರೆ. ಏನೆಂದರೆ ನಮ್ಮ ಯೋಜನಾ ಗಾತ್ರ ಯಾವುದೇ ಕಾರಣಕ್ಕೂ ಕಡಿಮೆಯಾಗಿಲ್ಲ. ಕಡಿಮೆಯಾಗುವುದಿಲ್ಲ. ಆರ್ಥಿಕ ಸ್ಥಿತಿ ತುಂಬಾ ಚೆನ್ನಾಗಿದೆ ಎಂದು ಇದು ನಿಜವಾಗಿದ್ದರೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಭಿನಂದನೆಗಳನ್ನು ಸಲ್ಲಿಸಬೇಕಾದಂಥ ಅಗತ್ಯವೂ ಇದೆ. ಈ ಕುರಿತು ಶಾಸನಸಭೆಯಲ್ಲಿ ಒಂದು ಠರಾವು ಮಾಡಿ ನಿಮ್ಮ ಸರ್ಕಾರಕ್ಕೆ ಕೊಡುವುದಾದರೆ

ಅಭ್ಯಂತರವೇನೂ ಇಲ್ಲ. ಆದರೆ, ವಸ್ತು ಸ್ಥಿತಿ ಏನು? ತಾವು ಹೇಳಿರತಕ್ಕಂಥ 1993-94ರ ಆಯ-ವ್ಯಯಕ್ಕಷ್ಟೆ ಅಥವಾ ವಾರ್ಷಿಕ ಯೋಜನೆಗಷ್ಟೆ ಸೀಮಿತವಾಗಿ ನಾನು ಎರಡು ಮಾತುಗಳನ್ನು ಹೇಳುತ್ತೇನೆ. 1993-94ರ ವಾರ್ಷಿಕ ಯೋಜನಾ ಗಾತ್ರ 3,025 ಕೋಟಿ ರೂಪಾಯಿಗಳು.

ಏಕೆಂದರೆ ಒಂದು ರಾಜ್ಯದ ಪ್ರಗತಿಯ ಕೈಗನ್ನಡಿ ಯೋಜನೆಯ ಗಾತ್ರದಲ್ಲಿಲ್ಲ, ಯೋಜನೆಯ ಅನುಷ್ಠಾನದಲ್ಲಿದೆ. ಒಂದು ರಾಜ್ಯದ ಪ್ರಗತಿಗೆ ಅದು ಕೈಗನ್ನಡಿಯಾಗಿರಬೇಕು. ಯೋಜನೆಯ ಗಾತ್ರವನ್ನು ಕಡಿಮೆ ಮಾಡಿದ್ದಾರೆಂದು ನಾನೇನು ಅಸಹ್ಯ ಪಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಸಾಮರ್ಥ್ಯ ಎಷ್ಟು ಇದೆಯೋ ಅಷ್ಟನ್ನು ಖರ್ಚು ಮಾಡುತ್ತೇವೆಂದು ಹೇಳಬಹುದು. ಬಹಳ ದೊಡ್ಡದಾಗಿ ಫಿಗರ್ಸ್‌ನ್ನು ಕೊಟ್ಟುಬಿಡುತ್ತೇವೆ. ನಮ್ಮ ಯೋಜನಾ ಇಲಾಖೆಯು 1993-94ಕ್ಕೆ ಹಮ್ಮಿಕೊಂಡಿರುವ ಯೋಜನೆಯ ಗಾತ್ರ 3025 ಕೋಟಿ ರೂಪಾಯಿಗಳು. 1994-95ಕ್ಕೆ ಯೋಜನೆಯ ಗಾತ್ರ 3275 ಕೋಟಿ ರೂಪಾಯಿಗಳು. ನಾನು ಹಣಕಾಸಿನ ಕಮೀಷನ್‌ರ್‌ರವರು ಅಧಿಕೃತವಾಗಿ ಬರೆದಿರುವ ಪತ್ರದ ಕೊನೆಯ ಪ್ಯಾರಾದಲ್ಲಿ "The approval of the cabinet is sought to reduce the Plan Outlay to Rs. 2,250/- crores during the current financial year" ನಮ್ಮ ರಿಸೋರ್ಸ್ ಮೊಬಲೈಜೆಷನ್ಸ್ ಶಕ್ತಿ ಕಡಿಮೆ ಇದೆ Finance Department has to look in-to all the aspects. ಆದ್ದರಿಂದ ನಿಮ್ಮ ಪ್ರೊಜೆಕ್ಷನ್ 3275 ಕೋಟಿ ರೂಪಾಯಿಗಳಿಗೆ ತಲುಪಲು ಸಾಧ್ಯವಿಲ್ಲ. ಆದ್ದರಿಂದ ಅದನ್ನು 2250 ಕೋಟಿ ರೂಪಾಯಿಗಳಿಗೆ 1994-95ರ ಯೋಜನಾ ಗಾತ್ರವನ್ನು ಕಡಿಮೆ ಮಾಡಬೇಕು ಎನ್ನತಕ್ಕ ಸಂಗತಿ, ಮಾಹಿತಿ, ವರದಿ ಇದೆ. ಅದಕ್ಕೆ ಪೂರ್ವಭಾವಿಯಾಗಿ 1993-94ಕ್ಕೆ ಆಗಿನ ಯೋಜನೆಯ ಗಾತ್ರ 3025 ಕೋಟಿ ಇತ್ತು, ಇದರಲ್ಲಿ 1018 ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆ ಆದುದರಿಂದ ಅಷ್ಟರಮಟ್ಟಿಗೆ ಯೋಜನೆಯ ಗಾತ್ರವನ್ನು ಇಳಿಸಿ ಎಂದು ಹೇಳಿದರು. ನನ್ನ ದೃಷ್ಟಿಯಲ್ಲಿ ಅದನ್ನು ಇಳಿಸಿರಲೇಬೇಕು. ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಕಡಿಮೆಯಾಗುತ್ತದೆ ಎನ್ನುವ ಬಗ್ಗೆ ಹೇಳುವುದಾದರೆ State Taxes 500 crores, ಕೊರತೆ ಬೀಳುತ್ತದೆ, non-tax revenue 135 crores, ಕೊರತೆ ಬೀಳುತ್ತದೆ, re-imbursement for externally aided projects 110 crores ಕಡಿಮೆ ಬೀಳುತ್ತದೆ, small savings 112 crores, ಕಡಿಮೆ ಬೀಳುತ್ತದೆ, treasury bill holdings 60 crores, ಕಡಿಮೆ ಬೀಳುತ್ತದೆ,additional resources mobilisation 50 crores ಕಡಿಮೆ ಬೀಳುತ್ತದೆ,

ಈ ರೀತಿಯಾಗಿ 1007 ಕೋಟಿ ರೂಪಾಯಿ ಕಡಿಮೆ ಬರುತ್ತದೆ. ಮತ್ತು ನಾವು ಬಜೆಟ್‌ನಲ್ಲಿ 96 ಕೋಟಿ ರೂಪಾಯಿಗಳ ಕೊರತೆ ಇದೆ. ಜೊತೆಗೆ ಎರಡು ಬಾಬಿನಲ್ಲಿ ಅವುಗಳೆಂದರೆ provident Fund 20 crores. Contribution of public

sector enterprises 65 crores ಕಡಿಮೆ ಬರಬಹುದು. ಉಳಿದಂಥ 1018 ಕೋಟಿ ಕಡಿಮೆ ಬರುತ್ತದೆ ಎನ್ನತಕ್ಕ ಮಾತನ್ನು ಹೇಳಿದರು. ಯಾವ್ಯಾವ ಬಾಬಿನಲ್ಲಿ ಕಡಿಮೆ ಬರುತ್ತದೆ ಎನ್ನತಕ್ಕ ಫಿಗರ್ಸ್‌ಗಳನ್ನು ಇಂಡಿಕೇಟ್ ಮಾಡುತ್ತಾರೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 1 993-94ರ ಮೊದಲು 2888 ಕೋಟಿ ಇತ್ತು. ರಿವೈಸ್ಡ್ 1993-94ರಲ್ಲಿ 2562 ಕೋಟಿ ಕಡಿಮೆಯಾಗಿದ್ದು 326 ಕೋಟಿ ರೂಪಾಯಿ. ಎಕ್ಸೈಜ್‌ನಲ್ಲಿ 1993-94ರಲ್ಲಿ ಮೊದಲು 702 ಕೋಟಿ ಅಂದಾಜು ಇತ್ತು, ರಿವೈಸ್ಡ್ 650 ಕೋಟಿ, 54 ಕೋಟಿ ಕಡಿಮೆಯಾಯಿತು. Motor vehicles tax projected 273 crores. ಷಾರ್ಟ್‌ಪಾಲ್ ಅಂದರೆ 93-94ರಲ್ಲಿ ರಿವೈಜ್ಡ್ ಎಸ್ಟಿಮೇಟ್ 223 ಕೋಟಿರೂಪಾಯಿಗಳು. ರೆಪಿಸಿಟ್ 50 ಕೋಟಿ ರೂಪಾಯಿಗಳು. ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್ 300 ಕೋಟಿ ರೂ.ಗಳನ್ನು ಅಂದಾಜು ಮಾಡಿದ್ದೀರಿ, 228 ಕೋಟಿ ರೂ.ಗಳು ಬಂದಿವೆ. 72 ಕೋಟಿ ರೂ.ಗಳು ಡೆಫಿಸಿಟ್ ಬಂದಿದೆ. ನಾನು ಹೇಳಿದಂತೆ, ಸೆಲ್ಸ್ ಟ್ಯಾಕ್ಸ್‌ನಲ್ಲಿದ್ದಂತೆ ಅದು ಈ ಬಾಬಿನಲ್ಲಿ ಕಡಿಮೆ ಬರುತ್ತದೆ ಕಡಿಮೆ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಉಳಿದದ್ದು 135 ಕೋಟಿ ರೂ.ಗಳ ಒಂದು ಲೆಕ್ಕ ಅದು ನಾನ್ ಟ್ಯಾಕ್ಸ್ ರೆವಿನ್ಯೂ 93-94ಕ್ಕೆ ಬಡ್ಡಿ 442 ಕೋಟಿ ರೂ.ಗಳು ಬರಬೇಕಾಗಿತ್ತು. ಅದು 427 ಕೋಟಿ ರೂ.ಗಳು ಆಯಿತ ಅಂದರೆ 15 ಕೋಟಿ ರೂ.ಗಳು ಷಾರ್ಟ್‌ಪಾಲ್ ಆಯಿತು. ಫಾರೆಸ್ಟ್‌ನಲ್ಲಿ 116 ಕೋಟಿ ರೂಪಾಯಿಗಳು ಬರಬೇಕಾಗಿತ್ತು. 76 ಕೋಟಿ ರೂ.ಗಳು ಬಂತು. 40 ಕೋಟಿ ರೂ.ಗಳು ಷಾರ್ಟ್‌ಫಾಲ್ ಆಯಿತು. ನೀರಾವರಿಯಲ್ಲಿ 45 ಕೋಟಿ ರೂ.ಗಳು ಬರಬೇಕಾಗಿತ್ತು. 14 ಕೋಟಿ ರೂ.ಗಳ ವರಮಾನ ಬಂತು. 20 ಕೋಟಿ ರೂ.ಗಳು ಕಡಿಮೆಯಾಯಿತು. ಕೈಗಾರಿಕೆಯಲ್ಲಿ 45 ಎಸ್ಟಿಮೇಟ್ ಮಾಡಿದರು ರಿವೈಜ್ ಎಸ್ಟಿಮೇಟ್‌ನಲ್ಲಿ 25ಕೋಟಿ ರೂ. ಗಳು ಆಯಿತು. ಅಲ್ಲಿ 20 ಕೊಟಿ ರೂ. ಗಳು ಷಾರ್ಟ್‌ಫಾಲ್ ಆಯಿತು. ಹೀಗೆ ನಾನ್ ಟ್ಯಾಕ್ಸ್ ರೆವೆನ್ಯೂನಲ್ಲಿ 1 35ಕೋಟಿ. ರೂ.ಗಳು ಕಡಿಮೆಯಾಗುತ್ತದೆ. ಟ್ಯಾಕ್ಸೇಷನ್ ಬಾಬಿನಲ್ಲಿ 500 ಕೋಟಿ ರು.ಗಳು ಕಡಿಮೆ ಆಗುತ್ತದೆ. ಆದುದರಿಂದ ನೀವು ಪ್ರಾಜೆಕ್ಟ್ ಮಾಡಿರುವಂತಹ ಮತ್ತು ಇದರ ಜೊತೆಗೆ ಕೇಂದ್ರಸರ್ಕಾರ ನಮ್ಮ ಯೋಜನೆಗಳಿಗೆ ಹಣವನ್ನು ಒದಗಿಸುವಾಗ ನಮ್ಮ ಪರ್ಫಾಮೆನ್ಸ್ ಮೇಲೆ ಹಣವನ್ನು ಒದಗಿಸುತ್ತಾರೆ. ನಮ್ಮ ಪರ್ಫಾರ್ಮೆನ್ಸ್ ಎಷ್ಟು ಕಡಿಮೆಯಾಗಿದೆಯೋ ಅಷ್ಟು ಕೇಂದ್ರ ಸರ್ಕಾರದಿಂದ ಬರುವ ಹಣವು ಕಡಿಮೆಯಾಗುತ್ತದೆ. ಹಾಗಾಗಿ ಯೋಜನಾಗಾತ್ರದಲ್ಲಿ ಜನರಿಗೆ ಏಕೆ ಮೋಸ ಮಾಡಬೇಕು. 1993-94ರಲ್ಲಿ 3025ಕೋಟಿ ರೂಗಳು ಮತ್ತು 1994-95ರಲ್ಲಿ 3275ಕೋಟಿ ರೂ.ಗಳ ಯೋಜನಾ ಗಾತ್ರವನ್ನು ಈ ದೇಶದ ಜನರಿಗೆ ಕೊಟ್ಟಿದ್ದೀರಿ. ಪರ್ಫಾರ್ಮೆನ್ಸ್ ಅನ್ನು ನಿಮ್ಮ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು, ನಾನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗುವುದಿಲ್ಲ. ಏಕೆಂದರೆ ನಮ್ಮ ರಾಜ್ಯದ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೂ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೂ ಕೊ-ಆರ್ಡಿನೇಷನ್ ಇಲ್ಲ. ಯೋಜನಾ ಗಾತ್ರವನ್ನು ನಿರ್ಧರಿಸಬೇಕಾದಂಥ ಯೋಜನಾ ಇಲಾಖೆ ಏನಿದೆ, ಅದರೊಂದಿಗೆ ಸಂಪರ್ಕ ಇರುವುದಿಲ್ಲ.

ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಬೋರ್ಡ್ ಮಾಡಿದರು. ನವೆಂಬರ್ 16ನೇ ತಾರೀಖು ಮೀಟಿಂಗ್ ಮಾಡಿದರು. ಆಗ ಹೊಸ ಆಯಾಮವನ್ನು ಆಲೋಚನೆ ಮಾಡಿದ್ದಾರೆ. ಆ ಬೋರ್ಡಿನಿಂದ ಏನಾದರೂ ಒಳ್ಳೆಯ ಮಾಹಿತಿಗಳು ಯೋಜನೆಯ ದೃಷ್ಟಿಯಿಂದ ಸಿಗಬಹುದು. ನಾನು ಆಗಲೇ ಹೇಳಿದೆ, ಯೋಜನೆಯ ಅನುಸ್ಠಾನ, ಯೋಜನೆಗಳಿಗೆ ತೊಡಗಿಸುವಂತಹ ಹಣ, ಯೋಜನೆಯಿಂದ ಬರುವ ಫಲವೆ ಒಂದು ರಾಜ್ಯದ ಅಭಿವೃದ್ಧಿಯ ಕೈಗನ್ನಡಿಯಾಗುತ್ತದೆ. ಈ ದೇಶದ ಸ್ಥಿತಿ ಏನೆಂಬುದನ್ನು ಅಳತೆ ಮಾಡುವಂಥಾದ್ದು ನಾನು ಅದರ ವಿವರಗಳಿಗೆ ಹೋಗುವುದಿಲ್ಲ. ಯೋಜನಾ ಗಾತ್ರದಲ್ಲಿ ಒಂದು ರೂಪಾಯಿಯೂ ಕಡಿಮೆಯಾಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಸಂಪನ್ಮೂಲಗಳ ಕೊರತೆಯಾಗುವುದಿಲ್ಲ, ನಾವು ಹಮ್ಮಿಕೊಂಡಿರುವಂತಹ 1993-94ರ ಯೋಜನಾ ಗಾತ್ರದಲ್ಲಿ 3025ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. 1994-95ರಲ್ಲಿ 3275 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿರುವಂಥಾದ್ದು ಮತ್ತು ನಾನು ಕೊಟ್ಟಿರುವಂತಹ ಫೀಗರ್ಸ್ ಇವರು ಸರಿಯಲ್ಲ ಎಂದು ಹೇಳಿದರೆ ಆಮೇಲೆ ನಾನು ದಾಖಲೆಗಳನ್ನು ಅವರಿಗೆ ಒದಗಿಸುತ್ತೇನೆ. ಅಲ್ಲಿಯವರೆಗೆ ನಾನು ಯಾವ ದಾಖಲೆಗಳನ್ನು ಆಧರಿಸಿ ಈ ಸಭೆಯಲ್ಲಿ ಹೇಳಿದ್ದೇನೆ ಅದನ್ನು ಅಗತ್ಯ ಬಿದ್ದರೆ ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡುತ್ತೇನೆ. ನಾನು ದಾಖಲೆಗಳಿಲ್ಲದೆ ಸುಮ್ಮನೆ ಏನೋ ಮಾತನಾಡುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ತಾವು ಹಮ್ಮಿಕೊಂಡಿರುವ ಕಾರ್ಯ, ಮತ್ತು ಕೆಲಸ ಕನಿಷ್ಟ ಈ ಶಾಸನಸಭೆಗಾದರೂ ಗೊತ್ತಾಗಬೇಕು ಎನ್ನುವ ಸಭೆ ಇಚ್ಛೆಯಿಂದ ಈ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಂದ ಈ ಎರಡು ವಿಚಾರಗಳಿಗೂ ಉತ್ತರವನ್ನು ನಿರೀಕ್ಷಿಸುತ್ತೇನೆ. ಈ ಎರಡು ವಿಚಾರಗಳು ಮಾನ್ಯ ಮುಖ್ಯಮಂತ್ರಿಯವರಿಗೆ ಏತಕ್ಕೆ ಬರುತ್ತದೆ? ಇಲಾಖೆ ಕೆ.ಇ.ಬಿ.ಯಾದರೂ ಇದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟಿರುವುದು. ಸರ್ಕಾರ ಶೇ.16 ಪರ್ಸೆಂಟ್‌ನಂತೆ ಬಡ್ಡಿಗೆ ಒಪ್ಪಿಗೆ ಕೊಟ್ಟಿರುವುದು. 200 ಕೋಟಿ ರೂಪಾಯಿಗಳನ್ನು ಪಿಯರ್‌ಲೆಸ್ ಕಂಪನಿಯಿಂದ ಪಡೆಯಲು ಸರ್ಕಾರ ಅಂದರೆ ಅರ್ಥ ಮಂತ್ರಿಗಳು ಅರ್ಥಾತ್ ಶ್ರೀಮಾನ್ ವೀರಪ್ಪ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿಗಳು, ಸಭಾನಾಯಕರಾಗಿ ಜವಾಬ್ದಾರಿಯನ್ನು ಹೊತ್ತು ನೀವುಗಳು ಒಪ್ಪಿರುವುದು. ಈ ನಿಯಮಗಳನ್ನು ಮೀರಿ ಕೊಡುವಂತಹ ಅನಿವಾರ್ಯ ಏನಿತ್ತು ಮತ್ತು ಆ ತಾರೀಖುಗಳನ್ನು ನಾನು ಇಲ್ಲಿ ಹೇಳಿದ್ದೇನೆ, ದಯಮಾಡಿ ಇದಕ್ಕೆ ಒಂದು ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

* ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಸಮಯದ ಅಭಾವದಿಂದ ನಾನು ಕೇವಲ ಒಂದೆರಡು ವಿಷಯದ ಮೇಲೆ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಚಂದ್ರೇಗೌಡರು ರಾಜ್ಯದ ಹಣಕಾಸಿನ ಬಗ್ಗೆ ಮತ್ತು ಯೋಜನಾ

ಗಾತ್ರ ಯಾವ ಪ್ರಕಾರ ಕಡಿಮೆಯಾಗಿದೆ ಅಥವಾ ಆ ಗುರಿ ಕೇವಲ ಅಂಬಿಷಿಯಸ್ ಟಾರ್ಗೆಟ್ ಆಗಿ ಉಳಿದಿದೆಯೇ ವಿನಹ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ಬಹಳ ಚೆನ್ನಾಗಿ ವಿವರವಾಗಿ ಹೇಳಿದ್ದಾರೆ. ಇವತ್ತು ನಾವು ಈ ಆಯವ್ಯಯ ಪಾವಿತ್ರ್ಯತೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವ ಒಂದು ಪರಿಸ್ಥಿತಿ ಬಂದಿದೆ. ಈ ಒಂದು ಮುಂಗಡ ಪತ್ರ ಇಲ್ಲಿ ಮಂಡನೆಯಾದಾಗ ಒಂದು ಕಡೆ ರಿಸೋರ್ಸಸ್, ಇನ್ನೊಂದು ಕಡೆ ಸರ್ಕಾರದ ಹಲವಾರು ಕಾರ್ಯಕ್ರಮ ಮತ್ತು ಅದರ ಖರ್ಚು. ಎರಡು ಒಂದೇ ಕಡೆ ಇರುತ್ತದೆ. ಹಾಗಾಗಿ ಒಮ್ಮೆ ಮುಂಗಡ ಪತ್ರವನ್ನು ಈ ಮನೆಯಲ್ಲಿ ಮಂಡನೆ ಮಾಡಿದಾಗ, ಒಂದು ವೇಳೆ ಹೆಚ್ಚಿನ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಇಚ್ಛೆ ಇದ್ದರೆ ಆ ಪ್ರಕಾರ ರಿಸೋರ್ಸ್ ಮೊಬಲೈಸ್ ಆಗಬೇಕಾಗುತ್ತದೆ. ವಿಥೌಟ್ ರಿಸೋರ್ಸ್ ಮೊಬಿಲೈಸೇಷನ್ ಯಾವ ಕಾರ್ಯಕ್ರಮನ್ನು ಯಾವ ಸರ್ಕಾರಕ್ಕೂ ತೆಗೆದುಕೊಳ್ಳುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ಆತಂಕದ ಕಾರ್ಯಕ್ರಮ ತೆಗೆದುಕೊಂಡರೆ ನಾವು ಹೇಳಬೇಕಾಗುತ್ತದೆ ಇದು ಎಲೆಕ್ಷನ್ ಗಿಮಿಕ್ ಎಂದು ತಾವು ಮಾಡುತ್ತಿದ್ದೀರಿ. ಏಕೆಂದರೆ ಈ ವರ್ಷ ಚುನಾವಣೆ ವರ್ಷ ಇದ್ದ ಕಾರಣ ಸರ್ಕಾರ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು 94-95ರ ಆಯವ್ಯಯ ಪತ್ರವನ್ನು ಈಗಾಗಲೇ ಮಂಡನೆ ಮಾಡಿದ್ದಾರೆ. ಈ ಬಜೆಟ್ ಪ್ರಕಾರ ನಮ್ಮ ರೆವಿನ್ಯೂ ಅಕೌಂಟ್‌ನಲ್ಲಿ ನಮ್ಮ ರಿಸೀವ್ಸ್ ಟೋಟಲ್ 8168.36 ಕೋಟಿ ಮತ್ತು ಎಕ್ಸ್‌ಪೆಂಡಿಚರ್ 7948.70 ಕೋಟಿ ರೂಪಾಯಿಗಳು. ಇಲ್ಲಿ ಸರ್‌ಪ್ಲಸ್ 210.94 ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ. ಕ್ಯಾಪಿಟಲ್ ಅಕೌಂಟ್‌ನಲ್ಲಿ ರಿಸೋರ್ಸಸ್ 1728ಕೋಟಿ 33 ಲಕ್ಷ ರೂಪಾಯಿ ಮತ್ತು ಡಿಸ್‌ಪರ್ಸ್‌ಮೆಂಟ್ 2150 ಕೋಟಿ ರೂಪಾಯಿ. ಎಂದರೆ ಡೆಫಿಸಿಟ್ 422ಕೋಟಿ ರೂಪಾಯಿ ಇದೆ. ಇವತ್ತು ರಾಜ್ಯದ ಯಾವ ಯೋಜನೆಯನ್ನು ತಾನು ಮಂಜೂರು ಮಾಡಿದರೂ ಸಹ ಇದಕ್ಕೆ ಇತಿಮಿತಿ ಇರಬೇಕಾಗುತ್ತದೆ. ಈ ಮುಂಗಡ ಪತ್ರದಲ್ಲಿ ಹಲವಾರು ಕಾರ್ಯಕ್ರಮ ಗಳನ್ನು ಮಂಜೂರು ಮಾಡಿದ್ದಾರೆ. ನೀರಾವರಿ ಬಗ್ಗೆ ಹೇಳಿದ್ದಾರೆ, ವಿದ್ಯುಚ್ಛಕ್ತಿ ಬಗ್ಗೆ ಹೇಳಿದ್ದಾರೆ, ನಿವೇಶನ ಹಂಚಿಕೆ ಬಗ್ಗೆ ಹೇಳಿದ್ದಾರೆ, ಮನೆ ಕಟ್ಟುವ ಬಗ್ಗೆ ಹೇಳಿದ್ದಾರೆ. ಆದುದರಿಂದ ಈ ಮುಂಗಡ ಪತ್ರದ ಪಾವಿತ್ರ್ಯತೆ ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಹೋಗಬೇಕಾದರೆ ಇದಕ್ಕೆ ಅಂಟಿಕೊಂಡೆ ಹೋಗಬೇಕಾಗುತ್ತದೆ. ಇದು ಬಿಟ್ಟುಹೋದರೆ ಒಂದು ವೇಳೆ ಆಪಾದನೆ ಮಾಡದೇ, ಇದು ಒಂದು ಚುನಾವಣೆ ಗಿಮಿಕ್ ಮಾಡಿದಿರಿ ಎಂದು ಹೇಳಿದರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕಾಗುತ್ತದೆ.

Sri M. Veerappa Moily : It is so simple as this. ಈಗ ರೆವೆನ್ಯೂ ಸರ್‌ಪ್ಲಸ್ ಇದ್ದ ಒಂದು ಬಜೆಟ್ ಎಕಾನಮಿ is it sound or bad? ನೀವೇ ಹೇಳಿದ್ದೀರಿ. ಆದುದರಿಂದ ಯಾವುದು ನಿಮಗೆ ಅನುಕೂಲ ಇದೆ ಅದನ್ನು ತೆಗೆದುಕೊಳ್ಳಿ. ಯಾವುದು ಅನಾನುಕೂಲ ಇದೆ ಅದನ್ನೇ ತೆಗೆದುಕೊಂಡರೆ ಕಷ್ಟವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮೊದಲು ನಾನು ಮುಗಿಸುತ್ತೇನೆ, ನಂತರ ನೀವು ಹೇಳಿ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದಿರಿ. ನಿಜ., ರೆವೆನ್ಯೂ ಸರ್‌ಪ್ಲಸ್ ಎಂದರೆ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿ ಇದೆ ಎಂದು ಅದರ ಒಂದು ಅರ್ಥ. ಆದರೆ ನಿಜ ಪರಿಸ್ಥಿತಿ ಇದೇ ಏನು? ನಿಮ್ಮ ಕಡೆಯಿಂದ ನನಗೆ ಉತ್ತರ ಬೇಕಾಗಿದೆ. ಸ್ಟೇಟ್ ಟ್ಯಾಕ್ಸಸ್ 4882 ಕೋಟಿ ರೂಪಾಯಿ ಮೊಬಲೈಸ್ ಮಾಡುತ್ತೇವೆ ಎಂದು ನೀವು ಹೇಳಿದಿರಿ. This is subject to ifs and nots.

ನಿಮ್ಮ ರೆವೆನ್ಯೂ ಇದೆಯಲ್ಲ that is subject to ifs and nots. ಈಗಾಗಲೇ ಚಂದ್ರೇಗೌಡರು ಹೇಳಿದರು, ನಮ್ಮ ಇಲಾಖೆಯಿಂದ ಏನು ಪತ್ರ ಹೋಗಿದೆ ಆ ಪ್ರಕಾರ ತಾವು ಒಪ್ಪಿಕೊಂಡಿರಿ ಇವತ್ತು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ, ಎಕ್ಸೈಜ್‌ನಲ್ಲಿ ಸ್ಟಾಂಪ್ ರೆಜಿಸ್ಟ್ರೇಷನ್‌ನಲ್ಲಿ ನಾವು ರಿಸೋರ್ಸ್ ಮೊಬಿಲೈಜ್ ಮಾಡಲಿಕ್ಕೆ ನಮ್ಮ ಟಾರ್‌ಗೆಟ್ fulfil ಮಾಡಲ್ಲಿಕ್ಕೆ ಸಾಧ್ಯವಿಲ್ಲವೆಂದು ತಾವೇ ಒಪ್ಪಿಕೊಂಡಿರಿ. ರೆವಿನ್ಯೂ ಸರ್‌ಪ್ಲಸ್ ಯಾವಾಗ ನಾವು ಮಾನ್ಯ ಮುಖ್ಯಮಂತ್ರಿಗಳ ಎದುರು ಬೆನ್ನು ಚಪ್ಪರಿಸಬಹುದು ಇಷ್ಟು ಟಾರ್‌ಗೆಟ್ ರೀಚ್ ಆದರೆ, ಆದರೆ ಇದು ಎಲ್ಲಾ ಎಂಬಿಷಿಯಸ್ ಟಾರ್‌ಗೆಟ್ ಈ ಟಾರ್‌ಗೆಟ್ ರೀಚ್ ಮಾಡಲಿಕ್ಕೆ ಸಾಧ್ಯವಿಲ್ಲ ಈಗಾಗಲೇ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ಈಗ ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಬೇಕು, ಇವರು ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಚೆನ್ನಾಗಿ ಇದೆ. ನಾವು ಹೇಳಿದ್ದೇವೆ. ಗೌರ್‍ನಮೆಂಟ್ ಬ್ಯಾಂಕ್‌ರಪ್ಟ್ ಆಗಿದೆ ಸರ್ಕಾರದಲ್ಲಿ ಹಣ ಸಂಬಳ ಕೊಡಲ್ಲಿಕ್ಕೆ ಹಣ ಇಲ್ಲ ಎಂದು ಹೇಳಿದ್ದೇವೆ ನಿನ್ನೆ ನಾನು ಒಂದು ಪತ್ರಿಕೆಯಲ್ಲಿ ನೋಡಿದೆ, ಯಾವುದೋ ಮೆಟ್ರೋ ಪೊಲೀಟನ್‌ಕೋರ್ಟ್ ಬೆಂಗಳೂರಿನಲ್ಲಿ 40 ಸಾವಿರ ರೂಪಾಯಿ ಎಲೆಕ್ಟ್ರಿಸಿಟಿ ಚಾರ್ಜ್ ತುಂಬಲಿಲ್ಲ ಎಂದು ಕೆಇಬಿಯವರು ಡಿಸ್‌ಕನೆಕ್ಟ್ ಮಾಡಿದ್ದಾರೆ. ಸರ್ಕಾರ ಅವರ ಟ್ರೆಷರಿ ಬಿಲ್ ಅನರ್ ಮಾಡಿಲ್ಲ, ಅವರ ಸಂಬಳವಾಗಿಲ್ಲ, ಡಿಸ್‌ಕನೆಕ್ಟ್ ಆಗಿದೆ. ಹಲವಾರು ಕಡೆ ಮೆಡಿಕಲ್ ಬಿಲ್ಲು ರೀಎಂಬರ್ಸ್‌ಮೆಂಟ್ ಆಗುತ್ತಿಲ್ಲ. ಯಾವಾಗಲೂ ನಾವು ಹೇಳುತ್ತೇವೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ, ಸರ್ಕಾರ ಬ್ಯಾಂಕ್‌ರಪ್ಟ್ ಆಗಿದೆ. ಅವಾಗ ಮುಖ್ಯಮಂತ್ರಿಗಳು ಹೇಳುತ್ತಾರೆ ಇಲ್ಲ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ, ಮಾನ್ಯ ರಾಜಶೇಖರ ಮೂರ್ತಿಯವರ ಹಣಕಾಸಿನ ಸಚಿವರಾಗಿದ್ದಾಗ ಅವರು ಒಂದು ಸ್ಟೇಟ್‌ಮೆಂಟ್ ಮಾಡಿದರು. ಏನು ಮಾಡಿದರು ಅಂದರೆ ಅವರು ಅಧಿಕಾರ ಬಿಟ್ಟಾಗ ಆ ಸಮಯದಲ್ಲಿ ಅವರು ಹೇಳಿದರು 17-10-90 ರಲ್ಲಿ 142.78 ಕೋಟಿ ರೂಪಾಯಿಗಳನ್ನು ಟ್ರೆಷರಿಯಲ್ಲಿ ಬ್ಯಾಲೆನ್ಸ್ ಇಟ್ಟಿದ್ದೇನೆ ಮತ್ತು Bills pending in treasury only Rs.2.84 crores. ಅಂದರೆ ಒಂದು ಒಳ್ಳೆಯ ಹಣಕಾಸಿನ ಪರಿಸ್ಥಿತಿ ಆ ಸಮಯದಲ್ಲಿ ಇತ್ತು ಇದು ಎಲ್ಲರೂ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದಾಗ 20.11.92 ಸ್ಟೇಟ್‌ಮೆಂಟ್ ಏನು ಹೇಳಿದರು Balance

in R.B.I Rs. 4.53 crores ; pending bills in treasury Rs. 100.73 crores

ಅಂದರೆ ಯಾವಾಗ ವೀರಪ್ಪಮೊಯಿಲಿಯವರು ತನ್ನ ಕೈಯಲ್ಲಿ ಈ ನಾಡಿನ ಅಧಿಕಾರ ತೆಗೆದುಕೊಂಡರು ಅವಾಗ ಹಣಕಾಸಿನ ಪರಿಸ್ಥಿತಿ ಸರಿ ಇರಲಿಲ್ಲ. ಬಂಗಾರಪ್ಪನವರು ಅಧಿಕಾರ ಬಿಟ್ಟಾಗ 10 ಕೋಟಿ ಪೆಂಡಿಂಗ್ ಬಿಲ್ಸ್ ಇತ್ತು ಎಂದು ಹೇಳಿದರು. ಇವತ್ತು ಅವರು ನನಗೆ ಹೇಳಬೇಕಾಗಿದೆ ಇವತ್ತಿನ ಪರಿಸ್ಥಿತಿ ಏನು? ಎಷ್ಟು ಬಿಲ್ಸ್ ಪೆಂಡಿಂಗ್ ಇವೆ. ನನ್ನ ಮಾಹಿತಿ ಪ್ರಕಾರ ಫೆಬ್ರವರಿ 94ರ ತನಕ ಇರಿಗೇಷನ್ ಮತ್ತು ಪಿಡಬ್ಲ್ಯೂಡಿ ಬಿಲ್ ಫೇಮೆಂಟ್ ಆಗಿದ್ದಾವೆ. ಮಾರ್ಚ್ 90ರಿಂದ ನಾಲ್ಕು ವರ್ಷದಿಂದ ಪೇಮೆಂಟ್ಸ್ ಆಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಇದ್ದರೆ ಚೆನ್ನಾಗಿ ಇದೆ ಎಂದು ಹೇಳಬೇಕು. ಇಲ್ಲದಿದ್ದರೆ ಅದು ನಮಗೆ ಗೊತ್ತಾಗಬೇಕು. ಅದನ್ನು ವಿಶ್ವಾಸದಿಂದ ತೆಗೆದುಕೊಳ್ಳಬೇಕು ಒಂದು ವೇಳೆ ಸರಿ ಇಲ್ಲ ಅಂದರೆ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು ಫೆಂಡಿಂಗ್ ಬಿಲ್ಸ್ ಎಷ್ಟು? ನಮ್ಮ ಲೆಕ್ಕದ ಪ್ರಕಾರ ಕನಿಷ್ಟ 400 ರಿಂದ 500 ಕೋಟಿ ರೂಪಾಯಿ ಫೆಂಡಿಂಗ್ ಬಿಲ್ಸ್ ಇವೆ. ಇವತ್ತು ಎಲ್ಲಾ ಇಲಾಖೆಗಳಿಗೆ ಟ್ರೆಷರಿ ಬ್ಯಾನ್ ಇದೆ. ಯಾವ ಇಲಾಖೆಗಳಲ್ಲಿ ಅಡಾಲ್ಟ್ ಸ್ಕೂಲ್ಸ್ ಇದ್ದಾವೆ ಅದರಲ್ಲಿ ಸಂಬಳ ಆಗಿಲ್ಲ ,ಮೊನ್ನೆ ಒಟ್ಟು ಆರು ತಿಂಗಳದ್ದು ಆಗಿದೆ. ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳುವ ಮುಖ್ಯಮಂತ್ರಿಗಳು, ಇವತ್ತು ಒಂದು ಅವಕಾಶ ಸಿಕ್ಕಿದೆ ನಿಜವಾದ ಸತ್ಯ ಪರಿಸ್ಥಿತಿಯನ್ನು ನಾಡಿನ ಜನತೆಗೆ ಹೇಳಿ, ಒಂದು ವೇಳೆ ಅವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದು ನಮ್ಮ ಕರ್ತವ್ಯ. ಅದು ನಮ್ಮ ಜವಾಬ್ದಾರಿ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ತಾವು ಕೂಡಿ ಒಂದು ಕಂಪನಿ ಫ್ಲೋಟ್ ಮಾಡಿದಿರಿ, ಇರಿಗೇಷನ್ ಬಾಂಡ್ಸ್ ಇದಕ್ಕೆ ಅಥವಾ ನಾನು ಕಾಂಪ್ಲಿಮೆಂಟ್ ಮಾಡಬೇಕು ನಿಮಗೆ ಅದು ಒಳ್ಳೆಯ ಕೆಲಸ ಮಾಡಿದಿರಿ ಅದೇ ಪ್ರಕಾರ ಇವತ್ತು ಹಣಕಾಸಿನ ಪರಿಸ್ಥಿತಿ ಬಗ್ಗೆ ಮುಖ್ಯಮಂತ್ರಿಗಳು ಈ ಸದನಕ್ಕೆ ವಿಶ್ವಾಸದಿಂದ ಹೇಳಬೇಕಾಗುತ್ತದೆ ಮಾನ್ಯ ಅಧ್ಯಕ್ಷರೆ, ಇವತ್ತು ಯಾವುದು ಬೇಡಿಕೆ ಎಂದು ಇದೆ ಅದನ್ನು ಎಲ್ಲಾ ಶಾಸಕರು ಒಪ್ಪಿಕೊಳ್ಳಬೇಕು : contractors have lost the cofindence of the Government. People have lost confidence in the Government.

5.30 ಪಿಎಂ

ಈ ಸರ್ಕಾರದಿಂದ ಯಾವುದೇ ಕೆಲಸ ಆಗುವುದಕ್ಕೂ ಸಾಧ್ಯವಿಲ್ಲ. ಈ ಸರ್ಕಾರ ಕೇವಲ ಭರವಸೆಗಳನ್ನು ಕೊಡತಕ್ಕ ಸರ್ಕಾರ. ಕೇವಲ ಟೊಳ್ಳು ಘೋಷಣೆಗಳನ್ನು ಕೊಡತಕ್ಕ ಸರ್ಕಾರ ಎಂಬ ನಿರ್ಧಾರಕ್ಕೆ ಜನರು ಬಂದಿದ್ದಾರೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಹಲವಾರು ಘೋಷಣೆಗಳನ್ನು ಮಾಡಿ ಮುಸ್ಲಿಂ ಹೆಣ್ಣು ಮಕ್ಕಳಿಗೆ ಪ್ರತಿಯೊಂದು

ತಾಲೂಕಿನಲ್ಲೂ ಹಾಸ್ಟೆಲ್ಸ್ ಮಾಡುತ್ತೇವೆ, ಎಸ್.ಸಿ / ಎಸ್.ಟಿ ಸಲುವಾಗಿ 532 ಕೋಟಿ ರೂ.ಗಳ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆಂದು ಹೇಳಿದರು. ಸಂತೋಷ, ಇವು ಒಳ್ಳೆಯ ಕಾರ್ಯಕ್ರಮಗಳು. ನೀವು ಇದನ್ನು ಜಾರಿಗೆ ತರಬೇಕು. ಆದರೆ ಇದನ್ನು ಜಾರಿಗೆ ತರುವುದಕ್ಕೆ ನಿಮ್ಮಲ್ಲಿ ಹಣವಿದೆಯೆ? ಬಜೆಟರಿ ಪ್ರೊವಿಷನ್ ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ನಮಗೆ ತೋರಿಸಬೇಕು. ಕಳೆದ ಎರಡು ಮೂರು ತಿಂಗಳಲ್ಲಿ ಹಲವಾರು ಘೋಷಣೆಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ಮಾಡಿದ್ದಾರೆ ; ಆ ಕಾರ್ಯಕ್ರಮಗಳಿಗೆ ಬಜೆಟರಿ ಸಪೋರ್ಟ್ ಇದೆಯೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು. ಇತ್ತೀಚೆಗೆ ಮಾನ್ಯ ಪ್ರಧಾನಮಂತ್ರಿಯವರು ಬಂದಾಗ ಏನು ಹೇಳಿದರೆಂದರೆ,

Mr. Rao said he has been told by Chief Minister veerappa Moily that economic liberalisation policy of the Union Government has resulted in an investment of Rs. 40,000 crores in Karnataka. It would have taken 10 years for Mr.Moliy if he were to raise the capital himself."

ಬಹಳ ಸಂತೋಷ. ಮಾನ್ಯ ಪ್ರಧಾನಿಯವರ ಬಗ್ಗೆ ದೂಷಣೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದ ಮಾತನ್ನು ಅವರು ಹೇಳಿದ್ದಾರೆ. 40 ಸಾವಿರ ಕೋಟಿ ರೂ. ನಮ್ಮ ರಾಜ್ಯಕ್ಕೆ ಬಂದಿದ್ದರೆ ನಾವು ಹೇಳಬಹುದಿತ್ತು. ಮಾನ್ಯ ನರಸಿಂಹರಾಯರು ಪ್ರಧಾನ ಮಂತ್ರಿಯಾಗಿ 3 ವರ್ಷಗಳಾಯಿತು. ಕಳೆದ 3 ವರ್ಷದಿಂದ ಲಿಬರಲೈಜೇಷನ್ ಪಾಲಿಸೀಸ್ ಚಾಲನೆ ಆಗುತ್ತಿವೆ. 40 ಸಾವಿರ ಕೋಟಿ ರೂ. ನಮ್ಮ ರಾಜ್ಯಕ್ಕೆ ಬಂದಿದ್ದರೆ ಈ ರಾಜ್ಯದ ಎಂಪ್ಲಾಯ್‌ಮೆಂಟ್ ಎಷ್ಟು ಆಗಬೇಕಾಗಿತ್ತು ? ಇವತ್ತು ನಮ್ಮ ಕರ್ನಾಟಕದ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆ ಎಂದರೆ , ಮಾರ್ಚಿ 92ಕ್ಕೆ 14,43,694 ಜನ,93ಕ್ಕೆ 15,11,480 ಜನ ನಿರುದ್ಯೋಗಿಗಳಿದ್ದಾರೆ. ನಾನಾದರೂ ಹೇಳುತ್ತೇನೆ; 40 ಸಾವಿರ ಕೋಟಿ ನಿಜವಾಗಿಯೂ ನಮ್ಮ ರಾಜ್ಯಕ್ಕೆ ಬಂದಿದ್ದರೆ ಈ ನಿರುದ್ಯೋಗ ಸಮಸ್ಯೆ ಹೇಗೆ ಜಾಸ್ತಿಯಾಗುತ್ತಿತ್ತು? ಇದು ಕಡಿಮೆಯಾಗಬೇಕಾಗಿತ್ತು. ಈ 40 ಸಾವಿರ ಕೋಟಿ ರೂ. ನಮ್ಮ ರಾಜ್ಯಕ್ಕೆ ಎಲ್ಲಿ ಬಂದಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ಇದು ಅವರ ಜವಾಬ್ದಾರಿ ಇದೆ. ಮಾನ್ಯ ಪ್ರಧಾನಿಯವರು ಸ್ಟೇಟ್‌ಮೆಂಟ್ ಮಾಡಿದಕ್ಕೆ ಬಹಳ ಮಹತ್ವ ಬರುತ್ತದೆ. ನೀವು ಈ ರೀತಿಯ ಪೊಳ್ಳು ಆಶ್ವಾಸನೆ ನೀಡಿ ಎಲ್ಲಿಗೆ ಹೋಗಬೇಕೆ ಮಾಡಿದ್ದೀರಿ? ಇನ್ನು 3 ತಿಂಗಳಲ್ಲಿ ಚುನಾವಣೆಯೆಂದು ಬರುತ್ತದೆ, ಆಗ ನೀವು ಬರಬಹುದು, ನಾವು ಬರಬಹುದು ಏನೋ ಆಗುತ್ತದೆ. ಜನರು ಇದನ್ನು ತೀರ್ಮಾನ ಮಾಡುತ್ತಾರೆ. ಆದರೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ದೊಡ್ಡದೊಡ್ಡ ಜಾಹಿರಾತುಗಳನ್ನು ಕೊಡುತ್ತಾ ಹೋದರೆ ಅದರಿಂದ ಯಾವುದೇ ಪ್ರಯೋಜನ ಆಗುವುದಕ್ಕೆ

ಸಾಧ್ಯ ಇಲ್ಲ. ನಾಡಿನ ಜನರು ಜಾಣರಿದ್ದಾರ ಅವರಿಗ ಗೊತ್ತಿದೆ. ಇಂಥ ಘೋಷಣೆಗಳನ್ನು ಎಲ್ಲರೂ ಮಾಡಬಹುದು, ಆದರೆ ಆ ಘೋಷಣೆ ಬಂದು ಜನರಿಗೆ ಅದರ ಲಾಭ ಸಿಕ್ಕಿದಾಗ ಮಾತ್ರ ಸರ್ಕಾರಕ್ಕೆ ಅದರ ಲಾಭ ಸಿಕ್ಕುತ್ತದೆ. ಇವತ್ತು ಎಷ್ಟು ಘೋಷಣೆಗಳನ್ನು ಸರ್ಕಾರಕ್ಕೆ ಅದರ ಲಾಭ ಸಿಕ್ಕುತ್ತದೆ. ಇವತ್ತು ಎಷ್ಟು ಘೋಷಣೆಗಳನ್ನು ಸರ್ಕಾರ ಮಾಡಿದೆ; ಅದಕ್ಕೆ ಲೆಕ್ಕವೇ ಇಲ್ಲ ಗಿನ್ನಿಸ್ ಬುಕ್‌ನಲ್ಲಿ ಬರುವಂಥ ಒಂದು ದಾಖಲೆಯನ್ನೇ ಈ ಸರ್ಕಾರ ಮಾಡಿದೆ. ಇವತ್ತು ಎಸ್.ಸಿ.ಎಸ್.ಗಳಿಗೋಸ್ಕರ 532 ಕೋಟಿ ರೂ.ಗಳ ಯೋಜನೆಯನ್ನು ಮಾನ್ಯ ಸಚಿವರು ಕುಳಿತಿದ್ದಾರೆ. ಇವತ್ತು ನಾವು ಅವರ ಬೇಡಿಕೆಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. 532 ಕೋಟಿ ರೂ. ಗಳು ಈ ಯೋಜನೆಗೆ ಎಲ್ಲಿಗೆ ಎಂಬುದನ್ನು ದಯವಿಟ್ಟು ನಿಮ್ಮ ಬಜೆಟ್‌ನಲ್ಲಿ ತೋರಿಸಿ. ಹಣ ಎಲ್ಲಿಗೆ? ಬಜೆಟ್‌ನಲ್ಲಿ ಹಣವೇ ಇಲ್ಲದಿದ್ದರೆ ಈ ಯೋಜನೆಯನ್ನು ನೀವು ಕಾರ್ಯಗತ ಮಾಡುವುದಕ್ಕೆ ಎಲ್ಲಿ ಸಾಧ್ಯ? ಇಂಥ ಪೊಳ್ಳು ಮಾತು, ಪೊಳ್ಳು ಘೋಷಣೆಗಳನ್ನು ನೀವು ಕೊಡುತ್ತಿದ್ದೀರಿ? ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಂದು ಹೇಳುತ್ತಿದ್ದಾರೆ. New Programmes announced by the Government on the occasion of Independence Day. 2 lakh house sites will be distributed between 1-9-94 and 15-9-94. 2 lakhs - where is the budgetary support? What is the programme I should know. We are already on 5th September.

ಎರಡು ಲಕ್ಷ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ಕೆಲಸವನ್ನು ನಿಜವಾಗಿ ನೀವು ಮಾಡಿದರೆ ಜನರು ಖಂಡಿತ ನಿಮಗೇ ಓಟನ್ನು ಹಾಕುತ್ತಾರೆ. Then further, 1 lakh houses to be distributed between 15-8-94 to 30-80-94, 15-8-94 ರಿಂದ 30-8-94 ರೊಳಗೆ 1 ಲಕ್ಷ ಮನೆಗಳನ್ನು ಹಂಚುತ್ತೇವೆಂದು ಇವರು ಹೇಳಿಕೊಂಡಿದ್ದಾರೆ. ಇಲ್ಲಿ ಹೌಸಿಂಗ್ ಮಂತ್ರಿಗಳು ಕೂತಿದ್ದಾರೆ ಅವರೇ ಹೇಳಲಿ, ಈ 1 ಲಕ್ಷ ಮನೆಗಳನ್ನು ಎಲ್ಲಿ ಹಂಚಿದ್ದಾರೆಂಬುದನ್ನು ಮನೆಗಳ ಕೆಲಸ ನಡೆಯುತ್ತಿರುವ ಬಗ್ಗೆ ನಾನು ಹಲವಾರು ಸಾರಿ ಹೌಸಿಂಗ್ ಬೋರ್ಡ್‌ನವರಿಗೆ ಹೇಳಿದೆ; ಮುಂಡಗೋಡು ತಾಲ್ಲೂಕಿನಲ್ಲಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ. 2 ವರ್ಷವಾಗಿದೆ ಅಲ್ಲ ಮನೆಗಳೆಲ್ಲಾ ಬೀಳುವ ಪರಿಸ್ಥಿತಿಗೆ ಬಂದಿವೆ. ಅಲ್ಲಿಗೆ ನಿಮ್ಮವರು ಯಾರಾದರೂ ಹೋಗಿ ನೋಡಿದ್ದಾರೆಯೆ? ಟೆಲಿಗ್ರಾಂ ಕೊಟ್ಟು.ಟೆಲಿಫೋನ್ ಮಾಡಿದರೂ ನಿಮ್ಮ ಹೌಸಿಂಗ್ ಬೋರ್ಡ್‌ನವರು ಯಾರೂ ಕೂಡ ಅಲ್ಲಿಗೆ ಹೋಗಿ ನೋಡುವುದಕ್ಕೆ ತಯಾರಿಲ್ಲ. ಇಂಥ ಪರಿಸ್ಥಿತಿ ಇದೆ. ಮುಂದೆ 1 lakh beneficiaries to be identified for distribution of Ashraya houses in 94 -95. Monthly food expenses being paid to SC/ST students studying in professional colleges and graduates to be rasied to Rs. 400. ಬಹಳ ಸಂತೋಷ. ಇವೆಲ್ಲವೂ

ಬಹಳ ಒಳ್ಳೆಯ ಕಾರ್ಯಕ್ರಮಗಳು. ಆದರೆ ಇದಕ್ಕೆಲ್ಲಾ ಬಜೆಟರಿ ಸಪೋರ್ಟ್ ಈ ಎಲ್ಲಿದೆ? ಮಾನ್ಯ ಮುಖ್ಯಮಂತ್ರಿಗಳು ಹಲವಾರು ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆಂದು ಏನು ಘೋಷಣೆಗಳನ್ನು ಮತ್ತು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ನಿಜವಾಗಿಯೂ ಅದು ಈ ಸದನದ ಬ್ರೀಜ್ ಆಫ್ ಪ್ರಿವಿಲೇಜ್ ಆಗುತ್ತದೆ. ಬಜೆಟ್‌ನಲ್ಲಿ ಪ್ರೊವಿಷನ್ ಮಾಡದೆ ಇಲ್ಲಿ ಬಜೆಟ್‌ನ್ನು ಮಂಡಿಸುತ್ತಿರುವುದರಿಂದ ಈ ಬಜೆಟ್ ಪಾವಿತ್ರ್ಯತೆ ಹೋಗುತ್ತದೆ ನೀವು ನಿಮ್ಮ ಮನಸ್ಸಿಗೆ ಬಂದಂತೆಲ್ಲಾ ಘೋಷಣೆಗಳನ್ನು ಕೊಡುತ್ತಾ ಹೋದರೆ ನಾವು ಏನು ಹೇಳಬೇಕಾಗುತ್ತದೆ. ಇವರು ಕೇವಲ ಚುನಾವಣೆ ದೃಷ್ಟಿಯಿಂದ ಹೇಳುತ್ತಿದ್ದಾರೆಂದು ನಾವು ಹೇಳಬೇಕಾಗುತ್ತದಲ್ಲವೆ? ಆಗ ಮಾನ್ಯ ವೀರಪ್ಪ ಮೊಯ್ಲಿಯವರ ಸರ್ಕಾರದ ಬಗ್ಗೆ ಬೇಸರಪಟ್ಟುಕೊಳ್ಳಬಾರದು. ಇವತ್ತು ಇವರು ಹೇಳಿರತಕ್ಕ ಯಾವುದೇ ಕಾರ್ಯಕ್ರಮಕ್ಕೂ ಬಜೆಟರಿ ಸಪೋರ್ಟ್ ಇಲ್ಲ, ಎಂಬುದು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕು. ಇಂಥ ಇನ್ನೂ ಹಲವಾರು ಭರವಸೆಗಳನ್ನು ಇವರು ಏನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಹೇಳುತ್ತಾ ಹೋದರೆ ಇನ್ನೂ 2-3 ಗಂಟೆಕಾಲ ಬೇಕಾಗುತ್ತದೆ. ನಾನು ವಿವರಕ್ಕೆ ಹೋಗುತ್ತಿಲ್ಲ. ಇವರು ಬಜೆಟ್‌ನಲ್ಲಿ ಹಣವನ್ನಿಟ್ಟಿಲ್ಲವೆಂದು ನಮಗೆ ಕಾಣಿಸುತ್ತದೆ. ಇನ್ನೂ ಇಂಥ ಹಲವಾರು ಬೇರೆ ಬೇರೆ ಕಾರ್ಯಕ್ರಮಗಳಿವೆ. ಉದಾಹರಣೆಗೆ life giving irrigation - expenditure of 700 crores during 93-94. ಅಗ್ರಿಕಲ್ಚರ್ ಬಗ್ಗೆ ಹೌಸಿಂಗ್ ಬಗ್ಗೆ ಹೇಳುತ್ತಾ ಹೋದರೆ ಬಹಳಷ್ಟು ಹೇಳಬಹುದು. ಇದಕ್ಕೆಲ್ಲಾ ಇವರಿಗೆ ಬಜೆಟರಿ ಸಪೋರ್ಟ್ ಇದೆಯೆ? ನೀವು 16ನೇ ಆಗಸ್ಟ್‌ನಲ್ಲಿ ಏನು ಜಾಹಿರಾತನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟರಿ ಸಪೋರ್ಟ್‌ನ್ನು ತೋರಿಸದೇ ಹೋದರೆ ಅವರು ಕೇವಲ ಚುನಾವಣೆಯಲ್ಲಿ ಮತಗಳಿಸುವ ತಂತ್ರದಿಂದ ಇದನ್ನು ಮಾಡಿದ್ದಾರೆ ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಮಾಡುತ್ತಿದ್ದಾರೆಂದು ನಾನು ಆಪಾದನೆ ಮಾಡಬೇಕಾಗುತ್ತದೆ. ಮನೆಗಳನ್ನು ಹಂಚುವ ವಿಚಾರದಲ್ಲಿ ಮಾತನಾಡಬೇಕೆಂದರೆ 93-94ನೇ ಸಾಲಿನಲ್ಲಿ 1.5 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದರು, ಇದಕ್ಕಾಗಿ ಬಜೆಟ್‌ನಲ್ಲಿ 163 ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿದರು, ಅನಂತರ ಜೂನ್ 93ರೊಳಗೆ 1 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದರು. ಅಂದರೆ ಜೂನ್ 93ರೊಳಗೆ 2.63 ಲಕ್ಷ ಮನೆಗಳನ್ನು ಕಟ್ಟಿಸಬೇಕಾಗಿತ್ತು. ಆ ಮನೆಗಳು ಎಲ್ಲಿವೆ ಎಂಬುದನ್ನು ಹೇಳುತ್ತೀರಾ? ನಾನು ವಸತಿ ಖಾತೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡಿದಕೂಡಲೇ ವಸತಿ ಖಾತೆ ಮಂತ್ರಿಗಳು ಹೋಗಿಯೇ ಬಿಟ್ಟರು. ನಾನು ಇದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ತಿಳಿದುಕೊಂಡು ಅವರು ಹೊರಗೆ ಹೋಗಿಯೇ ಬಿಟ್ಟರು. ಪ್ರತಿಯೊಂದು ಹಂತದಲ್ಲೂ ಸರ್ಕಾರ ಹಣಕಾಸಿನ ಪರಿಸ್ಥಿತಿ ಎಷ್ಟು ಕೆಟ್ಟದ್ದಾಗಿದೆ ಎಂದರೆ ಟೋಟಲ್ ರಿಸೋರ್ಸಸ್ ಸ್ಟ್ರಕ್ಚರ್ cruch ಬಗ್ಗೆ ಏನಿದೆ ಅದನ್ನು ಅವರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ನಮಗೆ ಕಷ್ಟ ಇದೆ ಎಂಬುದನ್ನು ಅವರು ಒಪ್ಪಿಕೊಳ್ಳಬೇಕು. ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕೂಡ ಸತತವಾಗಿ

5 ವರ್ಷಗಳ ಕಾಲ ಬರಗಾಲ ಇತ್ತು. ನಮಗೆ ಆರ್ಥಿಕ ತೊಂದರೆ ಇದ್ದುದ್ದನ್ನು ನಾವು ಒಪ್ಪಿಕೊಂಡಿದ್ದೆವು. ನಮ್ಮ ಸಮಸ್ಯೆಯನ್ನು ನಾವು ಎದುರಿಸಿದ್ದೆವು. ಆದರೆ ಇವತ್ತು ನಿಮಗೆ ಹಣದ ಸಮಸ್ಯೆ ಇದ್ದರೂ ಕೂಡ ಸಮಸ್ಯೆ ಇಲ್ಲವೆಂದು ನೀವಾಗಿಯೇ ನಿಮ್ಮ ಕಷ್ಟವನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೀರಿ. ನಾವು ಇದನ್ನು ಒಪ್ಪಿಕೊಳ್ಳಬೇಕು. ಇವತ್ತು ರಾಜ್ಯದಲ್ಲಿ ಹಲವಾರು ಕಡೆ ನೆರೆಹಾವಳಿ ಬಂದಿದೆ, ಬರಗಾಲ ಬಂದಿದೆ,ಇದಕ್ಕೆಲ್ಲಾ ನಿಮಗೆ ಹಣ ಖರ್ಚಾಗಿದೆ. ನಿಮ್ಮ ಯೋಜನೆಗೆ ಇದರಿಂದ ತೊಂದರೆಯಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದರೆ ನೀವು ವಿರೋಧಪಕ್ಷದವರನ್ನು ಅಥವಾ ರಾಜ್ಯದ ಜನತೆಯನ್ನು ಏತಕ್ಕೆ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತಿಲ್ಲ ? ನಿಜವಾದ ಅಂಶವನ್ನು ಏತಕ್ಕೆ ಹೇಳಬಾರದು? ನಮ್ಮ ಆರ್ಥಿಕ ಇಲಾಖೆಯವರು ತಮ್ಮ ಶಕ್ತಿಮೀರಿ ಕೆಲಸಮಾಡಿದ್ದಾರೆ. ರಿಸೋರ್ಸಸ್ ಮೊಬಿಲೈಸೇಷನ್ ಬಗ್ಗೆ ಕಳೆದ 2-3 ವರ್ಷದಲ್ಲಿ ಪ್ರಾಮಾಣಿಕ ಪ್ರಯತ್ನ ನಡೆದಿರುವುದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮುಖ್ಯಮಂತ್ರಿಯವರು ಬಜೆಟ್ಟನ್ನೇ ನೋಡಿಲ್ಲ. ಎಲ್ಲಾ ಅಡ್‌ಹಾಕ್ ಅನೌನ್ಸ್‌ಮೆಂಟ್ ಮಾಡಿದ್ದಾರೆ. ಅಡ್‌ಹಾಕಿಸಂ ಬಂದು ಇವತ್ತು ಎಂಟೈರ್ ಫೈನಾನ್‌ಷಿಯಲ್ ಡಿಸಿಪ್ಲಿನ್ ಹಾಳಾಗಿದೆ. ಹಾಗಾಗಿ ರಾಜ್ಯದಲ್ಲಿ ಯಾವ ಫೈನಾನ್‌ಷಿಯಲ್ ಡಿಸಿಪ್ಲಿನ್ ಇಲ್ಲ. ಬಜೆಟ್‌ಗೆ ಒಂದ ಾಸಿನ ಬೆಲೆ ಇಲ್ಲ. ಇವತ್ತು ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಅದೇ ಕಾರ್ಯಕ್ರಮ. ಆ ಕಾರ್ಯಕ್ರಮ ಅನುಷ್ಠಾನಕ್ಕೆ ಬರುತ್ತದೆಯೋ ಇಲ್ಲವೋ ಅದರ ಬಗ್ಗೆ ಯಾವುದೂ ಪ್ರಶ್ನೆ ಇಲ್ಲ. ಯಾವುದೂ ಚಿಂತನೆ ಇಲ್ಲ. ಹಾಗಾಗಿ ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇರಿಗೇಷನ್, ಪವರ್ ಮತ್ತು ಅಗ್ರಿಕಲ್ಚರ್ ಬಗ್ಗೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಸಮಯಾಭಾವದಿಂದ ನಾನು ಎಲ್ಲಾ ವಿಚಾರಕ್ಕೆ ಹೋಗದೆ ನೇರವಾಗಿ ಕೇವಲ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಕೇಳುತ್ತಿದ್ದೇನೆ. ಹಣಕಾಸಿನ ಪರಿಸ್ಥಿತಿ ಬಗ್ಗೆ ಸತ್ಯವಾದ ಪರಿಸ್ಥಿತಿ ಹೇಳಿ. ಎರಡನೆಯದು ತಾವು ಹಲವಾರು ಅನೌನ್ಸ್‌ಮೆಂಟ್ ಮಾಡಿದ್ದೀರಿ. ಕಳೆದ ಒಂದು ತಿಂಗಳಲ್ಲಿ ಅನೌನ್ಸ್‌ಮೆಂಟ್ ಮಾಡಿದ್ದು ಲೆಕ್ಕವೇ ಇಲ್ಲ. ಅದಕ್ಕೆ ಬಜೆಟರಿ ಸಪೋರ್ಟ್ ಇದ್ದರೆ we will have to withdraw our allegations. ಒಂದು ವೇಳೆ ಬಜೆಟರಿ ಸಪೋರ್ಟ್ ಇಲ್ಲದಿದ್ದರೆ you will have to apologise to the people of the state for unnecessarily presenting a rosy pictures.ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರೆ, ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) ಃ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ಹಿರಿಯರಾದ ಚಂದ್ರೇಗೌಡರು ಹೇಳಿದ ಒಂದು ಮಾತನ್ನೇ ನಾನು ಮುಂದುವರೆಸುವುದಕ್ಕೆ ಇಷ್ಟಪಡುತ್ತೇನೆ. ಅವರ ಮಾತು ಏನೆಂದರೆ ಈ ರಾಜ್ಯದ ಮುಖ್ಯಮಂತ್ರಿಗಳು ಈ ವರ್ಷದ ಯೋಜನಾ ಗಾತ್ರದಲ್ಲಿ ಕಡಿತ ಮಾಡುವುದಿಲ್ಲ, ನಾವು ಕಡಿತ ಮಾಡುವುದಿಲ್ಲ ಎಂಬ ಸವಾಲನ್ನು ರಾಜ್ಯದ ಮೂಲೆಮೂಲೆಯಲ್ಲಿ ಹೇಳಿಕೊಂಡು ಬಂದಿದ್ದಾರೆ. ಆದರೆ ಈ ಸವಾಲು

ಸರಿಯಲ್ಲ. ಇದು ಸುಳ್ಳು ಎನ್ನುತ್ತೀರೋ ಅಥವಾ ಅಂಕಿಅಂಶ ಪರಿಶೀಲನೆ ಮಾಡಿದಾಗ ತಪ್ಪು ಎನ್ನುತ್ತೀರೋ ಅದನ್ನೇ ನಾನು ಮುಂದುವರೆಸಿಕೊಂಡು ಹೋಗುವುದಕ್ಕೆ ಇಷ್ಟಪಡುತ್ತೇನೆ. ಎಲ್ಲ ಇಲಾಖೆಗಳನ್ನು ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟ ಇಲ್ಲ. ನೀರಾವರಿ ಇಲಾಖೆ ಒಂದು ಸಾಕು ಎಂದು ಕಾಣಿಸುತ್ತದೆ. ಕಳೆದವರ್ಷ ಆಯವ್ಯಯದಲ್ಲಿ ನೀರಾವರಿ ಬಗ್ಗೆ ತಾವು ಈ ಸದನದಲ್ಲಿ ಇದ್ದರೂ ಇಲ್ಲವೋ ಗೊತ್ತಿಲ್ಲ. ಆವತ್ತು ನಾನು ಒಂದು ಮಾತನ್ನು ಹೇಳಿದ್ದೆ. ಈ ರಾಜ್ಯದಲ್ಲಿ ಆಯವ್ಯಯದಲ್ಲಿ ನೀರಾವರಿಗೆ ಇಷ್ಟು ಹಣ ಖರ್ಚು ಮಾಡುತ್ತಾರೆ ಎಂದು ಹೇಳಿ ಹಣ ಖರ್ಚು ಮಾಡದೇ ಬಂದಿರುವಂಥ ಮೋಸದ ಪರಂಪರೆ ಸೃಷ್ಟಿಯಾಗಿದೆ, ಆ ಪರಂಪರೆಗೆ ನೀವು ಕೂಡ ಭಾಗಸ್ಥರಾಗುತ್ತೀರಿ ಎಂದು ಸಚಿವರಿಗೆ ಹೇಳಿದೆ. ಆವತ್ತು ಅವರು ಒಂದು ಮಾತು ಹೇಳಿದರು. ಇಲ್ಲ, ಇಲ್ಲ, ನಾವು ಖರ್ಚು ಮಾಡುತ್ತೇವೆ ಎಂದು ಹೇಳಿದರು. ಇಲ್ಲ ನೀವು ಮಾಡುವುದಿಲ್ಲ ಎಂದು ನಾನು ಹೇಳಿದೆ. ಆಗಲಿ ರಾಮಯ್ಯನವರೆ, ಮುಂದಿನ ವರ್ಷ ನಾವು ನೀವು ಇರುತ್ತೇವಲ್ಲ Let us exchange notes ಎಂದು ಆವತ್ತು ಹೇಳಿದರು. ನೋಟ್ಸ್ ಎಕ್ಸ್‌ಚೇಂಜ್ ಮಾಡಿಕೊಳ್ಳುವುದಕ್ಕೆ ಅವರು ಸಿದ್ಧರಾಗಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಯೋಜನಾಗಾತ್ರದ ಹಿಂಜರಿತ ತಡೆಯುವುದಕ್ಕೆ ಮೊಯಿಲಿಯವರ ಕೈಯಲ್ಲಿ ಆಗುವುದಿಲ್ಲ. ಅವರಂಥ 10 ಜನ ಮುಖ್ಯಮಂತ್ರಿಗಳು ಬಂದರೂ ಸಾಧ್ಯವಾಗುವುದಿಲ್ಲ. ಅದಕ್ಕೆ ಪ್ರಮುಖ ಕಾರಣ ಏನೆಂದರೆ ರಾಜಕಾರಣಿಗಳಾದ ನಮಗೆ ಇರುವ ಒಂದು ದುರಭ್ಯಾಸ. ಅವರು ಮಾಡಿದ್ದಕ್ಕಿಂತ ನಾವು ಜಾಸ್ತಿ ಮಾಡಿದೆವು, ಜನತಾ ದಳದವರಿಗಿಂತ ನಾವು ಜಾಸ್ತಿ ಮಾಡಿದೆವು, ಕಾಂಗ್ರೆಸ್ಸಿಗಿಂತ ನಾವು ಜಾಸ್ತಿ ಮಾಡಿದೆವು ಎಂದು ಬಡಾಯಿ ಕೊಚ್ಚಿಕೊಳ್ಳುವುದಕ್ಕೆ ಯೋಜನಾ ಗಾತ್ರವನ್ನು ವಾಸ್ತವಿಕತೆಯನ್ನು ಗಮನದಲ್ಲಿಟ್ಟುಕೊಳ್ಳದೆ ಹೆಚ್ಚು ಮಾಡುವ ಪ್ರವೃತ್ತಿ ಇದೆಯಲ್ಲ ಆ ಪ್ರವೃತ್ತಿಯಿಂದ ಯೋಜನಾ ಗಾತ್ರದ ಕಡಿತವನ್ನು ವಿಧಿಯಿಲ್ಲದೆ ಕಡಿಮೆ ಮಾಡಬೇಕಾಯಿತು. ಅದು ಅನಿವಾರ್ಯವಾಯಿತು. ಅಧ್ಯಕ್ಷರೆ, ನನಗಿಂತ ತಾವು ಹಿರಿಯರಿದ್ದೀರಿ. ಇಲ್ಲಿ ಬಹಳ ಜನರು ಹಿರಿಯರಿದ್ದಾರೆ. ಈ ರಾಜ್ಯದ, ರಾಷ್ಟ್ರದ ಯಾವುದಾದರೂ ಆಯವಯ್ಯದಲ್ಲಿ ಒಂದು ವರ್ಷ 100 ಕ್ಕೆ 58ರಷ್ಟು ಹೆಚ್ಚು ಮಾಡಿದಂಥ ನಿದರ್ಶನ ಇದೆಯೇ? ಹೇಳಿ. There is 58% jump in the plan size. I have never come across any such instance either in the Central Budget or in the State Budget , in India. ಹೊರದೇಶದ ಮಾಹಿತಿ ಬಗ್ಗೆ ನನಗೆ ಗೊತ್ತಿಲ್ಲ. ಆದ್ದರಿಂದ ಅವತ್ತೇ ನಾನು ಹೇಳಿದೆ. ಈ ರಾಜ್ಯದ ಜನತೆಗೆ ಸುಳ್ಳಿನ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಇದು ನೀವು ಮಾಡುತ್ತಿರುವ ತಂತ್ರ, ಮೋಸ ಎಂದು. ಅದು ಇವತ್ತು ಸಾಬೀತಾಗಿದೆ. ಇದಕ್ಕೆ ಸ್ಪಷ್ಟೀಕರಣ ಕೊಡುವುದಕ್ಕೆ ಇನ್ನೊಂದು ಮಾತನ್ನು ನಾನು ಜ್ಞಾಪಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ನೀರಾವರಿ ಸಚಿವರು ಉತ್ತರ ಕೊಡುತ್ತಾ ಒಂದು ಮಾತು ಹೇಳಿದರು. There is no sanctity for the budget unless and until the LOC system is removed and discontin-

ued. It has also been proved now. ಅವರೇ ಹೇಳಿದಂಥ ಈ ಎರಡು ಮಾತುಗಳು. ಈ ಯೋಜನಾ ಗಾತ್ರವನ್ನು ಸಂಪೂರ್ಣವಾಗಿ ಇವರು ನಿರ್ವಹಿಸುವುದಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಅಂಕಿಅಂಶಗಳ ಮುಖಾಂತರ ಕಾರ್ಯರೂಪಕ್ಕೆ ತಂದಿದೆ. ನಾನು ಎಲ್ಲಾ ಇಲಾಖೆಯನ್ನು ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ ಲೋಕೋಪಯೋಗಿ ಇಲಾಖೆಗೆ ನಿಗದಿ ಮಾಡಿದಂತಹ ಹಣ 162 ಕೋಟಿ ರೂಪಾಯಿ. ಆ 162 ಕೋಟಿ ರೂಪಾಯಿಯಲ್ಲಿ ಎಷ್ಟು ಖರ್ಚಾಯಿತು ಎನ್ನುವುದು ಭೇಕಾಗಿಲ್ಲ. ನಮ್ಮ ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಇಬ್ಬರು ಕೂಡ ಸಮಿತಿಯ ಮುಂದೆ ಬಂದು ಹೇಳಿದ್ದಾರೆ " the pending bill as on 31st Match was Rs.48 cr." It is not my record . ನೀರಾವರಿ ಇಲಾಖೆಯ ವಿಷಯ ಸಮಿತಿಯ ಮುಂದೆ ಆರ್ಥಿಕ ಇಲಾಖೆಯ ಕಮೀಷನರ್‌ರವರು ಒಪ್ಪಿಕೊಂಡಿದ್ದಾರೆ. ಲೋಕೋಪಯೋಗಿ ಇಲಾಖೆಯ ಒಂದೇ ಒಂದು ಇಲಾಖೆಯಲ್ಲಿ 48 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ ಇತ್ತು. ಈಗ ಏನು ಹೇಳುತ್ತೀರಿ ಸ್ವಾಮಿ? Have you not cut the size of your plan? ಈ ದಿಸೆಯಲ್ಲಿ ನಾವು ಕಡಿತ ಮಾಡುವುದಿಲ್ಲವೆಂದು ಏಕೆ ಹೇಳುತ್ತೀರಿ? ಅಲ್ಲಿಗೆ ನಿಲ್ಲಲಿಲ್ಲ . ನನ್ನ ಮೆಚ್ಚಿನ ವಿಷಯ. ನಾನು ಹೇಳುತ್ತಿದ್ದೆ ನೀರಾವರಿ ಇಲಾಖೆಗೆ ಹಣವನ್ನು ಕೊಡುತ್ತೇವೆಂದು ಹೇಳಿ ಮೋಸ ಮಾಡುತ್ತೀರಿ ಕೊಟ್ಟಿರುವ ಹಣವನ್ನು ನಿಮ್ಮ ಕೈಯಲ್ಲಿ ಖರ್ಚುಮಾಡುವುದಕ್ಕಾಗುವುದಿಲ್ಲ. ಅವೊತ್ತು ನೀರಾವರಿ ಸಚಿವರು ಹೇಳಿದರು let us exchange the notes.ಇವತ್ತು ಅವರ ಜೊತೆಯಲ್ಲಿ ನೋಟ್ಸ್‌ನ್ನು ಎಕ್ಸೆಚೇಂಜ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನೀರಾವರಿ ವಿಷಯದಲ್ಲಿ ನಾನು ಅವತ್ತಿನಿಂದ ಹೇಳುತ್ತಾ ಬಂದಿದ್ದೇನೆ. ಎರಡು ಬಹೃತ್ ನೀರಾವರಿ ಯೋಜನೆಗಳಲ್ಲಿಯೂ ಕೂಡ ಇದು ವಿಶೇಷ ಸಂದರ್ಭ. ಕೃಷಾ ನೀರಾವರಿ ಯೋಜನೆಗಳನ್ನು 2000ದ ಇಸವಿಯೊಳಗೆ ಮಾಡಿ ಮುಗಿಸಬೇಕಾದ ವಿಶೇಷತೆ ಇದೆ. ಕಾವೇರಿ ನೀರಾವರಿ ಯೋಜನೆಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿರುವಂತಹ ತಕರಾರು ಏನಿದೆ ಆ ತಕರಾರಿನ ದೃಷ್ಟಿಯಿಂದ ಆದಷ್ಟು ಬೇಗ ನೀರಾವರಿ ಯೋಜನೆಗಳನ್ನು ಮುಗಿಸಬೇಕು ಅಂತಹ ವಿಶೇಷ ಪರಿಸ್ಥಿತಿ ಇದೆ. ಈ ರಾಜ್ಯದ ಜನತೆಗೆ ಸರ್ಕಾರ ಇವತ್ತು ಹೇಳಬೇಕಾಗುತ್ತದೆ. ಈ ಎರಡೂ ಯೋಜನೆಗಳ ಬಗ್ಗೆ ಇರುವಂತಹ ವಿಶೇಷ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ಈ ಸರ್ಕಾರ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ? ಅದನ್ನು ಯಾರೂ ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಎರಡೂ ಯೋಜನೆಗಳ ವಿಶೇಷವಾಗ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಸರ್ಕಾರದ ಉತ್ತರ ಈ ರೀತಿ ಇದೆ. ಮೊದಲು ನನ್ನ ಪ್ರಶ್ನೆ ಏನೆಂದರೆ ಕೃಷ್ಣಾ ಮತ್ತು ಕಾವೇರಿ ಯೋಜನೆಗಳನ್ನು ಸಕಾಲದಲ್ಲಿ ಮುಗಿಸಲು ಸರ್ಕಾರದ ವಿಶೇಷ ಕಾರ್ಯಕ್ರಮಗಳೇನು? ಸರ್ಕಾರದ ಉತ್ತರ ಮಂತ್ರಿಗಳ ಉತ್ತರವಲ್ಲ. 'ಕಾರ್ಯದರ್ಶಿಯವರು

ವಿಶೇಷವಾದ ಕಾರ್ಯಕ್ರಮ ಏನು ಇಲ್ಲ 'ಎಂದು ತಿಳಿಸಿದ್ದಾರೆ. ಈ ದುಸ್ಥಿತಿಗೆ ರಾಜ್ಯದ ರೈತರನ್ನು ತಂದಿದ್ದೀರಿ. ಎರಡೂ ಯೋಜನೆಗಳ ಪರಿಸ್ಥಿತಿಯನ್ನು ನಿಭಾಯಿಸತಕ್ಕ ಕತ್ತಿ ನಮ್ಮ ತಲೆಯ ಮೇಲೆ ತೂಗಾಡುತ್ತಿದೆ. ಸರ್ಕಾರ ವಿಶೇಷವಾದ ಪರಿಸ್ಥಿತಿಯನ್ನು ಅರಿತು ವಿಶೇಷವಾದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಈ ದಿಸೆಯಲ್ಲಿ ಚಿಂತನೆ ಮಾಡುವುದಕ್ಕೆ ಬುದ್ಧಿ ಬೇಡವೇ? ಕಾವೇರಿ ಜಲಾನಯನ ಪ್ರದೇಶಗಳು ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್. ಪೆಂಡಿಂಗ್ ಇದೆ, ತಮಿಳುನಾಡಿನವರು ಕುತ್ತಿಗೆ ಹಿಸುಕುತ್ತಿದ್ದಾರೆ. ಈ ಕಡೆ ಕೃಷ್ಣಾ ಜಲಾನಯನ ಯೋಜನೆಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದವರು ಅವರ ಪಾಲಿನ ನೀರನ್ನು ಉಪಯೋಗಿಸಿಕೊಂಡು ನಮ್ಮ ಪಾಲಿನ ನೀರಿಗೆ ಕೈಹಾಕುತ್ತಿದ್ದಾರೆ, ನಿಮಗೆ ಎಚ್ಚರಿಕೆಯಿಲ್ಲವೆ ನಿಮಗೆ ಆಸಕ್ತಿಯಿಲ್ಲವೆ? ವಿಶೇಷವಾದ ಕಾರ್ಯಕ್ರಮ ಏನು ಇಲ್ಲವೆಂದು ಹೇಳುತ್ತೀರಿ. ಇನ್ನೂ ಹಣದ ವಿಷಯ. ನೀರಾವರಿಗೆ ಒದಗಿಸುವ ಹಣವನ್ನು ನಾವು ಸಂಪೂರ್ಣವಾಗಿ ಖರ್ಚುಮಾಡುತ್ತೇವೆನ್ನುವ ಸವಾಲನ್ನು ಅವೊತ್ತು ಮಂತ್ರಿಗಳು ಹಾಕಿದರು.ಮಾಡಿದ್ದೀರಾ? ಉತ್ತರವನ್ನು ನಾನೇ ಓದುತ್ತೇನೆ. "This year again bills worth Rs. 160 crores are pending as on 31st March in Irrigation." This statement was made by none other than the Finance secretary before subject Committee. ಎಕ್ಸೆಚೇಂಜ್ ನೋಟ್ಸ್ ನೀವು ಮಾಡಿ. ಆವೊತ್ತು ರಾಜ್ಯದ ಜನತೆಗೆ ಸವಾಲನ್ನು ಹಾಕಿದ್ದೀರಿ ಎಷ್ಟು ಹಣವನ್ನು ನೀರಾವರಿಗೆ ನಿಗದಿಮಾಡಿದ್ದೇವೆ. ಅಷ್ಟು ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ ಹೌಸ್‌ನಲ್ಲಿ ಯಾವ ಪೆಂಡಿಂಗ್ ಬಿಲ್ಸ್ ಇಲ್ಲ, ಎಲ್ಲವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ನೀರಾವರಿ ಯೋಜನೆಯ ಗಾತ್ರವನ್ನು ಕಡಿಮೆ ಮಾಡುವುದಿಲ್ಲವೆಂದು ನಮ್ಮ ಮುಖ್ಯಮಂತ್ರಿಗಳು ಈ ದೇಶದಲ್ಲೆಲ್ಲಾ ಡಂಗೂರ ಹೊಡೆಯುತ್ತಾರೆ. ಮಾರ್ಚಿ 31ನೇ ತಾರೀಖಿಗೆ ಪೆಂಡಿಂಗ್ ಬಿಲ್ಸ್‌ನ ಹಣ 160 ಕೋಟಿ ರೂಪಾಯಿಗಳು ಆದ್ದರಿಂದ ಆವೊತ್ತು ನೀವು ಹೇಳಿದ ಮಾತು, ಆಯವ್ಯಯಕ್ಕೆ ಪಾವಿತ್ರ್ಯತೆ ಇಲ್ಲವೆನ್ನುವ ಮಾತನ್ನು ಸಾಕ್ಷ್ಯರೂಪದಲ್ಲಿ ಕಾರ್ಯರೂಪಕ್ಕೆ ತಂದಿದ್ದೀರಿ. ಅದಕ್ಕೆ ನಾನು ಹೇಳುವುದು ಈ ರಾಜ್ಯದಲ್ಲಿ ಮೊದಲಿನಿಂದಲೂ ನೀರಾವರಿ ಯೋಜನೆಗಳಿಗೆ ಹಣವನ್ನು ಖರ್ಚುಮಾಡುತ್ತೇವೆಂದು ಜನರಿಗೆ ಹೇಳಿ ಮೋಸವನ್ನು ಮಾಡುತ್ತಿರುವ ಪರಂಪರೆಯನ್ನು ನೀವು ಮುಂದುವರಿಸಿಕೊಂಡು ಬಂದಿದ್ದೀರಿ. ಅ ಪ್ರಶ್ನೆಗೂ ಉತ್ತರ ಇದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಯಾವುದಾದರೂ ಒಂದು ವರ್ಷ ನೀರಾವರಿಗೆ ಯೋಜನೆಗಳಿಗೆ ನಿಗದಿ ಮಾಡಿರುವ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆಯೆ? ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ರಾಜ್ಯದಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣವನ್ನು ಯಾವುದಾದರೂ ಒಂದು ವರ್ಷ ಸಂಪೂರ್ಣವಾಗಿ ಬಿಡುಗಡೆ ಆಗಿದೆಯೆ? ಅದಕ್ಕೇನು ಉತ್ತರ? ಏನಿರಬಹುದು? ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಹಣಕಾಸು ಇಲಾಖೆಯವರು ಉತ್ತರ ಕೊಟ್ಟಿದ್ದಾರೆ. ನನಗೆ ತಿಳಿದ ಮಟ್ಟಿಗೆ ಹಾಗೆ ಆಗಿಲ್ಲ ಅಂದರೆ

ಈ ರಾಜ್ಯದಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಯಾವ ವರ್ಷವೂ ಆಯವ್ಯಯದಲ್ಲಿ ಒದಗಿಸಿದಷ್ಟು ನಿಗದಿಮಾಡಿದಷ್ಟು ಇಯರ್‌ಮಾರ್ಕ್ ಮಾಡಿದಷ್ಟು ಹಣವನ್ನು ಬಿಡುಗಡೆ ಮಾಡಲಿಲ್ಲ. ನಾನು ಹೇಳಿದ ಮಾತನ್ನು ಸರ್ಕಾರ ಇವತ್ತು ಒಪ್ಪಿಕೊಂಡಿದೆ. ಆ ಮೋಸದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಇವರು ಯಾರಿಗೂ ಹಿಂದೆ ಬಿದ್ದಿಲ್ಲ. ನೀರಾವರಿ ಆಧ್ಯತಾವಲಯವೆಂದು ಈ ರಾಜ್ಯದ ಅಭಿವೃದ್ಧಿಗೆ ಕೆಲಸಗಳ ಆದ್ಯತಾ ಪಟ್ಟಿಯನ್ನು ತೆಗೆದಾಗ ನೀರಾವರಿ ಇಲಾಖೆ ಮೇಲಿದೆ ಮೊದಲನೆಯದು ಆಮೇಲೆ ವಿದ್ಯುಚ್ಛಕ್ತಿ ಆದ್ಯತಾವಲಯದಲ್ಲಿ ಆಗಿರುವ ಅಭಿವೃದ್ಧಿ ಎಷ್ಟು? 1992 ರಿಂದ 1993ರವರೆಗೆ, ಒಂದು ದಶಕದಲ್ಲಿ ರಾಜ್ಯದಲ್ಲಿ ಆಗಿರುವಂತಹ ನೀರಾವರಿ ಹೆಚ್ಚಳ ಈ ಆದ್ಯತಾ ವಲಯದಲ್ಲಿ ನಾವು ಸಾಧಿಸಿರುವ ಸಾಧನೆ ಶೇಕಡ 1ರಷ್ಟು. ಅಂದರೆ 1982ರಲ್ಲಿ 1 3ಪರ್ಸೆಂಟ್, 1992ರಲ್ಲಿ 14 ಪರ್ಸೆಂಟ್. ಇದು ನನ್ನ ಪ್ರಕಾರ ಅಲ್ಲ ಸರ್ಕಾರದವರು ಹೊರಡಿಸಿರುವ ಆರ್ಥಿಕ ಸಮೀಕ್ಷೆಯ ಆಧಾರದ ಮೇಲೆ ಇದನ್ನು ಹೇಳುತ್ತಿದ್ದೇನೆ. 1 982ರಲ್ಲಿ 13 ಪರ್ಸೆಂಟ್, ಇವತ್ತು 14 ಪರ್ಸೆಂಟ್ ಇದೆ. ರಾಜ್ಯದ ಅತ್ಯಂತ ಆಧ್ಯತಾ ವಲಯ ನೀರಾವರಿ ವಲಯದಲ್ಲಿ ಒಂದು ದಶಕದ ಸಾಧನೆ ಶೇಕಡಾ 1ರಷ್ಟು ಸಾಕೇನು? ಏಕೆ ಕರೆಯುತ್ತೀರಿ ಆಧ್ಯತಾ ವಲಯವೆಂದು ಏಕೆ ಹೇಳುತ್ತೀರಿ ರೈತರಿಗೆ ನೀರು ಕೊಡುತ್ತೇವೆಂದು? ಒಂದು ದಶಕದಲ್ಲಿ 1982ರಲ್ಲಿ ರಾಜ್ಯದ ನೀರಾವರಿ ಶೇಕಡಾವಾರು ನೂರಕ್ಕೆ 13ಪರ್ಸೆಂಟ್. 1992ರಲ್ಲಿ ನೀರಾವರಿ ಶೇಕಡಾವಾರು ಎಷ್ಟಾಗಿದೆ ಅಂದರೆ 1 4ಪರ್ಸೆಂಟ್. ಈ ಆಧ್ಯತಾ ವಲಯದ ಸಾಧನೆ ಶೇಕಡ 1ರಷ್ಟು. ಇದು ನನ್ನ ಅಂಕಿಅಂಶಗಳಲ್ಲ, ನಿಮ್ಮ ಸರ್ಕಾರ ಹೊರಡಿಸಿರುವ ಆರ್ಥಿಕ ಸಮೀಕ್ಷೆಯನ್ನು ತೆಗೆದು ನೋಡಿದರೆ ನಮಗೆ ಸಿಗುತ್ತದೆ, ನಾಚಿಕೆಪಟ್ಟುಕೊಳ್ಳಬೇಕು ಒಂದು ದಶಕದಲ್ಲಿ ನಿಮ್ಮ ಸಾಧನೆ. ಈ ರಾಷ್ಟ್ರದ ಶೇಕಡವಾರು ನೀರಾವರಿ 36 ಪರ್ಸೆಂಟ್. ದುರದೃಷ್ಟವಶಾತ್ ಈ ದರಿದ್ರ ರಾಜ್ಯದ್ದು 13 ಪರ್ಸೆಂಟ್. ಈ ವರ್ಷ ಅದು 14ಪರ್ಸೆಂಟ್ ಇಷ್ಟೆಲ್ಲಾ ಆದರೂ ನೀವು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ಅಂದರೆ ಯಾವ ಕಾರ್ಯಕ್ರಮವೂ ಸರ್ಕಾರದ ಮುಂದೆ ಇಲ್ಲ ಎಂದು ಹೇಳುತ್ತಾರೆ.

6.00ಪಿಎಂ

ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಸರಿಯಾದ ಸಮಯಕ್ಕೇ ಎಲ್ಲಿಗೋ ಹೊರಟುಹೋದರು. ಕಳೆದ ಸಾರಿ, ಅವರು ಭಾಷಣ ಮಾಡುತ್ತಾ ಹೇಳಿದರು. Creation of potentialities and utilities ಮಧ್ಯದಲ್ಲಿರುವಂಥ ಗ್ಯಾಪ್, ಅದನ್ನು I will reduce it to one year. ಏನು ನಾವು ಸಾಮರ್ಥ್ಯವನ್ನು ಸೃಷ್ಟಿ ಮಾಡುತ್ತೇವೋ, ಸೃಷ್ಟಿ ಮಾಡಿದ ಸಾಮರ್ಥ್ಯದ ಉಪಯುಕ್ತತೆಯನ್ನು ಒಂದು ವರ್ಷಕ್ಕೆ ಇಳಿಸಿದರು . ಸ್ವಾಮಿ, ನಿಮ್ಮ ಇಲಾಖೆಯವರು ಕೊಟ್ಟಿರುವಂಥ ಅಂಕಿಅಂಶದ ಪ್ರಕಾರ, we have water in our dams which is sufficient for 12 lakhs hectares, but

we are incapable of drawing the water because we don't have field channels. ಸಮಯಕ್ಕೆ ಸರಿಯಾಗಿ ಮುಖ್ಯಮಂತ್ರಿಗಳು ಬಂದರು. ಅವರು ಒಂದು ಮಾತು ಹೇಳಿದರು, creation of potentiality and the utility period will be reduced to one year ಎಂದು. ನಿಮ್ಮ ಅಂಕಿಅಂಶದ ಪ್ರಕಾರ 12 ಲಕ್ಷ ಹೆಕ್ಟೇರ್ ಆಗುವಂಥ ನೀರು, ಇವತ್ತು ನಮ್ಮ ಅಣೆಕಟ್ಟುಗಳಲ್ಲಿ ತುಂಬಿತುಳುಕುತ್ತಿದೆ. ಅದು ಹೇಮಾವತಿ ಇರಬಹುದು , ನಾರಾಯಣಪುರ ಡ್ಯಾಮ್ ಇರಬಹುದು ಈ ಅಂಕಿ ಅಂಶಗಳನ್ನು ನಿಮ್ಮ ಇಲಾಖೆಯವರೇ ಕೊಟ್ಟಿದ್ದಾರೆ. 12 ಲಕ್ಷ ಎಕರೆ ಆಗುವಷ್ಟು ನೀರು ಇದೆ. ಆದರೆ, ಎಂತಹ ದುರಾದೃಷ್ಟ. ಮಾನ್ಯ ಮೊಯಿಲಿಯವರಿಗೆ ಬಹುಶಃ ಹೇಮಾವತಿಗೆ ಬಂದಾಗ ಮನಸ್ಸು ಕರಗಿತು. ಅದೊಂದು ವಿಷಯದಲ್ಲಿ ಮಾತ್ರ ಅವರನ್ನು ಒಪ್ಪಿಕೊಳ್ಳುತ್ತೇನೆ. ಕೇವಲ ಕೆಲವೇ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, 4 ಲಕ್ಷ ಎಕರೆಗೆ ನೀರು ಬರುವಂಥ ಪರಿಸ್ಥಿತಿ ಬಂದಾಗ, ರಾಮಯ್ಯನವರೊಬ್ಬರಿಗೇ ಏಕೆ ಬ್ಲಡ್ ಪ್ರೆಷರ್ ಜಾಸ್ತಿಯಾಗಬೇಕು, ನನಗೂ ಆಗುತ್ತದೆ ಎಂದು ಹೇಳಿದರು. ಇವತ್ತು 12 ಲಕ್ಷ ಎಕರೆಗಳಿಗಾಗುವಷ್ಟು ನೀರು ನಮ್ಮ ಅಣೆಕಟ್ಟುಗಳಲ್ಲಿ ತುಂಬಿದೆ. ಹೇಮಾವತಿಯಲ್ಲಿದೆ, ಕಬನಿಯಲ್ಲಿದೆ ಮತ್ತು ನಾರಾಯಣಪುರ ಡ್ಯಾಮ್‌ನಲ್ಲಿದೆ. ಆದರೆ, ಆ ಸೃಷ್ಟಿಸಿದ ಸಾಮರ್ಥ್ಯವನ್ನು ಇದ್ದ ನೀರನ್ನು ಕಾಲುವೆಗಳ ಮೂಲಕ ಬಿಟ್ಟುಕೊಂಡು, ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. ಇಡೀ ರಾಜ್ಯದಲ್ಲಿ ನಮಗಿರುವಂಥ ಸಾಧ್ಯತೆ, 50 ಲಕ್ಷ ಎಕರೆ. 50 ಲಕ್ಷಎಕರೆಯಲ್ಲಿ, ನಾವು ಸಾಮರ್ಥ್ಯವನ್ನು ಉಪಯೋಗಿಸಿ ಕೊಂಡಿರುವುದು ಕೇವಲ ಶೇಕಡ 14 ಭಾಗ ಮಾತ್ರ. ಇನ್ನುಳಿದ ನೀರಾವರಿಯನ್ನು ಉಪಯುಕ್ತತೆ ಪಡೆಯುವಲ್ಲಿ ನಾವು ವಿಫಲರಾಗಿದ್ದೇವೆಂದು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮತ್ತೊಂದು ಬಹಳ ಪ್ರಮುಖವಾದಂಥ ವಿಷಯ. ಕೃಷ್ಣಾ ಜಲ ನಿಗಮ ಅಥವಾ ಕೃಷ್ಣಾ ಭಾಗ್ಯ ನಿಗಮ. ಇದು ಆಗಲೇ ಕಾರ್ಯರೂಪಕ್ಕೆ ಬಂದಿದೆ ಎನ್ನುವ ರೀತಿಯಲ್ಲಿ ಸರ್ಕಾರ ಹೊರಗಡೆ ಹೇಳುತ್ತಿದೆ. ಆದರೆ ಅಧಿಕಾರಿಗಳು ಹೇಳುತ್ತಾರೆ, ಅದು ಇನ್ನೂ ರಿಜಿಸ್ಟ್ರೇಷನ್ ಕೂಡ ಆಗಿಲ್ಲ ಎಂದು.

ವೈಸ್ ಚೇರ್ಮನ್ : ತಾವು ಇನ್ನೂ ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ.

ಶ್ರೀ ವೈ.ಕೆ.ರಾಮಯ್ಯ : ನೀವು ಕುಳಿತುಕೊಳ್ಳಿ ಎಂದು ಹೇಳಿದರೆ, ಕುಳಿತುಕೊಳ್ಳುತ್ತೇನೆ ಇಲ್ಲವೇ ತಾವು ಅಪ್ಪಣೆ ಕೊಡಿಸಿದರೆ, ಇನ್ನೊಂದೆರಡು ಮೂರು ನಿಮಿಷ ಮಾತನಾಡುತ್ತೇನೆ. ಈ ವಿಷಯ ಸಮಿತಿಗಳನ್ನು ಮಾಡಿರುವುದರಿಂದ ಒಂದು ಅನುಕೂಲವಾಯಿತು. ಅಧಿಕಾರಿಗಳನ್ನು ನಮ್ಮ ಮುಂದೆ ಕೂಡಿಸಿ, ನೀವು ಡೆಲ್ಲಿಗೂ, ಇಲ್ಲಿಗೂ ಓಡಾಡುವುದಕ್ಕೆ ಅನುಕೂಲವಾಯಿತು. ಇನ್ನು ಯಾವ ಸಾಧನೆಯೂ ಈ ಸಮಿತಿಗಳ ರಚನೆಯಿಂದ ಆಗಲಿಲ್ಲ. ನಾನು ಇನ್ನೂ ಪಾರ್ಲಿಮೆಂಟ್ ಮೆಂಬರ್ ಆಗಲಿಲ್ಲ. ಅಲ್ಲಿ ಎಷ್ಟರಮಟ್ಟಿಗೆ ಸಫಲತೆಯಾಗಿದೆಯೋ ನನಗೆ ಗೊತ್ತಿಲ್ಲ. ಆದರೆ, ರಾಜ್ಯಮಟ್ಟದಲ್ಲಿ,

ಶ್ರೀ ಕೆ.ಹೆಚ್. ರಂಗನಾಥ್ : ಸರ್ಕಾರ ಮಾಡಿರುವುದಿಲ್ಲ. ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಬದಲಾವಣೆ ಮಾಡಿದ್ದೇವೆ. ಅದರ ಪ್ರಕಾರ, ಅದು ಬಂದಿದೆ. ಸರ್ಕಾರ ಮಾಡಿರುವುದೆ ಅದು?

ಶ್ರೀ ವೈ.ಕೆ. ರಾಮಯ್ಯ : ಸರ್ಕಾರ ಮಾಡಿರುವುದು ಎಂದು ನಾನು ಹೇಳಲೇ ಇಲ್ಲ. ನಾವು ಎಂದು ಹೇಳಿದೆ. ನಾವು ಕಾರ್ಯರೂಪಕ್ಕೆ ತಂದಿರುವಂಥ ವಿಷಯ ಸಮಿತಿಯ ವ್ಯವಸ್ಥೆಯಿಂದ ಒಂದು ದೊಡ್ಡ ಅನುಕೂಲವಾಯಿತು. ಅದೇನೆಂದರೆ, ಅಧಿಕಾರಿಗಳನ್ನು ನಮ್ಮ ಮುಂದೆ ಕೂಡಿಸಿ, ನೀವು ಡೆಲ್ಲಿಗೂ, ಇಲ್ಲಿಗೂ ಅಡ್ಡಾಡುವುದಕ್ಕೆ ಅನುಕೂಲವಾಯಿತು. ಅವರು ಕೇಳಿದರೆ ಹೇಳುತ್ತಾರೆ, ಫೈನಾನ್ಸ್ ಕಮೀಷನರ್ ತಂದು, ನನ್ನ ಮುಂದಗಡೆ ಓದಿಯೇ ಬಿಟ್ಟರು. You should not unnecessarily drag me into politics ಎಂದು ಹೇಳಿದರು. I agree with him . ಅದು ಯಾವುದೋ ಒಂದು ಇಂಗ್ಲೀಷ್ ಪುಸ್ತಕವನ್ನೇ ಅವರು ಹೊತ್ತುಕೊಂಡು ಬಂದಿದ್ದರು. ನಾನು ಒಪ್ಪಿಕೊಂಡೆ, ಹೌದು ಸ್ವಾಮಿ ನೀವು ರಾಜಕೀಯ ಮಾಡಕೂಡದು ಎಂದು ಹೇಳಿದೆ. ರಾಜಕೀಯ ಮಾಡುವಂಥ ವಿಷಯವೇ ಇಲ್ಲ. ಏಕೆ ನೀವು ದುಡ್ಡು ಕೊಡಲಿಲ್ಲ because you have failed in the mobilisation of resources. ನೀವು ರಾಜಕೀಯ ತರಬೇತಿ ಎಂದು ಹೇಳಿದರೆ, ನಾನೇನು ಮಾಡಲಿ. ಅಲ್ಲಿ ರಾಜಕೀಯ ಬರುತ್ತದೆ. This is because of in figting in your party. 160 ಕೋಟಿ ರೂಪಾಯಿಗಳು ನೀರಾವರಿ ಇಲಾಖೆಯೊಂದರಲ್ಲೇ, 30ನೇ ತಾರೀಖಿಗೆ ಪೆಂಡಿಂಗ್ ಬಿಲ್ ಇರುವಂಥ ಪರಿಸ್ಥಿತಿಗೆ ಕಾರಣರು ಯಾರು? ಸರ್ಕಾರ, ಸರ್ಕಾರಕ್ಕೆ ಈ ಕಾರಣದ ಪರಿಸ್ಥಿತಿ ಏನು? ಅದರಲ್ಲಿರುವಂಥ ಒಳ ಜಗಳ. ನೀವು ರಾಜಕೀಯ ತರಬೇಡಿ ಎಂದು ಹೇಳಿದರೆ, ಏನು ಮಾಡಬೇಕು? ಇದರಿಂದ, ಈ ವಿಷಯ ಸಮಿತಿಗಳ ವ್ಯವಸ್ಥೆ ಬಗ್ಗೆ ಈಗಲಾದರೂ ಮತ್ತೊಂದು ಸಾರಿ ಕುಳಿತುಕೊಂಡು ಚರ್ಚೆ ಮಾಡುವುದು ಉತ್ತಮ ಎಂದು ಈ ಹಂತದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧಿಕಾರಿಗಳನ್ನು ನಮ್ಮ ಮುಂದೆ ಕೂಡಿಸಿ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಸರಿಯಲ್ಲವೆಂದು ನನ್ನ ಭಾವನೆ. ಸನ್ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಷಯವನ್ನು ನಾನು ಸಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ರಾಷ್ಟ್ರದ ಒಟ್ಟಾರೆ, ಶೇಕಡವಾರು ನೀರಾವರಿಗೆ, ಈ ರಾಷ್ಟ್ರದ ಇತರೆ ರಾಜ್ಯಗಳ ಶೇಕಡವಾರು ನೀರಾವರಿಗೆ ಹೋಲಿಸಿಕೊಂಡಾಗ, ಕರ್ನಾಟಕ ರಾಜ್ಯ ಅತ್ಯಂತ ಕೆಳಗಿದೆ. ಇದಕ್ಕೆ ನೀರಾವರಿ ಇಲಾಖೆಯವರು, ಈ ನೀರಾವರಿ ಆದ್ಯತಾ ವಲಯದಲ್ಲಿ ನಾವೆಷ್ಟು ಸಾಧನೆ ಮಾಡಬೇಕಾಗಿತ್ತೊ, ಅಷ್ಟು ಸಾಧನೆಯನ್ನು ಏಕೆ ಮಾಡಲಿಲ್ಲ ಎನ್ನುವುದಕ್ಕೆ ನಮಗೆ ಒಂದು ಟಿಪ್ಪಣಿಯನ್ನು ಕೊಟ್ಟಿದ್ದಾರೆ. We have to list out reasons as to why we could not achieve more.

''ಸರ್ಕಾರವು ನೀರಾವರಿಗೆ ಆಯವ್ಯಯದಲ್ಲಿ ನಿಗದಿಪಡಿಸಿದಂತಹ ಅನುದಾನವನ್ನು ಸಂಪೂರ್ಣವಾಗಿ ಖರ್ಚುಮಾಡದಿರುವುದು ಈ ರಾಜ್ಯದ ಯೋಜನೆಗಳು ಕುಂಠಿತವಾಗುವುದಕ್ಕೆ

ಮೊದಲನೇ ಕಾರಣ'' That is the first and foremost reason. ಈ ರಾಜ್ಯದಲ್ಲಿ ನಾವು ನೀರಾವರಿಯಲ್ಲಿ ಇಷ್ಟೊಂದು ಹಿಂದೆ ಬಿದ್ದಿರುವುದಕ್ಕೆ ಹಣ ಒದಗಿಸದೇ ಇರುವುದು ಒಂದೇ ಒಂದು ಪ್ರಮುಖವಾದ ಕಾರಣ, ಇದನ್ನು ಈ ಇಲಾಖೆಯವರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಕೃಷ್ಣಾ ಮತ್ತು ಈ ರಾಜ್ಯದ ನೀರಾವರಿ ಯೋಜನೆಗಳನ್ನು ಸಂಪೂರ್ಣ ಮಾಡುವುದಕ್ಕೆ ಸುಮಾರು 6,500 ಕೋಟಿ ರೂಪಾಯಿಗಳು ಎಂದು ಅವರು ಲೆಕ್ಕ ಕೊಡುತ್ತಾರೆ. ಆದರೆ, ನನಗನಿಸುತ್ತದೆ, if you keep the escalation in the mind, ಬಹುಶಃ ಸುಮಾರು 10 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಕೃಷ್ಣಾ ಯೋಜನೆ ಕಾರ್ಯಕ್ರಮಗಳನ್ನು, ಎರಡು ಸಾವಿರದ ವರ್ಷದೊಳಗಾಗಿ ಮುಗಿಸುತ್ತೇವೆಂದು, day in and day out ಮುಖ್ಯಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಸಾರಿ, ಸಾರಿ ಭಾಷಣಗಳನ್ನು ಮಾಡುತ್ತಾರೆ. ಅವರಿಗೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನಿರುವಂಥ ಆರು ವರ್ಷಗಳಲ್ಲಿ, ನಮಗೆ ಬೇಕಾಗಿರುವಂಥ 6 ಸಾವಿರ, 7 ಸಾವಿರ ಕೋಟಿ ರೂಪಾಯಿಗಳನ್ನು ನಿಮ್ಮ ಕೈಲಿ ಖರ್ಚು ಮಾಡುವುದಕ್ಕೆ ಸಾಧ್ಯವೇ ಎರಡು ಸಾವಿರದ ಇಸವಿಯವರೆಗೂ ನಿಮ್ಮನ್ನೇ ಮುಖ್ಯಮಂತ್ರಿ ಮಾಡಿಬಿಡೋಣ. ಇಲಾಖೆಯವರು ಕೊಟ್ಟಿರುವಂಥ ಮಾಹಿತಿ ಪ್ರಕಾರವೇ, ಕೊನೇಪಕ್ಷ ಒಂದು ವರ್ಷಕ್ಕೆ, 1,500 ಕೋಟಿ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ನೀವು ಅನುದಾನವನ್ನು ಕೊಡಬೇಕಾಗುತ್ತದೆ. ಕಳೆದ ವರ್ಷದ್ದನ್ನು ಬಿಟ್ಟುಬಿಟ್ಟೆ, ಈ ವರ್ಷ ಮಾಡಿದ್ದೀರಾ 1,500 ಕೋಟಿ ರೂಪಾಯಿಗಳನ್ನು ಈ ವರ್ಷವೂ ಕೊಟ್ಟಿಲ್ಲ. 6,500 ಕೋಟಿ ಎಂದರೆ, 10 ಸಾವಿರ ಕೋಟಿ ಬೇಕಾಗುತ್ತದೆ. ಇವರು, ಈ ವರ್ಷ ಕೊಟ್ಟಿರತಕ್ಕ ಹಣ ಎಷ್ಟೆಂದರೆ, ನಮಗೆ, ಅವರ ಲೆಕ್ಕದ ಪ್ರಕಾರವೇ, 920 ಕೋಟಿ. ಎಲ್ಲಾ ಒದಗಿಸಿರುವಂಥಹ ಅನುದಾನ 920 ಕೋಟಿ. ಇವರ ಇಲಾಖೆಯವರ ಪ್ರಕಾರವೇ, ಅವಶ್ಯಕವಾಗಿ ಬೇಕಾಗಿರುವಂಥ ಹಣ 1,500 ಕೋಟಿ. ಆದ್ದರಿಂದ, ಗತಕಾಲದ ವೈಭವದ ಬಗ್ಗೆ ಬಿಡೋಣ. ಮುಖ್ಯಮಂತ್ರಿಯವರು ಯಾವಾಗಲೂ ಒಂದು ಪದ ಉಪಯೋಗಿಸುತ್ತಾರೆ ''ಪರಂಪರೆ'' ಎಂದು. ನಾನು 12 ವರ್ಷದಿಂದ ನೋಡುತ್ತಿದ್ದೇನೆ, ಈ ಪರಂಪರೆ ಎನ್ನುವ ಪದವನ್ನು ಬಹಳ ಚೆನ್ನಾಗಿ ಉಪಯೋಗಿಸುತ್ತಾರೆ, ಪರಂಪರೆ ಬಿಟ್ಟುಬಿಡೋಣ. ಅದು ಹೊಸದೋ, ಕೆಟ್ಟದ್ದೋ, ಒಳ್ಳೆಯದೋ, ಇದಕ್ಕೆ ನಾವೂ ಭಾಗಸ್ಥರು. ಈಗ ತಾನೆ ಬಂದಿದೆ, ಎಲ್ಲರೂ ಅದರಲ್ಲಿ ಭಾಗಸ್ಥರಾಗಿದ್ದೇವೆ. ಆದರೆ ನಾವು ಮುಂದೆಯಾದರೂ ಇದನ್ನು ಸರಿಮಾಡಿಕೊಳ್ಳುತ್ತಿದ್ದೇವೆಯೇ. 1,500 ಕೋಟಿ ರೂಪಾಯಿಗಳು ಬೇಕು ಎಂದು ಲೆಕ್ಕ ಇರುವಾಗ, ಒದಗಿಸುರುವಂಥ ಹಣ 920 ಕೋಟಿ. ಆದ್ದರಿಂದ ಈ ಪರಂಪರೆಯನ್ನು ಇಲ್ಲಿಗೇ ನಿಲ್ಲಿಸುವ ಪ್ರಯತ್ನ ಇಲ್ಲಿಯೂ ಮಾಡಿಲ್ಲ. ಈ ರಾಜ್ಯದ ರೈತರಿಗೆ ನೀರು ಕೊಡುತ್ತೇವೆ ಎಂದು ಹೇಳಿಕೊಂಡು ಬಂದಿರುವಂಥ ಮೋಸದ ಪರಂಪರೆ ಇವತ್ತಿಗೂ ನಿಂತಿಲ್ಲ. ಮುಂದಿನ ವರ್ಷಕ್ಕೂ ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನೀವು ಏರ್ಪಾಡನ್ನು ಮಾಡಿದ್ದೀರಿ. ಅದಕ್ಕಾಗಿ ಅಭಿನಂದಿಸಬೇಕೋ, ಛೀಮಾರಿ ಹಾಕ ಬೇಕೋ ನನಗಂತೂ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ ನನ್ನ ಮಾತನ್ನು ನಿಲ್ಲಿಸುವುದಕ್ಕೆ ಮೊದಲು

ಇಷ್ಟನ್ನು ಹೇಳಲಿಕ್ಕೆ ಪ್ರಯತ್ನ ಪಡುತ್ತೇನೆ. ಶೇಕಡ 50ರಷ್ಟು ಯೋಜನೆಯ ಗಾತ್ರವನ್ನು ಹೆಚ್ಚು ಮಾಡಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ದೊಡ್ಡ ಸಾಧನೆಯನ್ನು ನಾವು ಮಾಡಿದ್ದೇವೆಂದು ತೋರಿಸಿಕೊಳ್ಳುವಂತಹ ಭ್ರಮೆಯಲ್ಲಿ ವಿಧಿ ಇಲ್ಲದೆ ಯೋಜನೆ ಗಾತ್ರವನ್ನು ಕಡಿತ ಮಾಡುವಂತಹ ಪರಿಸ್ಥಿತಿಯನ್ನು ಅವರೇ ಸೃಷ್ಟಿಸಿಕೊಂಡರು. ಆದ್ದರಿಂದಲೇ ಲೋಕೋಪಯೋಗಿ ಇಲಾಖೆ ಒಂದರಲ್ಲಿ 31ನೇ ಮಾರ್ಚಿಗೆ 48 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ ನೀರಾವರಿ ಇಲಾಖೆಯಲ್ಲಿ 160 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್. If you want to dispute it I would like to read the statement of the Finance commissioner. This year again Rs.160 crores are pending as on 31-3-1994 (Rs.48 crores in PWD). This is not my statement. This is the statement made by your Finance Secretary before the Subject Committee and further he said, we are not able to make any finances available for further 3 months.

ಮತ್ತೆ ಏಕೆ ಸ್ವಾಮಿ ನಾವು ಯೋಜನಾ ಗಾತ್ರವನ್ನು ಕಡಿತ ಮಾಡುವುದಿಲ್ಲ, ಕಡಿತ ಮಾಡುವುದಿಲ್ಲ ಎಂದು ಈ ರಾಜ್ಯದ ಜನತೆಗೆ ಹೇಳುತ್ತ ಬರುತ್ತೀರಿ, ರಾಜ್ಯದ ಜನ ನಾವು ಅದನ್ನು ಓದಿಕೊಂಡು ಸಂತೋಷಪಡುತ್ತೇವೆ. ಕಡಿತ ಮಾಡಿದ್ದೇವೆಂದು ಇವತ್ತಾದರೂ ಒಪ್ಪಿಕೊಳ್ಳುತ್ತೀರಾ? ತಾವು ಫಸ್ಟ್‌ಕ್ಲಾಸ್ ಆಗಿ ಉತ್ತರ ಕೊಡಬಹುದು ಅದು ಆರ್ಗ್ಯುಮೆಂಟ್ ಆದರೆ ಜಡ್ಜ್‌ಮೆಂಟ್ ನಿಮ್ಮ ಪರವಾಗಿ ಆಗಬೇಕಲ್ಲ. ಜಡ್ಜ್‌ಮೆಂಟ್ ಕೊಡುವ ಜನ ಬೇರೆ ಇದ್ದಾರೆ. ಅಲ್ಲಿ ಫೈನಾನ್ಸ್ ಕಮೀಷನರ್ 160 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ ಇದೆ ಅಂತಹೇಳಿ ಯೋಜನಾ ಗಾತ್ರ ಕಡಿಮೆ ಮಾಡಿದಿರಿ, ಇದು ಒಂದು. ಆದ್ದರಿಂದ ನಾನು ತಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ, ಒಂದು ಮಾತನ್ನು ಹೇಳಿದರೆ ಯಾರಾದರೂ ಬಹುಶಃ ರಾಮಯ್ಯನವರು ಮುಖ್ಯಮಂತ್ರಿಗಳ ಜೊತೆಯಲ್ಲಿ ಕಾಂಗ್ರೆಸ್ ಶಾಮಿಲಾಗಿದ್ದಾರೆಂದು ಅಂದುಕೊಂಡರೂ ನನಗೆ ಚಿಂತನೆ ಇಲ್ಲ. ಅದಕ್ಕೆ ನಾನು ಆಗಲೇ ಹೇಳಿದೆ ನಾನು ಈಗಾಗಲೇ ಬೇಕಾದಷ್ಟು ಸಫರಿಂಗ್ ಮಾಡಿದ್ದೇನೆ ಏನೂ ತೊಂದರೆ ಇಲ್ಲ. ಒಂದು ವಿಷಯದಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ನನ್ನ ಜಿಲ್ಲೆಗೆ ಪ್ರಮುಖವಾಗಿ ಅದನ್ನು ಹೇಳಿದರೆ ಅವರು ಸ್ವಲ್ಪ ಸಂತೋಷಪಟ್ಟುಕೊಳ್ಳಲು ಅತ್ಯಾವಶ್ಯಕವಾಗಿ ನಾನು ನನ್ನ ಜೀವನದಲ್ಲಿ ಹೋರಾಟ ಮಾಡಿಕೊಂಡೇ ಬಂದಿದ್ದೇನೆ. ಹೇಮಾವತಿ ಯೋಜನೆಯ ಅನುಷ್ಠಾನಕ್ಕೆ ನಾನು ನಿರೀಕ್ಷೆಮಾಡಿದ್ದಕ್ಕಿಂತ ಹೆಚ್ಚಿನ ಹಣ ಕೊಟ್ಟಿದ್ದಾರೆ. ಅವರ ಉಪಮುಖ್ಯಮಂತ್ರಿಗಳು ಒಂದು ಸ್ಥಳ ಅಜಮಾಯಿಷಿ ಮಾಡಿದ್ದಾರೆ. ನಾಲ್ಕು ಲಕ್ಷ ಎಕರೆಗೆ ನೀರು ಕೊಡುವಂತಹ ಒಂದು ಪುಣ್ಯದ ಕೆಲಸದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ, ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಇವರು ನಾನು ಅವರ ಜೊತೆಯಲ್ಲಿ ಶಾಮೀಲಾಗಿದ್ದೇನೆಂದು ತಿಳಿದುಕೊಂಡರೂ ಪರವಾಗಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ಹೇಮಾವತಿ ಯೋಜನೆಯ ಅನುಷ್ಠಾನದ ಬಗ್ಗೆ ನಿಮ್ಮ ಒಬ್ಬರದ್ದೇ ಅಲ್ಲ; ನಾವೆಲ್ಲ ಹೋಗಿ ಮುಖ್ಯಮಂತ್ರಿಗಳನ್ನು ಕೇಳಿದ್ದೇವೆ. ಮುಖ್ಯಮಂತ್ರಿಗಳಿಗೆ ಕೀರಿಟ ನೀವು ಒಬ್ಬರೇ ಹೊರಿಸಬೇಡಿ ನಮಗೂ ಸೇರಿಸಿ ಹೊರಿಸಿ.

ಶ್ರೀ ವೈ.ಕೆ. ರಾಮಯ್ಯ : ನೀವು ಹೇಳಿ ಸ್ವಾಮಿ.

ಶ್ರೀ ಎಸ್. ಶಫಿಅಹಮದ್ : ಮಾನ್ಯ ರಾಮಯ್ಯನವರೇ ತುಮಕೂರು ಜಿಲ್ಲೆಯ ಪರವಾಗಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಆಗಬಹುದು.ತುಮಕೂರು ಜಿಲ್ಲೆಯ ಎಲ್ಲಾ ಶಾಸಕರ ಪರವಾಗಿ ಅಭಿನಂದಿಸುತ್ತೇನೆ. ಇಷ್ಟು ಹೇಳಿದ ಮೇಲೆ ಅವರ ಸಂತೋಷದ ಸಮಯದಲ್ಲಿ ಅವರಿಗೆ ನೋವನ್ನುಂಟು ಮಾಡಲು ಒಂದು ಮಾತು ಸಹ ಹೇಳಲೇಬೇಕಾಗುತ್ತದೆ. ಈ ಒಂದು ಯೋಜನೆಗೆ ಯಾವ ರೀತಿಯಲ್ಲಿ ಹಣ ತಾವು ಒದಗಿಸಿದಿರೋ ರಾಜ್ಯದ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅಷ್ಟರ ಮಟ್ಟಿಗೆ ಸಫಲತೆಯನ್ನು ನೀವು ಕಾಣುವುದಕ್ಕೆ ಸಾಧ್ಯವಾಗಲಿಲ್ಲ. ಎರಡು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂಥದ್ದರಲ್ಲಿ ವಿಶೇಷ ಪರಿಸ್ಥಿತಿ ಇದೆ. ಆದರೆ ಈ ವಿಶೇಷ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಯಾವ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ಈ ರಾಜ್ಯದ ಜನತೆಗೆ ಮೋಸ ಮಾಡಿದ್ದೀರಿ ಎಂದು ಹೇಳಿದರೆ ನೀವು ನೊಂದುಕೊಳ್ಳಬಾರದು ಇಷ್ಟನ್ನು ಹೇಳಿ ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈಗಲಾದರೂ ಇನ್ನು ಸ್ವಲ್ಪ ಸಮಯ ಇದೆ. ಅನವಶ್ಯಕ ಖರ್ಚುಗಳನ್ನು ಕಡಿತ ಮಾಡಿ ನೀರಾವರಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟು ಏನು ನೀರಾವರಿಗೆ ಹಣವನ್ನು ಕೊಡುತ್ತೀವೆಂದು ಸುಳ್ಳು ಹೇಳಿ ಸುಳ್ಳಿನ ಪರಂಪರೆಯನ್ನು ನಾವು ಸೃಷ್ಟಿಸಿಕೊಂಡು ಬಂದಿದ್ದೇವೆಯೋ ಈ ಪರಂಪರೆ ಇನ್ನು ಮುಂದಾದರೂ ಮುಂದುವರಿಯದಂತಹ ರೀತಿಯಲ್ಲಿ ಕಾರ್ಯಪ್ರವೃತ್ತರಾಗಲಿ ಎಂದು ಹೇಳಿ ಈಗ ನಾನು ಉಪ ಮುಖ್ಯಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಆಯವ್ಯಯದಲ್ಲಿ ಒದಗಿಸಿದಂತಹ ಎಲ್ಲ ಖರ್ಚು ಮಾಡುತ್ತೇವೆ ನೋಡಿ ಎಂದು ಹೇಳಿದ್ದರು, ಅದನ್ನು ಏತಕ್ಕೆ ಖರ್ಚು ಮಾಡಲಿಲ್ಲ ಎನ್ನುವ ಬಗ್ಗೆ ನಿರ್ಧಿಷ್ಟವಾದ ಉತ್ತರವನ್ನು ಕೊಡಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಸಿ. ಭೈರೇಗೌಡ : (ಮೇಮಗಲ್) ಮಾನ್ಯ ಅಧ್ಯಕ್ಷರೇ ಈ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೇವಲ ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ವಿದ್ಯುತ್ ಉತ್ಪಾದನಾ ರಂಗದಲ್ಲಿ ಸಾಕಷ್ಟು ಖಾಸಗಿಯವರನ್ನು ತೊಡಗಿಸತಕ್ಕಂಥಾದಕ್ಕೆ ಸಾಕಷ್ಟು ಚರ್ಚೆ ನಡೆದಿದೆ. ರಾಷ್ಟ್ರ ಮಟ್ಟದಲ್ಲೂ ಸಹ ನಡೆದಿದೆ ರಾಜ್ಯ ಮಟ್ಟದಲ್ಲೂ

ಸಹ ನಡೆದಿದೆ. ಈ ಸಮಿತಿಯ ಒಂದು ವರದಿಯೂ ಸರ್ಕಾರದ ಮುಂದೆ ಇದೆ. ಈ ಹಂತದಲ್ಲಿ ನಾನು ಹೇಳತಕ್ಕಂಥಾದ್ದು ಏನೆಂದರೆ ಯಾವುದೇ ಕಾರಣದಿಂದ ಜಲವಿದ್ಯುತ್ ಯೋಜನೆಗಳನ್ನು ಖಾಸಗಿಯವರಿಗೆ ಕೊಡುವುದು ಬೇಡ. ಈಗ ಅಂಕಿಅಂಶಗಳ ಪ್ರಕಾರವೇ ಒಂದು ಯೂನಿಟ್ ವಿದ್ಯುತ್ ಉತ್ಪಾದನೆಗೆ ಖರ್ಚಾಗತಕ್ಕಂಥಾದ್ದು ಜಲವಿದ್ಯುತ್ ಯೋಜನೆಗಳಲ್ಲಿ ಸುಮಾರು ಹನ್ನೇರಡುವರೆ ಪೈಸೆಯಿಂದ 75 ಪೈಸೆ ಮಾತ್ರ ಅದೇ ಶಾಖೋತ್ಪನ್ನ ವಿದ್ಯುತ್‌ಗೆ ಸುಮಾರು ಎರಡೂವರೆ ರೂಪಾಯಿಗಳು ಆಗುತ್ತದೆ. ಶಾಖೋತ್ಪನ್ನ ವಿದ್ಯುತ್ ಬೇಕಾದರೆ ಖಾಸಗಿಯವರಿಗೆ ಕೊಡಿ ಆದರೆ ಅತ್ಯಂತ ಕಡಿಮೆ ದರದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುತ್‌ನ್ನು ನೀವು ಖಾಸಗಿಯವರಿಗೆ ಕೊಟ್ಟರೆ ಅದರ ಲಾಭ ಈ ರಾಜ್ಯದ ಜನತೆಗೆ ಸಿಗುವುದಿಲ್ಲ. 12 ಪೈಸೆ ಅಥವಾ 15 ಪೈಸೆ ಇಲ್ಲಾ 20 ಪೈಸೆಗೆ ಉತ್ಪಾದನೆಯಾಗತಕ್ಕಂಥ ವಿದ್ಯುತ್ ಖಾಸಗಿಯವರಿಗೆ ಕನಿಷ್ಟಪಕ್ಷ 3 ರೂಪಾಯಿಗಳಾದರೂ ಕೊಡಬೇಕಾಗುತ್ತದೆನ್ನುವ ಮಾತನ್ನು ನೆನಪಿನಲ್ಲಿಟ್ಟುಕೊಂಡಿರಿ. ಬಹಳ ಹಣವನ್ನು ತೊಡಗಿಸಬೇಕಾಗುತ್ತದೆ ಎನ್ನತಕ್ಕಂಥಾದ್ದು ನಿಜ. ಇಲ್ಲ, ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಆದರೆ ಅದಕ್ಕೆ ಇವತ್ತಿನ ದಿವಸ ನಮ್ಮ ದೇಶದಲ್ಲಿಯೇ ಒಂದು ಉದಾಹರಣೆ ಇದೆ. ಗುಜರಾತಿನಲ್ಲಿ ಸರ್ದಾರ್‌ಜೀ ಪ್ರಾಜೆಕ್ಟ್‌ನಲ್ಲಿ ಯಾವ ರೀತಿ ಅಲ್ಲಿ ಇರತಕ್ಕಂಥ ಸರ್ಕಾರ ಹಣವನ್ನು ರೂಢಿಸಿತಕ್ಕಂಥಾದ್ದಕ್ಕೆ ಪ್ರಯತ್ನಪಟ್ಟಿತೋ ಅದೇ ರೀತಿಯ ಪ್ರಯತ್ನವನ್ನು ತಾವು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಾ ಇವತ್ತು ನೀವು ಖಾಸಗಿ ರಂಗದವರ ಜೊತೆ ಒಪ್ಪಂದವನ್ನು ಮಾಡಿಕೊಳ್ಳುವುಕ್ಕೆ ಹೊರಟಿದ್ದೀರಿ. ಇನ್ನು ಮುಂದೆ ಹೋಗಿ ತಾವು ವಿತರಣೆಯಲ್ಲೂ ಅವರನ್ನು ತೊಡಗಿಸತಕ್ಕಂಥಾ ಆಲೋಚನೆ ಇದೆ ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದೀರಿ. ಉತ್ಪಾದನೆ ಮತ್ತು ವಿತರಣೆ ಎರಡಲ್ಲೂ ತೊಡಗಿಸತಕ್ಕಂಥ ಆಲೋಚನೆ ಇದೆ ಎಂದು ಹೇಳಿದ್ದೀರಿ. ನಮ್ಮ ಸ್ನೇಹಿತರಾದ ಚಂದ್ರೇಗೌಡರು ಸ್ಪಷ್ಟವಾಗಿ ಹೇಳಿದ್ದಾರೆ. ವಿತರಣೆಗೆ ಬಂದರೆ ಒಂದು ಯೂನಿಟ್ ವಿದ್ಯುತ್ ಬೆಲೆ 5 ರೂಪಾಯಿಗಳಿಗೂ ಕಡಿಮೆ ಆಗುವುದಿಲ್ಲ ಅವರು ಏನು ಸುಮ್ಮನೆ ಬರುವುದಿಲ್ಲ ಅವರ್‍ಯಾರು ಸುಮ್ಮನೇ ಮಾಡುವುದಕ್ಕೆ ತಯಾರು ಇಲ್ಲ ಒಂದು ಯಾನಿಟ್ ವಿದ್ಯುತ್ ಸರಬರಾಜು ಈಗ ಆಗುತ್ತದೆ. ನಮ್ಮಂತಹ ಜಿಲ್ಲೆಗಳಲ್ಲಿ ಉಚಿತವಾಗಿ ವಿದ್ಯುತ್ ಬೆಲೆ ಕನಿಷ್ಟ 5 ರೂಪಾಯಿಗಳು ಆಗುತ್ತದೆ. ಇನ್ನು ಮುಂದೆ ನಮ್ಮಪಾಡು ಏನಾಗುತ್ತದೆ. 5 ರೂಪಾಯಿ ಅಲ್ಲ 25ಪೈಸೆ ಕೂಡ ಕೊಡುದಂತಹ ಪರಿಸ್ಥತಿಯಲ್ಲಿ ನಾವು ಇಲ್ಲ ಒಂದು ಯೂನಿಟ್‌ಗೆ. ಇಂತಹ ಪರಿಸ್ಥತಿ ಇರುವಾಗ ನೀವು ಖಾಸಗಿಯವರನ್ನು ವಿತರಣೆ ಮತ್ತು ಉತ್ಪಾದನೆಯಲ್ಲಿ ತೊಡಿಗಿಸಿದರೆ ರೈತರು ಈಗಾಗಲೇ ನೆಲ ಕಚ್ಚಿದ್ದಾರೆ. ಮುಂದೆ ಭೂಮಿ ಒಳಗಡೆ ಹೋಗುತ್ತಾರೆ ಎನ್ನತಕ್ಕಂಥಾದ್ದನ್ನು ಜ್ಞಾಪಕದಲ್ಲಿಟ್ಟುಕೊಂಡಿರಿ. ಯಾವ ಆಧಾರದ ಮೇಲೆ ನೀವು ಖಾಸಗಿರಂಗದವರಿಗೆ ಆಹ್ವಾನವನ್ನು ಕೊಡುತ್ತಿದ್ದೀರೋ ಅದೇ ಅನುಕೂಲತೆಗಳನ್ನು ನಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಕೊಡಿ. ಅದು ಸರ್ಕಾರಿ ಸೌಮ್ಯದಲ್ಲಿರತಕ್ಕಂಥ ಕಂಪನಿ, ಖಾಸಗಿಯವರಿಗೆ ಏನು ಉತ್ತೇಜನವನ್ನು ನೀವು

ಕೊಡುತ್ತಿದ್ದೀರೋ ಅದೇ ಆಧಾರದ ಮೇಲೆ ಕೆ.ಪಿ.ಸಿ.ಗೆ ಕೊಡಿ. ಏಕೆ ನೀವು ಅದನ್ನು ಕತ್ತು ಹಿಸಕತಕ್ಕಂಥ ಕೆಲಸವನ್ನು ಮಾಡುತ್ತಿದೀರಿ.ದಯವಿಟ್ಟು ಈ ಕೆಲಸ ಆಗುವುದು ಬೇಡ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಬೆಂಗಳೂರು ಪಕ್ಕದಲ್ಲಿ ಸುಮಾರು 60-70 ಮೈಲಿ ದೂರ ಹೋದರೆ ಶಿವನಸಮುದ್ರ ಇದೆ. ಸೀಜನಲ್ ಸ್ಟೇಶನ್ ಅಲ್ಲಿ ಸುಮಾರು 250 ಮೆಗಾವಾಟ್ಸ್ ವಿದ್ಯುತ್ ಉತ್ಪಾದನೆ ಮಾಡಬಹುದು. ಇವೆಲ್ಲಾ ಯೋಜನೆಗಳಿಗಿಂತ ಕಡಿಮೆ ಖರ್ಚಿನಲ್ಲಿ ವಿದ್ಯುತ್ ಉತ್ಪಾದನೆ ಅಲ್ಲಿ ಆಗುತ್ತದೆ ನಾನು ಅದನ್ನು ಹೇಳಿದ ತಕ್ಷಣ ತಾವು ಹೇಳುತ್ತೀರಿ ನಮ್ಮ ತಮಿಳುನಾಡು ಮತ್ತು ಕರ್ನಾಟಕಗಳ ನಡುವೆ ಕಾವೇರಿನದಿ ನೀರಿನ ಜಂಜಾಟ ನಡೆಯುತ್ತಿದೆ ಅಂತ. ಆದರೆ ಅಲ್ಲಿ ಒಂದು ಹನಿ ನೀರು ಕೂಡ ನಾವು ಬಳಕೆ ಮಾಡಿಕೊಳ್ಳುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ತಾವು ಹೇಳುತ್ತಿರುವುದು ಶಿವನಸಮುದ್ರದ ಬಗ್ಗೆ.

It is a part of the dispute between Tamil Nadu and Karnataka for which we are not responsible. If Tamil Nadu does not cooperate with us, if they go on filing appications before the Tribunal and the Tribunal says, you cannot proceed, without getting Tamil Nadu Government's Consent, what is that you or I can do?

ಶ್ರೀ ಸಿ. ಭೈರೇಗೌಡ : ಒಂದು ಹನಿ ನೀರೇನಾದರೂ ಕೃಷಿಗಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದರೆ ಆಗಬಹುದು, ಅದನ್ನು ತಾವು ಟ್ರಿಬ್ಯೂನಲ್‌ನವರ ಮನ ಒಪ್ಪಿಸುವುದರಲ್ಲಿ ನೀವು ಮನವರಿಕೆ ಮಾಡಿಕೊಡುವುದರಲ್ಲಿ ವಿಫಲರಾಗಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : ಈ ವಿಚಾರದಲ್ಲಿ ನಮ್ಮ ಸೀನಿಯರ್ ಕೌನ್ಸಿಲ್ ಆದ ಶ್ರೀ ನಾರಿಮನ್‌ರವರು ಟ್ರಿಬ್ಯೂನಲ್ ನವರಿಗೆ ಅರ್ಥವಾಗುವಂತಹ ರೀತಿಯಲ್ಲಿ ಹೇಳಿದ್ದಾರೆ. ಅವರಿಗಿಂತ ದೊಡ್ಡ ಲಾಯರ್ ಇನ್ನೂ ನಮ್ಮ ಕೈಗೆ ಸಿಗಲಿಲ್ಲ.

ಶ್ರೀ ಸಿ. ಭೈರೇಗೌಡ : ಅದೊಂದೇ ಅಲ್ಲ ಅಧ್ಯಕ್ಷರೇ, ಈ ತರಹದ ಯೋಜನೆಗಳು ನಮ್ಮಲ್ಲಿವೆ. ಅನಾವಶ್ಯಕವಾಗಿ ಶರಾವತಿ ಟೇಲ್‌ರೇಸನ್ನು ಮುಂದೂಡಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : ಅದಕ್ಕೆ ಎನ್‌ವಿರನಮೆಂಟಲ್ ಕ್ಲಿಯರೆನ್ಸ್ ಯಾರು ಕೊಡಬೇಕು?

ಶ್ರೀ ಸಿ.ಬೈರೇಗೌಡ : ಒಂದು ಸಾರಿ ಕೊಟ್ಟಿದ್ದರು, ಆಮೇಲೆ ಅದು ವಾಪಸ್‌ಹೋಯಿತು.

ಶ್ರೀ ಎಸ್.ಎಂ. ಕೃಷ್ಣ : ಆಮೇಲೆ ಪರಿಸರವಾದಿಗಳು ಕೋರ್ಟಿಗೆ ಹೋದರೆ ಅವರನ್ನು ತಡೆಯುವವರಾರು?

ಶ್ರೀ ಸಿ. ಭೈರೇಗೌಡ : ಆಲೋಚನೆ ಮಾಡಿ, ರಾಜ್ಯದ ಅಭಿವೃದ್ಧಿಗೆ ಮಾರಕವಾಗುವಂತೆ ಕೋರ್ಟಿನಲ್ಲಿ ಬರುವುದಾದರೆ ಅವುಗಳನ್ನು ವರ್ಷಾನುಗಟ್ಟಲೆ ಕೋರ್ಟಿನಲ್ಲಿ ಕೊಳೆಸುವ ಬದಲು ವಿಶೇಷವಾದ ಕೋರ್ಟಿಗಳನ್ನು ಮಾಡಿಸಿ. ಸುಪ್ರೀಂ ಕೋರ್ಟಿನವರೆಗೆ ಹೇಳಿ, ದಿನದ ಅಧಾರದ ಮೇಲೆ ಇಂತಹ ವಿಚಾರಗಳನ್ನು ತೀರ್ಮಾನ ಮಾಡಿ ಎಂದು. ಕೋರ್ಟಿನಲ್ಲಿವೆ ಎಂದು ತಿಳಿದುಕೊಂಡು ನೀವು ವರ್ಷಾನುಗಟ್ಟಲೆ ಮುಂದುವರೆಸುತ್ತಾ ಹೋದರೆ, ವಿದ್ಯುತ್ತಿನ ಪರಿಸ್ಥಿತಿ ಏನಾಗಿದೆ? ಸುಮಾರು 7 ಸಾವಿರ ಮೆಗಾವಾಟ್ ಜಲವಿದ್ಯುತ್ ನಮ್ಮಲ್ಲಿ ಉತ್ಪಾದಿಸಲು ಅವಕಾಶ ಇದೆ. ಆದರೆ ನಾವು 3 ಸಾವಿರ ಮೆಗಾವಾಟ್‌ನ್ನು ಉತ್ಪಾದಿಸುತ್ತಿದ್ದೇವೆ. ಇಂತಹ ಅಗಾಧ ಸಂಪತ್ತು ನಮ್ಮ ರಾಜ್ಯದಲ್ಲಿದೆ. ಇದನ್ನು ಬಳಕೆ ಮಾಕಡಿಕೊಳ್ಳುವುದರಲ್ಲಿ ಅನಾವಶ್ಯಕವಾಗಿ ನಾವು ಕಾಲ ವಿಳಂಬ ಮಾಡುತ್ತಿದ್ದೇವೆ. ಮುಂದಿನ ಜನಾಂಗ ಪೀಳಿಗೆ ಇದನ್ನು ಕ್ಷಮಿಸುವುದಿಲ್ಲವೆಂಬ ಮಾತನ್ನು ಈ ಸಂಧರ್ಭದಲ್ಲಿ ನಾನು ಹೇಳಬೇಕಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್ : ಅದು ಅನಾವಶ್ಯಕವಾಗಿಯೇ? ಉಪಮುಖ್ಯಮಂತ್ರಿಗಳು ಹೇಳುತ್ತಿದ್ದರು, ಅವರು ದಿನಕ್ಕೊಂದು ಅರ್ಜಿ ಹಾಕಿ ಕಾಲ ಕಳೆಯುತ್ತಿರುತ್ತಾರೆ, ಸರ್ಕಾರ ಅನಾವಶ್ಯಕ ಹೇಗೆ ಮಾಡುತ್ತದೆ?

ಶ್ರೀ ಸಿ.ಭೈರೇಗೌಡ : ಅದೇ ನಾನು ಹೇಳಿದ್ದುದು , ಸ್ಪೆಶಲ್ ಕೋರ್ಟುಗಳನ್ನು ರಚನೆ ಮಾಡಿಸಲು ಸರ್ಕಾರ ಕ್ರಮಕೈಗೊಳ್ಳಲಿ.

ಶ್ರೀ ಕೆ.ಎಚ್ ರಂಗನಾಥ್ : ಅದು ರಾಜ್ಯ ಸರ್ಕಾರದ ಕೈಯಲ್ಲಿದೆಯೇ?

ಶ್ರೀ ಸಿ.ಬೈರೇಗೌಡ : 180 ಜನ ನೀವಿದ್ದೀರಿ, ಹೋಗಿ ಕೇಂದ್ರದ ಮನವೊಲಿಸಿ. ಇವತ್ತು ವಿದ್ಯುತ್ತಿನಲ್ಲಿ ನಮ್ಮ ಪಾಡೇನಾಗಿದೆ? ಇತ್ತೀಚೆಗೆ ಅಲ್ಪಸ್ವಲ್ಪ ಸುಧಾರಣೆಯಾಗಿದೆ. ಅದಕ್ಕೆ ಮೊದಲು ನಮ್ಮ ಪಾಡು ಏನಾಗುತ್ತಿತ್ತು?

ಶ್ರೀ ಎಸ್.ಎಂ. ಕೃಷ್ಣ : ನಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದ ಮಾತ್ರಕ್ಕೆ ನಾವು ಹೇಳಿದಂತೆ ನಡೆಯುವುದಿಲ್ಲ. ವಿ.ಪಿ. ಸಿಂಗರವರು ಪ್ರಧಾನಿಗಳಾಗಿದ್ದಾಗ ನಾವೆಲ್ಲಿ ಡೆಲಿಗೇಶನ್ ಹೋಗಿದ್ದೆವು, ಡೆಲಿಗೇಶನ್ ಹೋಗಿ ಬಂದ ಎರಡು ದಿವಸಕ್ಕೆ ಟ್ರಿಬ್ಯೂನಲ್ ಅನೌನ್ಸ್ ಮಾಡಿದರು. ಸೊ, ಹೀಗೂ ನಡೆಯುತ್ತದೆ.

ಶ್ರೀ ಸಿ. ಭೈರೇಗೌಡ : ಅದನ್ನು ನಾನು ಇಷ್ಟಕ್ಕೆ ಬಿಡುತ್ತೇನೆ. ಖಾಸಗಿಯವರಿಗೆ ಯಾವ ರೀತಿ ಆಹ್ವಾನ ಕೊಡುತ್ತಿದ್ದೀರೋ ಕೆಪಿಸಿಯವರಿಗೂ ಅದೇ ಸೌಲಭ್ಯ ಕೊಡುವುದಕ್ಕೆ ಮುಂದಾಗಬೇಕು. ಈಗ 15 16 ಪರ್ಸೆಂಟ್ ಆರ್‌ಆರ್ ಅಂತ ಹೇಳುತ್ತಾರೆ ಅವರು? ಅದನ್ನೇ ಇವರಿಗೂ ಕನ್‌ಸಿಡರ್ ಮಾಡಿ ಏಕೆ? ಇದನ್ನು ದಯವಿಟ್ಟು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನಮ್ಮ ರಾಜ್ಯ ಒಂದು ಕಾಲದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಸಾರ್ವಜನಿಕ ಉದ್ದಿಮೆಗಳ ರಾಜಧಾನಿಯಾಗಿತ್ತು. ದೊಡ್ಡ ಕಾರ್ಖಾನೆಗಳು

ಸ್ಥಾಪನೆಯಾದುವು. ಎಚ್ಎಂಟಿ ಸ್ಥಾಪನೆಯಾಯಿತು, ಎಚ್ಎಎಲ್, ಐಟಿಐ, ಬಿಇಎಲ್, ಬಿಇಎಂಎಲ್ ಸ್ಥಾಪನೆಯಾದುವು . ಇಂತಹ ಕೇಂದ್ರದ ಉದ್ದಿಮೆಗಳ ರಾಜಧಾನಿಯಾಗಿತ್ತು ಕರ್ನಾಟಕ ರಾಜ್ಯ. ಇವತ್ತೇನಾಗಿದೆ ಪರಿಸ್ಥಿತಿ? ಒಂದೆರಡು ಕಾರ್ಖಾನೆಗಳನ್ನು ಬಿಟ್ಟರೆ ಎಲ್ಲವೂ ನಷ್ಟದಲ್ಲಿವೆ. ಈ ನಷ್ಟವನ್ನು ಬಗೆಹರಿಸಲಿಕ್ಕೆ ಏನು ಮಾಡಿದ್ದೀರಿ? ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ, ಕೇಂದ್ರಸರ್ಕಾರವೇ ಇಲ್ಲಿರುವ ಬಿಇಎಂಎಲ್‌ಗೆ ತನ್ನ ರೇಲ್ವೆಬೋಗಿಗಳನ್ನು ಮಾಡುವ ಕೆಲಸ ಕೊಡದೇ ಇದ್ದರೆ ಬೇರೆಯವರು ಕೊಡುತ್ತಾರೆಯೇ? ಆ ಪರಿಸ್ಥಿತಿ ಇಲ್ಲಿ ಉಂಟಾಗಿದೆ ಸುಮಾರು ಎರಡೂವರೆ ಸಾವಿರ ಕಾರ್ಮಿಕರು ವೃಥಾ ಕಾಲಕಳೆಯುವ ಪರಿಸ್ಥಿತಿ ಬಿಇಎಂಎಲ್‌ನಲ್ಲಿ ಉಂಟಾಗಿದೆ. ಇದಕ್ಕೆ ತಮ್ಮಿಂದೇನಾಗಿದೆ ಇವತ್ತು? ಎಚ್ಎಂಟಿಯನ್ನು ಯಾವಾಗ ಮುಚ್ಚುತ್ತಾರೋ ಎನ್ನುವ ಭಯ ಕಾಡುತ್ತಿದೆ. ಕರ್ನಾಟಕದ ಕಾರ್ಮಿರಕರು ಅವುಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಐಟಿಐ ಪರಿಸ್ಥಿತಿ ಕೂಡ ಉತ್ತಮಗೊಂಡಿಲ್ಲ, ಅದನ್ನು ಕೂಡ ಯಾವಾಗ ಮುಚ್ಚುತ್ತಾರೆ ಎನ್ನುವುದು ಕಾಡುತ್ತಿದೆ. ಅದೇ ರೀತಿ ರಾಜ್ಯ ಸ್ವಾಮ್ಯದಲ್ಲಿರುವ ಕಾರ್ಖಾನೆಗಳಿಗೆ ಅದೇ ಪರಿಸ್ಥಿತಿ ಉಂಟಾಗಿದೆ. ಎನ್‌ಜಿಇಎಫ್ ಅನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಆದರೆ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ರಾಜ್ಯಸ್ವಾಮ್ಯದಲ್ಲಿರುವ ಕಾರ್ಖಾನೆಗಳಿಗೆ ನೇಮಕ ಮಾಡಿರುವ ಅಧಿಕಾರಿಗಳು ಮಾಡಿರುವ ಸುವ್ಯವಹಾರದ ಬಗ್ಗೆ ಈ ಸದನದ ವರದಿ ಇದೆ. ನಾನು ಒಂದಲ್ಲ ಅನೇಕ ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಬರೆದು ಕೇಳಿದ್ದೇನೆ. ಆ ಪ್ರತಿ ಪತ್ರದಲ್ಲೂ ಸತ್ಯಾಂಶ ಎನ್ನುವುದು ನೂರಕ್ಕೆ ನೂರು ಇದೆ. ಆದರೆ ಯಾವ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಸದನದ ಸಮಿತಿ ವರದಿಯನ್ನು ಕೂಡ ಅವರಿಗೆ ತಲುಪಿಸಿದ್ದೇನೆ. ಆದರೂ ಒಬ್ಬ ಅಧಿಕಾರಿ ಮೇಲೂ ಇವತ್ತಿಗೂ ಕ್ರಮ ತೆಗೆದುಕೊಂಡಿಲ್ಲ. ಹಾಗೆ ತೆಗೆದುಕೊಂಡಿದ್ದರೆ ನಷ್ಟ ಏನು ಆಗುತ್ತಿತ್ತು? ಬೇರೆ ಅಧಿಕಾರಿಗಳಿಗೆ ಹೆದರಿಕೆ ಇರುತ್ತಿತ್ತು, ಆ ಉದ್ದಿಮೆಗಳನ್ನು ಲಾಭದಾಯಕವಾಗಿ ನಡೆಸುವ ಪ್ರಯತ್ನ ಆಗುತ್ತಿತ್ತು. ಅದು ಆಗದೇ ಇರುವ ಕಾರಣದಿಂದ ರಾಜ್ಯ ಸಾರ್ವಜನಿಕ ಉದ್ದಿಮೆಗಳೂ ಸಹ ರೋಗಗ್ರಸ್ಥವಾಗುವ ಪರಿಸ್ಥಿತಿ ಬಂದಿದೆ. ಇದನ್ನು ತೀವ್ರವಾಗಿ ತಾವು ಗಮನಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಭೂಹಗರಣಗಳು ನಡೆದಿವೆ. ನಮ್ಮ ರಾಜ್ಯಸರ್ಕಾರದ ಮಂತ್ರಿಗಳಾಗಿರುವವರು, ಕೇಂದ್ರದಲ್ಲಿ ಮಂತ್ರಿಗಳಾಗಿರುವವರೂ ಅದರಲ್ಲಿ ಇದ್ದಾರೆ. ನೀವು ಕ್ಯಾಬಿನೆಟ್ ಒಂದು ಉಪಸಮಿತಿ ರಚನೆ ಮಾಡಿದ್ದೀರಿ, ಜಾಫರ್ ಶರೀಫರು ನಡೆಸಿರುವ ಭೂಹಗರಣದ ಬಗ್ಗೆ ಏತಕ್ಕೆ ಆ ಉಪಸಮಿತಿ ಮಾಡಿರುವುದು, ಅದನ್ನು ಸಮಾಧಿ ಮಾಡುವುದಕ್ಕೋ?

ಶ್ರೀ ಎಸ್.ಎಂ. ಕೃಷ್ಣ : ಸಾಮಾನ್ಯವಾಗಿ ಸದನದ ಸಂಪ್ರದಾಯವೆಂದರೆ ಲೋಕಸಭಾ ಸದಸ್ಯರು ಮಂತ್ರಿಗಳ ವಿಚಾರ ತೆಗೆಯಬಾರದು ಎಂದು. ಅದರಲ್ಲೂ ಅಪಾದನೆಗಳನ್ನು ಒಳಗೊಂಡ ವಿಚಾರಗಳನ್ನು ತೆಗೆಯಬಾರದು.

ಶ್ರೀ ಸಿ. ಭೈರೇಗೌಡ : ಏಕೆ ನೀವು ಉಪಸಮಿತಿ ಮಾಡಿದಿರಿ? ಆ ಉಪಸಮಿತಿ ಏನು ಮಾಡಿದೆ ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ, ನಿಜ ಏನು ಎಂಬುದು,ಅದು ಯಾರ ಮೇಲೆ ಅಪಾದನೆ ಇದೆಯೋ ಅವರ ದೃಷ್ಟಿಯಿಂದಲೂ ಗೊತ್ತಾಗಬೇಕಾಗಿದೆ. ಅವರಿಗೆ ಒಳ್ಳೆಯದಾಗಬೇಕೆಂದು ನೀವು ಬಯಸಿದ್ದರೆ ಅದು ತಪ್ಪು ಅಥವಾ ನಿಜಾಂಶವಿಲ್ಲ ಎಂದು ಹೇಳಬೇಕಾಗುತ್ತದೆ, ಎಲ್ಲಾ ಎಂದು ಗೊತ್ತಾದರೆ ವೃಥಾ ಅವರ ಮೇಲೆ ಅಪಾದನೆ ಮಾಡಿದವರಿಗೆ ಶಾಸ್ತಿ ಆಗಬೇಕಾಗುತ್ತದೆ. ಆ ಕೆಲಸ ಇವತ್ತು ಆಗಲಿಲ್ಲ. ಯಾವ ಕಾರಣಕ್ಕಾಗಿ ಅದನ್ನು ಇಲ್ಲಿಯವರೆಗೂ ಬಚ್ಚಿಟ್ಟುಕೊಂಡಿದ್ದೀರಿ? ಸಂಪುಟ ಸದಸ್ಯರು ಪ್ರಮಾಣವಚನ ಸ್ವೀಕರಿಸಿದ್ದಾರೆ, ನಾವು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ನಾವು ನಿರ್ಣಯ ತೆಗೆದು ಕೊಳ್ಳುತ್ತೇವೆಂದು. ಎಷ್ಟು ದಿವಸವಾಯಿತು ಸಂಪುಟ ಉಪಸಮಿತಿ ರಚನೆಯಾಗಿ? ಇಷ್ಟು ದಿವಸ ಅದು ತಡವಾಗಬೇಕಾಗಿದ್ದರೆ ನೀವು ಪ್ರಮಾಣವಚನ ಉಲ್ಲಂಘನೆ ಮಾಡಿದ್ದೀರಿ ಎಂಬುದನ್ನು ತಾವು ಜ್ಞಾಪಕದಲ್ಲಿಡಬೇಕು. ಇವತ್ತು ಏನೇನು ಹಗರಣಗಳಿವೆ, ಯಾರಿಗಾದರೂ ಸಂಬಂಧಪಟ್ಟಿರಲಿ ಅದಕ್ಕೆ ಸಮರ್ಪಕ ಉತ್ತರವನ್ನು ತಾವು ಕೊಡಬೇಕಾಗುತ್ತದೆ. ಇನ್ನು, ಭಾರಿ ನೀರಾವರಿ ಬಗ್ಗೆ ವೈ.ಕೆ.ರಾಮಯ್ಯನವರು ಚೆನ್ನಾಗಿ ಭಾಷಣ ಮಾಡಿದರು. ಸ್ವಾಮಿ, ಇದು ನಮ್ಮ ಕೈಗೆ ಇವತ್ತು ಸಿಗುತ್ತಿದೆ. ರಸ್ತೆಗಳು ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ಅಪೆಂಡಿಕ್ಸ್ ಇ ಎಂಬುದು, ಮತ್ತು ಇನ್ನೊಂದು ಸಣ್ಣ ನೀರಾವರಿಗೆ ಸಂಬಂಧಪಟ್ಟಿದ್ದು. ಇದನ್ನೇನೋ ನಾನು ಬಹಳ ಆಸೆಯಿಂದ ತೆಗೆದುನೋಡಿದೆ, ಏನೋ ಬಹಳ ಎಲ್ಲ ಆಗಿಬಿಟ್ಟಿದೆ, ಸ್ವರ್ಗವನ್ನು ಭೂಮಿಗೆ ನಮ್ಮ ಮುಖ್ಯಮಂತ್ರಿಗಳು ಇಳಿಸಿಬಿಟ್ಟಿದ್ದಾರೆ ಎಂದು ಇದರಲ್ಲಿ ಏಕೆ ತಂತ್ರಗಾರಿಕೆ ಮತ್ತು ಉಪಾಯದಿಂದ ತಮ್ಮ ಅವಧಿಯನ್ನು ನಡೆಸಿಕೊಂಡು ಬಂದಿದ್ದೀರಿ. ಉದಾಹರಣೆಗೆ ನಾನು ಒಂದು ವಿಷಯ ಮಾತ್ರ ಹೇಳುವುದಕ್ಕೆಇಷ್ಟಪಡುತ್ತೇನೆ. ಮಾನ್ಯ ರೇವಣ್ಣನವರೇ ತಾವು ಖುಷಿಯಾಗಿದ್ದೀರಿ ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟದ್ದು ಸ್ವಲ್ಪ ಕೇಳಿ. ಮಾಗಡಿ ತಾಲ್ಲೂಕಿನ ತಮ್ಮಗೇನ ಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ ಕೆಲಸದ ಅಂದಾಜು 5 ಲಕ್ಷ ಈ ವರ್ಷದ ಬಡ್ಜೆಟ್ಟಿನಲ್ಲಿ ಇದಕ್ಕೆ ಇಟ್ಟಿರುವುದು ಕೇವಲ 1 ಲಕ್ಷ. ಅಂದರೆ ಈ ಕೆಲಸವನ್ನು 5 ವರ್ಷ ಮಾಡಬೇಕು. ನಿಮ್ಮ ಅವಧಿ ಈಗ ಮುಗಿಯುತ್ತಿದೆ ಮುಂದೆ ಯಾರು ಬರುತ್ತಾರೋ? ಏನೋ ಗೊತ್ತಿಲ್ಲ. ನಾವು ಬರುತ್ತೇವೆಂದು ಧೈರ್ಯವಾಗಿ ನಾವು ಇದ್ದೇವೆ. ನಮ್ಮ ಮೇಲೆ ಸಾಲ ಹೊರಿಸುವುದಕ್ಕೆ ತಾವು ಹೋಗುತ್ತಿದ್ದೀರಲ್ಲ.ಈ ಕೆಲಸವನ್ನು 5 ವರ್ಷದ ಅವಧಿಯಲ್ಲಿ ಮಾಡುತ್ತೇವೆಂದು ಹೇಳುತ್ತೀರಿ. 5 ಲಕ್ಷ ರೂಪಾಯಿ ಕೆಲಸಕ್ಕೆ, ವರ್ಷಕ್ಕೆ 1-1- ಲಕ್ಷ ಖರ್ಚು ಮಾಡುತ್ತಾ ಹೋದರೆ 5 ವರ್ಷದ ವರೆಗೆ ಇದು ಹೋಗುತ್ತದೆ. ಈ ರೀತಿ ಮೋಸ ಮಾಡುವುದಕ್ಕೆ ಕೈ ಹಾಕುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : 88-89 ರವರೆಗೆ ಕೆಲವು ಬಡ್ಜೆಟ್ ನೋಡಿದೆ, ನೀರಾವರಿ ಕಾಮಗಾರಿಗಳಿಗೆ 2-2 ಸಾವಿರ ಒದಗಿಸಿದಂತಹ ಹಲವಾರು ನಿದರ್ಶನಗಳು ಇವೆ. ಇವರು ಪಾಪ 1 ಲಕ್ಷವಾದರೂ ಒದಗಿಸಿದರು.

ಶ್ರೀ ಸಿ. ಭೈರೇಗೌಡ : 2 ಸಾವಿರ ಅಲ್ಲ 1 ಸಾವಿರ ಇರಬಹುದು ಆದರೆ ಅದು ಈ ಸದನದಲ್ಲಿರತಕ್ಕಂತಹ ದಾಖಲೆ. ಹಾಗದರೆ ನಾವು ಮಾಡಿದ ಕೆಲಸವನ್ನು ನೀವೂ ಮಾಡುವುದಕ್ಕೆ ಹೊರಟಿದ್ದೀರಾ?

ಶ್ರೀ. ಕೆ.ಹೆಚ್ ರಂಗನಾಥ್ : 5 ವರ್ಷದಲ್ಲಾದರೂ ಮಾಡಿ ಮುಗಿಸೋಣವೆಂದು ಇಟ್ಟಿದ್ದೇವೆ. ಒಂದು ಸಾವಿರ ಇಟ್ಟರೆ ತೆಗೆದುಕೊಳ್ಳುವುದೇ ಬೇಕಾಗಿಲ್ಲ . ತೆಗೆದುಕೊಳ್ಳಬಾರದೆಂದು ಒಂದು ಸಾವಿರ ಟೋಕನ್ ಗ್ರಾಂಟ್ ಇಟ್ಟಿರಿ. ಆ ಕೆಲಸ ತೆಗೆದುಕೊಳ್ಳುವ ಹಾಗೇ ಇಲ್ಲ.

ಗೊಂದಲ

ಶ್ರೀ ಬಿ.ಹೆಚ್. ಬನ್ನಿಕೊಡ್ : ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದರು 5 ಲಕ್ಷದ ಕೆಲಸಕ್ಕೆ ಒಂದು ಲಕ್ಷವಾದರೂ ಇಟ್ಟಿದ್ದೇವೆ 5 ವರ್ಷದಲ್ಲಿ ಮಾಡುತ್ತೇವೆಂದು ಹೇಳಿದರು. 1 ಕೋಟಿ ರೂಪಾಯಿಗಳ ಯೋಜನೆಗೆ ಈ ವರ್ಷ 1 ಲಕ್ಷ ಇಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಒಂದೇ ಅಲ್ಲ ಬೇರೆ ಕಡೆ ಕೂಡ ಇವೆ. ನೀರಾವರಿ ಕಾಮಗಾರಿಗಳಿಗೆ ಕೋಟಿಗಟ್ಟಲೆ ಹಣ ಆಯವ್ಯಯದಲ್ಲಿದ್ದರೆ ಅದಕ್ಕೆ ಒದಗಿಸಿರುವುದು 1 ಲಕ್ಷ . ತಾವು ಪ್ರಗತಿ ಪರ ಕೆಲಸ ಮಾಡಿದ್ದೇವೆಂದು ಹೇಳಿಕೊಳ್ಳಲಿಕ್ಕೆ ನೀವು ಕೊಟ್ಟಿರತಕ್ಕಂತಹ ಆಯವ್ಯಯದಲ್ಲಿ ನೋಡಿದರೆ ಆ ಧೈರ್ಯ ಬರಲಿಕ್ಕಿಲ್ಲ. 10 ಕೋಟಿ ಮಾಡುತ್ತೇವೆಂದು ಹೇಳಿದ್ದೀರಿ ನಿಮ್ಮ ಉತ್ತರದಲ್ಲಿ ಇಲ್ಲ. 4 ಕೋಟಿಯೇ ಇದೆ. 339 ಕೋಟಿ ಇದೆ ಆಯವ್ಯಯದಲ್ಲಿ ಈ ರೀತಿ ಹಳೆಯದನ್ನು ನೆನಪು ಮಾಡಿಕೊಂಡು ನಾವು ಪ್ರಗತಿಪರವೆಂದು ಹೇಳುವಂತಾದ್ದು ಸರಿಯಲ್ಲ. ನಿಮ್ಮದೇ ಆದಂತಹ ಆಯವ್ಯಯವನ್ನು ನೋಡಿದರೆ ಅದರಲ್ಲಿರತಕ್ಕಂತಹ ಅಂದಾಜು ವೆಚ್ಚಕ್ಕೆ 100 ಲಕ್ಷಕ್ಕೆ 1 ಲಕ್ಷ ಇಟ್ಟರೆ ಇದು ಆಡಳಿತ ಮಂಜೂರಾತಿ ತಾಂತ್ರಿಕ ಮಂಜೂರಾತಿಯೂ ದೊರೆಯುವುದಿಲ್ಲ ಯಾವುದೇ ಕಾಮಗಾರಿ ಪ್ರಾರಂಭವಾಗುವುದಿಲ್ಲ.

ಶ್ರೀ ಸಿ.ಭೈರೇಗೌಡ : ಇದು ಈಗ ಇಟ್ಟಿರತಕ್ಕಂತಹ ಅಪೆಂಡಿಕ್ಸ್ ಬಗ್ಗೆ. ಕುಡಿಯುವ ನೀರಿನ ಬಗ್ಗೆ ಜಿಲ್ಲಾಪರಿಷತ್ತಿಗೆ ಏನು ಹೊಸ ಬಡ್ಜೆಟ್ಟಿನಲ್ಲಿ ಸೇರಿಸಬೇಕಾಗಿತ್ತೋ ಆ ಅಪೆಂಡಿಕ್ಸ್ ಇಲ್ಲಿಯವರೆಗೂ ಬಂದಿಲ್ಲ. ವರ್ಷದಲ್ಲಿ 6 ತಿಂಗಳು ಮುಗಿದಿದೆ ಇನ್ನು ಎರಡು ತಿಂಗಳಲ್ಲಿ ನಾವು ಚುನಾವಣೆಗೆ ಹೋಗಬೇಕಾತ್ತದೆ. ಮಾನ್ಯ ಅಧ್ಯಕ್ಷರೇ ತಮ್ಮನ್ನು ಮೊರೆ ಹೋಗುತ್ತೇನೆ ಅದು ಬರಬೇಕಾಗಿರುವುದು ಇಲ್ಲಿ. ಈ ಸದನಕ್ಕೆ ಬರುವುದಕ್ಕೆ ಮೊದಲು ಅದು ಸಾಗರವೇನಾದರೂ ತಲುಪಿದ್ದರೆ That amounts to breach of privilege of this House.ಅಧ್ಯಕ್ಷರು ಬಂದಿದೆ ಎಂದು ಹೇಳಲಿ. ನೋಡೋಣ ಹಾಗಾದರೆ. ಸರಕಾರದಲ್ಲಿ ಮಂತ್ರಿಗಳಿದ್ದಾರೆ ಎಂದು ಹೇಳಿ ಹೇಗೆ ಅಂದರೆ ಹಾಗೆ ಮಾಡಲು ಸಾಧ್ಯವಾಗುತ್ತದೆಯೇ?

6.30 ಪಿಎಂ

ಹೇಗೆ ಸಾಧ್ಯ ಇದು ? ಇವರ ಕೈಗೆ ಬೇಗೆ ಸಿಕ್ಕಿತು? ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟಂಥ ಗ್ರಾಮಾಂತರ ನೀರು ಸರಬರಾಜು ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕಾಮಗಾರಿಗಳು ಏನು ಇದ್ದಾವೆ, ಅವುಗಳ ಅಪೆಂಡಿಕ್ಸ್ ಇಲ್ಲಿಯವರೆಗೂ ಕೂಡ ಬಂದಿಲ್ಲ. ಇನ್ನು 200 ದಿನಗಳ ಕಾರ್ಯಕ್ರಮ ಎಂದು ಹೇಳುತ್ತಾರೆ. 200 ದಿನಗಳ ಕಾರ್ಯಕ್ರಮವೋ 600 ದಿನಗಳ ಕಾರ್ಯಕ್ರಮವೋ ನಮಗೆ ಗೊತ್ತಿಲ್ಲ. ಅಲ್ಲಿ ಕಾರ್ಯಕ್ರಮ ಇಲ್ಲವೇ ಏನು ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಹೊರಟಿದ್ದಾರೋ ನನಗಂತೂ ಕೂಡ ಅರ್ಥವಾಗಿಲ್ಲ. ಇದರಿಂದ ಇದು ಬಹಳ ಗುರುತರವಾದಂಥ ಲೋಪ ಸರ್ಕಾರದಿಂದ ಆಗಿದೆ, ಏಕೆಂದರೆ ಅವೆಲ್ಲವೂ ಕೂಡ ಬಜೆಟ್ ಮಂಡನೆ ಆದಂಥ ಕಾಲದಲ್ಲಿ ನಮ್ಮ ಸದಸ್ಯರ ಕೈಗೆ ಸೇರಬೇಕು. ಇಲ್ಲಿ ಇಡಬೇಕು. ಇಲ್ಲಿಯವರೆಗೂ ಕೂಡ ಕೆಲಸ ಸರ್ಕಾರಿದಂದ ಆಗಿಲ್ಲ. ತೀವ್ರವಾದಂಥಹ ಲೋಪವನ್ನು ಸರ್ಕಾರದವರು ಎಸಗಿದ್ದಾರೆ ಎನ್ನತ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಈ ವಿದ್ಯುತ್ತಿನ ಬಗ್ಗೆ ಒಂದು ಮಾತು ಹೇಳುತ್ತೇನೆ ಇವತ್ತು ರಾಯಚೂರಿನ ಘಟಕವನ್ನು ತಾವು ಖಾಸಗಿಯವರಿಗೆ ಕೊಡಬೇಕು ಎಂದು ಹೇಳುತ್ತಿದ್ದೀರಿ ಗಂಡ ಹೆಂಡತಿ ಒಂದೇ ಕೋಣೆಯಲ್ಲಿ ಇದರೇ ಜಗಳವೇ ಗಂಡ ಹೆಂಡತಿ ಜಗಳ ಸಾಮಾನ್ಯವಾಗಿ ಆಗಿಯೇ ಆಗುತ್ತ... ಅಂಥದ್ದರಲ್ಲಿ ಎಲ್ಲರನ್ನು ಕರೆದುಕೊಂಡು ಹೋಗಿ ಒಟ್ಟು ಮಾಡುವುದಾಕ್ಕಾಗುತ್ತದ...ೇ? ತಾವು ಕೂಡ ಹೋಗಿ ನೋಡಿದ್ದೀರಿ. ಒಂದೇ ಹಾಲ್‌ನಲ್ಲಿ ಉದ್ದಕ್ಕೂ ಇದೆ. ಪೋರ್ ಹ್ಯಾಂಡ್ಲಿಂಗ್ ಸಿಸ್ಟಂ, ಪ್ರತಿಯೊಂದು ಇನ್‌ಫ್ರಾಸ್ಟ್ರಕ್ಚರ್ ಏನು ಇದೆ. ಎಲ್ಲವೂ ಕೂಡ ಒಂದೇ ಇರುತ್ತದೆ. ಕೆ.ಪಿ.ಸಿ.ಯವರಿಗೂ ಮತ್ತು ಖಾಸಗಿಯವರಿಗೂ ಪ್ರತಿ ದಿವಸವೂ ಕೂಡ ಸಣ್ಣಮಟ್ಟದ್ದಕ್ಕೆ ಜಗಳ ಅಲ್ಲಿ ಆಗಿಯೇ ಆಗುತ್ತದೆ. ನೀವು ಮೂರು ನಾಲ್ಕು ಹೆಂಡತಿ ಗಂಡಂದಿರನ್ನು ತೆಗೆದುಕೊಂಡು ಹೋಗಿ ಒಂದೇ ಕೋಣೆಯಲ್ಲಿ ಹಾಕಿದರೆ ಪರಿಸ್ಥಿತಿ ಏನಾಗುತ್ತದೆ. ನೀವು ಇದನ್ನು ಬಹಳ ಎಚ್ಚರಿಕೆಯಿಂದ ನೋಡಬೇಕಾಗುತ್ತದೆ. ಅದಕ್ಕೆ ನನ್ನ ವಿರೋಧ ಇದೆ ಎನ್ನತಕ್ಕಂಥದ್ದನ್ನು ಕೂಡ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅಲ್ಲಿ ಉತ್ಪಾದನೆಯಾಗತಕ್ಕಂಥ ವಿದ್ಯುತ್ ಏನಿದೆ, ಅದೊಂದು ಕರ್ಮಕಥೆ. ರಾಯಚೂರಿನ ಆರ್‌ಟಿಪಿಎಸ್ ನ ಹಳೆಯ ಕಥೆಯನ್ನು ತೆಗೆದುಕೊಂಡರೆ ಅದೊಂದು ಕರ್ಮಕಥೆ. ಅಲ್ಲಿ ಉತ್ಪಾದನೆಯಾದಂಥ ವಿದ್ಯುತ್‌ನ್ನು ಇವಾಕ್ಯುಯೇಟ್ ಮಾಡುವುದಕ್ಕೆ ಅವಕಾಶವೇ ಇರಲಿಲ್ಲ. ಮೊನ್ನೆ ಮೊನ್ನೆ ಆರು ತಿಂಗಳು ಒಂದು ವರ್ಷದಿಂದ ಈಚೆಗೆ ಮಾತ್ರ ಸಾಧ್ಯವಾಯಿತು. ಸುಮಾರು 600 ಅಥವಾ 630 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಪೂರ್ತಿ ಪ್ರಮಾಣದಲ್ಲಿ ಉತ್ಪಾದನೆ ಮಾಡಿದ್ದಿದ್ದರೆ ಅದನ್ನು ವಿತರಣೆ ಮಾಡತಕ್ಕಂಥದ್ದು ಆ ಪವರನ್ನು ಎವಾಕ್ಯುಯೇಟ್ ಮಾಡತಕ್ಕಂಥ ಅವಾಕಾಶಗಳು ಇರಲಿಲ್ಲ. ಬಹಳ ತೀವ್ರ ತರವಾದಂಥ ಲೋಪಗಳನ್ನು ಎಸಗಿದ್ದಾರೆ. ಅದೇ ಲೋಪ ಈಗ ಪುನರವಾರ್ತನೆಯಾಗುತ್ತಿದೆ. ತಾವು ಹೇಳುತ್ತಿದ್ದೀರಿ, ಡಿಸೆಂಬರ್‌ನಲ್ಲಿ ಅಥವಾ ಇನ್ನು ಒಂದೆರಡು ತಿಂಗಳಲ್ಲಿ 4 ನೇ ಯೂನಿಟ್ ಕೆಲಸ

ಮಾಡುವುದಕ್ಕೆ ಪ್ರಾರಂಭ ಮಾಡುತ್ತದೆ. 210 ಮೆಗಾವ್ಯಾಟ್ ವಿದ್ಯುತ್ ಅಲ್ಲಿ ಉತ್ಪಾದನೆಯಾಗುತ್ತದೆ. ಆ ವಿದ್ಯುತ್ ಅಲ್ಲಿಂದ ಬೆಂಗಳೂರಿನವರೆಗೂ ತಲುಪಬೇಕಾಗುತ್ತದೆ ಲೇನ್ ಹಾಕತಕ್ಕಂಥದ್ದು ಪ್ರಾರಂಭವಾಗಿದೆ. ಪೂರ್ತಿಯಾಗಿ ಲೇನ್ ಹಾಕಿಲ್ಲ ಇದಕ್ಕೆಲ್ಲಾ ಸುಮಾರು ಆರು ಸಾವಿರ ಕೋಟಿ ಖರ್ಚಾಗಿರಬಹುದು ಎಂದು ನನಗನ್ನಿಸುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿರತಕ್ಕಂಥ ಹಣವನ್ನು ಅಲ್ಲಿ ಖರ್ಚು ಮಾಡಿ ಅಲ್ಲಿ ಪವರ್ ಎವಾಕ್ಯುಯೆಷನ್ ಇಲ್ಲದಿದ್ದರೇ ಈ ಹಣಕ್ಕೆ ಬಡ್ಡಿ ಎಷ್ಟಾಗುತ್ತದೆ? ನಷ್ಟ ಎಷ್ಟಾಗುತ್ತದೆ? ಇದಕ್ಕೆ ಯಾರು ಕಾರಣಕರ್ತರು? ಏತಕ್ಕೆ ಇದನ್ನು ಮುಂದಾಲೋಚನೆ ಮಾಡದೆ ಪವರ್ ಇವಾಕ್ಯುಯೇಷನ್ ಮಾಡತಕ್ಕಂಥ ಅವಕಾಶವನ್ನು ಕಲ್ಪಿಸಿಕೊಡಲಿಲ್ಲ; ಯಾರು ಲೋಪ ಎಸಗಿದ್ದಾರೋ ಅಂಥವರ ಮೇಲೆ ಕ್ರಮ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಲಕ್ಷ, ಎರಡು ಲಕ್ಷ ರೂಪಾಯಿಗಳಾದರೆ ನಾವು ಇಷ್ಟು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. 210 ಮೆಗಾವ್ಯಾಟ್ ವಿದ್ಯುತ್ತನ್ನು ಇಲ್ಲಿ ಒದಗಿಸಬೇಕಾಗಿದ್ದರೆ ಎವಾಕ್ಯುಯೇಷನ್‌ಗೆ ಫೆಸಿಲಿಟೀಸ್ ಇಲ್ಲ ಅರ್ಥ ಏನು? ನಮಗೆ ''ಬಾಲ ಮುಂದೋ ಅಥವಾ ತಲೆ ಮುಂದೊ '' ಎನ್ನತಕ್ಕ ಪರಿಸ್ಥಿತಿ ಬಂದಿದೆ. ತಾವು ಅದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. 210 ಮೆಗಾವ್ಯಾಟ್ ವಿದ್ಯುತ್ ವಿತರಣೆ ಮಾಡುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಹೇಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು, ದಯವಿಟ್ಟು ನನಗೆ ಅವಕಾಶ ಕೊಟ್ಟಿದ್ದೀರಿ. ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಯುತ್ತೇನೆ.

* ಶ್ರೀ ಎಸ್.ಎಂ.ಕೃಷ್ಣ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ವಿಷಯ ಸಮಿತಿಗಳು ಅತೀ ಅಮೂಲ್ಯವಾದಂಥ ವರದಿಗಳನ್ನು ಸದನದ ಮುಂದೆ ಮಂಡಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಮ್ಮ ಇಲಾಖೆಗಳ ಕಾರ್ಯನಿರ್ವಹಣೆಯ ಬಗ್ಗೆ ಎಲ್ಲಿ ಕೊರತೆಗಳು ಕಂಡುಬಂದಿವೆ, ಆ ಕೊರತೆಗಳನ್ನು ನಮೂದಿಸಿದ್ದಾರೆ. ಎಲ್ಲಿ ಒಪ್ಪಿಕೊಳ್ಳತಕ್ಕಂಥ ಸಾಧನೆಗಳಾಗಿವೆ. ಆ ಸಾಧನಗಳನ್ನು ಅಭಿನಂದಿಸಿದ್ದಾರೆ. ಅದಕ್ಕಾಗಿ ಆ ವಿಷಯ ಸಮಿತಿಗಳ ಅಧ್ಯಕ್ಷರುಗಳಿಗೆ ಮತ್ತು ಸದಸ್ಯರುಗಳಿಗೆ ನನ್ನ ಅಭಾರಗಳನ್ನು ಸಮರ್ಪಣೆ ಮಾಡುತ್ತಾ, ಈ ವಿಷಯ ಸಮಿತಿಗಳು ಒಂದು ಹೊಸ ಎಕ್ಸಿಪಿರಿಮೆಂಟ್, ಮಾನ್ಯ ರಾಮಯ್ಯನವರು ಅದನ್ನು a Big Flop ಎಂದು ಈಗಾಗಲೇ ವರ್ಣಿಸಿದ್ದಾರೆ. ಈ ವಿಷಯ ಸಮಿತಿಗಳು ಕೇವಲ ನಮ್ಮ ರಾಜ್ಯದಲ್ಲಿಯೇ ಅಲ್ಲ, ಸಂಸತ್ತಿನಲ್ಲಿಯೂ ಕೂಡ ಇದೇ ರೀತಿಯ ಎಕ್ಸಿಪಿರಿಮೆಂಟನ್ನು ಅವರು ಮಾಡುತ್ತಿದ್ದಾರೆ. ಕೇರಳದಲ್ಲೂ ಮಾಡುತ್ತಿದ್ದಾರೆ, ವೆಸ್ಟ್ ಬೆಂಗಾಲ್‌ನಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ಒಂದೇ ವರ್ಷ ಒಮ್ಮೆಗೇ ನಾವು ಯಾವುದೇ ನಿರ್ಣಯಕ್ಕೆ ಬರತಕ್ಕಂಥದ್ದು ಸಾಧುವೇ ಎನ್ನತಕ್ಕಂಥ ಪ್ರಶ್ನೆಯನ್ನು ಮಾತ್ರ ತಮಗೆ ಹಾಕಿಬಿಡುತ್ತೇನೆ. ನೀರಾವರಿ ವಿಚಾರದಲ್ಲಿ ಹಲವಾರು ಟೀಕೆಗಳು ಬಂದಿವೆ, ಸಲಹೆಗಳು ಬಂದಿವೆ. ಆ ಸಲಹೆಗಳೆಲ್ಲವನ್ನೂ ಕೂಡ ಸರ್ಕಾರ ಗಂಭೀರವಾಗಿ ಗಮನಿಸುತ್ತದೆ. ಮತ್ತು ಆ ಟೀಕೆಗಳಲ್ಲಿ ಸತ್ವ ಇದ್ದರೆ ಆ ಟೀಕೆಗಳನ್ನು ಕೂಡ ನಾವು ಸ್ವಾಗತಿಸುತ್ತೇವೆ. ನಮ್ಮ ಸಂಪನ್ಮೂಲಗಳ ಚೌಕಟ್ಟಿನಲ್ಲಿ ನಾವು ಒಂದು

ರಾಜ್ಯದ ನೀರಾವರಿ ಪ್ರಗತಿಯಾಗಲಿ, ವಿದ್ಯುತ್ ಪ್ರಗತಿಯನ್ನೇ ಆಗಲಿ ಅಳೆಯಬೇಕಾಗುತ್ತದೆ. ಹಾಗೆ ಅಳೆಯುವಂಥ ಕಾಲದಲ್ಲಿ ಆಯಾ ಸರ್ಕಾರಗಳ ಮುಂದೆ ಆಗಾಗ್ಗೆ ಬರತಕ್ಕಂಥ ಹಲವಾರು ಸವಾಲುಗಳನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ರಾಮಯ್ಯನವರು ನೀರಾವರಿ ಇಲಾಖೆಯ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ. ಒಂದು ಮಾತನ್ನು ಹೇಳಿದರು ಈ ನೀರಾವರಿ ಹೆಚ್ಚುವರಿಕೆಗೆ ವಿಶೇಷವಾದಂಥ ಪ್ರಯತ್ನಗಳೇನಾದರೂ ನೀವು ಮಾಡುತ್ತಿದ್ದೀರಿ ಎಂದಾಗ ವಿಷಯ ಸಮಿತಿ ಮುಂದೆ ಯಾವ ವಿಶೇಷವಾದಂಥ ಪ್ರಯತ್ನಗಳು ಆಗುತ್ತಿಲ್ಲ ಎಂದು ಅವರು ಹೇಳಿದರು ಎಂದು ಹೇಳಿದ್ದಾರೆ. ಮತ್ತು ಇನ್ನೊಂದು ಮಾತನ್ನು ತಾವು ಹೇಳಿದಿರಿ, ಈ ಕೃಷ್ಣಾ ಭಾಗ್ಯ ಜಲ ನಿಗಮ, ಇದು ನಿಮಗೆ ಬಂದಿರತಕ್ಕಂಥ ಮಾಹಿತಿ ಬಗ್ಗೆ ಅದು ಅಷ್ಟೇ ಆಗಿಲ್ಲ. ಆ ಬಗ್ಗೆ ಒಂದು ಹೇಳಿಕೆಯನ್ನು ಇವತ್ತಿನ ದಿವಸ ಬೆಳಗ್ಗೆಯೇ ನಾನು ಕೊಡಬೇಕಾಗಿತ್ತು. ಆದರೆ ಕೈಗಾ ಪ್ರಶ್ನೆ ಬಂದುದರಿಂದ ಈ ಹೇಳಿಕೆಯನ್ನು ಕೊಡವುದಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಸದನಧ ಮುಂದೆ ಇಡುತ್ತಿದ್ದೇನೆ. "ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸುಮಾರು 173 ಟಿ.ಎಂ.ಸಿ.ನೀರನ್ನು ಕ್ರಿಸ್ತಶಕ 2,000 ಇಸವಿಯೊಳಗಾಗಿ ಬಳಸಿಕೊಳ್ಳಲು ಯೋಜಿಸಲಾಗಿದೆ. ಇನ್ನು ನಮಗೆ ಸುಮಾರು 3,500 ಕೋಟಿ ರೂಪಾಯಿಗಳಿಂದ 4,000 ಕೋಟಿ ರೂಪಾಯಿಗಳ ಹಣದ ಅವಶ್ಯಕತೆಯಿದೆ. ಮುಂದಿನ ಆರು ವರ್ಷಗಳಲ್ಲಿ ರಾಜ್ಯದ ಸಂಪನ್ಮೂಲಗಳಿಂದ ಒದಗಿಸುವ ಮೊತ್ತದ ಜೊತೆಗೆ ಸಾರ್ವಜನಿಕರಿಂದ ಅದರಲ್ಲೂ ಮುಖ್ಯವಾಗಿ ಕೃಷ್ಣಾ ಮೇಲ್ದಂಡೆ ಯೋಜನಾ ಪ್ರದೇಶದ ಫಲಾನುಭವಿಗಳಿಂದ ಹಣವನ್ನು ಸಂಗ್ರಹಿಸಿ ಉಪಯೋಗಿಸಲು ಉದ್ದೇಶಿಸಲಾಗಿದೆ. ಯೋಜನಾ ಪ್ರಗತಿಯನ್ನು ತ್ವರಿತಗೊಳಿಸುವ ಉದ್ದೇಶದಿಂದ ಕೃಷ್ಣಾ ಭಾಗ್ಯಜಲ ನಿಗಮವನ್ನು ಸರ್ಕಾರದ ಉದ್ದಿಮೆಯಾಗಿ ಕಂಪನಿ ಕಾಯ್ದೆ 56ರ ಅಡಿಯಲ್ಲಿ ದಿನಾಂಕ 6.5.1994 ಸಕಾರದ ಆದೇಶದ ಪ್ರಕಾರ ನೊಂದಾಯಿಸಲಾಗಿದೆ. ಈ ನಿಗಮದ ಮೂಲ ಷೇರು ಧನ 3,000 ಕೋಟಿ ರೂಪಾಯಿಗಳೆಂದು ನಿಗಧಿಪಡಿಸಲಾಗಿದೆ. ನಿಗಮದ ನಿರ್ದೇಶಕರ ಮಂಡಳಿಯನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವನ್ನು ದಿನಾಂಕ 19.8.1994ರಂದು ಕಂಪನಿ ಕಾಯ್ದೆಯನ್ವಯ ನೋಂದಾಯಿಸಲ್ಪಟ್ಟಿದೆ. ನಿಗಮದ ನಿರ್ದೇಶಕರ ಮಂಡಳಿಯ ಮೊದಲನೆಯ ಸಭೆ ದಿನಾಂಕ 3.9.1994ರಂದು ಬೆಂಗಳೂರಿನಲ್ಲಿ ಜರುಗಿ ಪ್ರಸಕ್ತ ಸಾಲಿನಲ್ಲಿ 200 ಕೋಟಿ ರೂಪಾಯಿ ಮೌಲ್ಯದ ನೀರಾವರಿ ಬಾಂಡ್‌ಗಳನ್ನು ಬಿಡುಗಡೆ ಮಾಡಿ ಹಣ ಸಂಗ್ರಹಿಸಲು ನಿರ್ಧರಿಸಲಾಗಿದೆ. ಸದರಿ ನಿಗಮದ ಕಾರ್ಯ ವೈಖರಿಯನ್ನು ಗಮನಿಸಿದ ನಂತರ ಕೃಷ್ಣಾ ಕಣಿವೆ ವ್ಯಾಪ್ತಿಯ ಇನ್ನಿತರ ನೀರಾವರಿ ಯೋಜನೆಗಳನ್ನೂ ಸಹ ನಿಗಮದಡಿಯಲ್ಲಿ ತರಲು ಉದ್ದೇಶಿಸಲಾಗಿದೆ."

ಇದು ವಿಶೇಷ ಕಾರ್ಯಕ್ರಮವೇ? ಎಂದು ಹೇಳಿದಿರಿ. ಹೌದು, ಇದೊಂದು ವಿಶೇಷ ಕಾರ್ಯಕ್ರಮವಾಗಿದೆ. ಅದಕ್ಕೆ ಪ್ರತಿ ವರ್ಷ ಸರ್ಕಾರ ಕೊಡುವ ಹಣದ ಜೊತೆಗೆ ಈ ಒಂದು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದಕ್ಕೆ ಕರ್ನಾಟಕ ಜನತೆಯ ಸಹಕಾರವನ್ನು

ಕೋರುತ್ತಿದ್ದೇವೆ. ಅವರ ಸಹಕಾರ ದೊಡ್ಡ ಪ್ರಮಾಣದಲ್ಲಿ ಸಿಗುತ್ತದೆನ್ನುವ ಆಸೆ ನಮಗಿದೆ. ಅಲ್ಲದೆ, ಕ್ರಿಸ್ತಶಕ 2,000 ಇಸವಿಯೊಗಳಗೆ ಕೃಷ್ಣಾ ಯೋಜನೆಗಳೆಲ್ಲವನ್ನೂ ಮುಗಿಸುತ್ತೀರಾ? ಎಂದು ಕೇಳಿದ್ದೀರಿ. ಇದಕ್ಕೆ ಉತ್ತರವೇನೆಂದರೆ, ಅಷ್ಟರೊಳಗೆ ಮುಗಿಸಬೇಕೆಂಬುದೇ ನಮ್ಮ ಸಂಕಲ್ಪ. ಅದಕ್ಕೆ ನಾವು ಎಂತಹ ಕಾರ್ಯ ರೂಪಿಸಬೇಕೆಂಬುದರ ಬಗ್ಗೆ ನಾವು-ನೀವು ಕುಳಿತು ಯೋಗ್ಯವಾದ ನಿರ್ಧಾರಗಳನ್ನು ಮುಂದಿನ ವರ್ಷಗಳಲ್ಲಿ ತೆಗೆದುಕೊಳ್ಳಬೇಕಾಗಿದೆ. ಇದು ಬಹಳ ಮಹತ್ವದ ಜವಾಬ್ದಾರಿಯಾಗಿದ್ದು, ದೊಡ್ಡ ಸವಾಲು ಕೂಡ ಆಗಿದೆ. ಅಂತೆಯೇ ಒಂದು ಅವಕಾಶವನ್ನು ಕೂಡ ಇದು ನಮಗೆ ಕಲ್ಪಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಆಗಿಂದಾಗ್ಗೆ ಬಂದಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುತ್ತಾ ಬಂದಿರುವುದರಿಂದ ಈ ಕುರಿತು ಹೆಚ್ಚು ಮಾತನಾಡುವುದಿಲ್ಲ. ಆದರೆ, ಒಂದು ವಿಚಾರವೇನೆಂದರೆ, 1985 ರಿಂದ 1 990ರವರೆಗೆ ರಾಜ್ಯದ ನೀರಾವರಿ ಕ್ಷೇತ್ರಕ್ಕೆ ಒಟ್ಟು 1,109 ಕೋಟಿ ರೂಪಾಯಿಗಳನ್ನು ಅನುದಾನವಾಗಿ ಬಜೆಟ್‌ನಲ್ಲಿ ಉಲ್ಲೇಖಿಸಿದ್ದು, ಖರ್ಚಾದದ್ದು 986 ಕೋಟಿ ರೂಪಾಯಿಗಳು. ಹಾಗೆಯೇ 1990ರಿಂದ 1994-95ರ ಜುಲೈವರೆಗೆ ನಮ್ಮ . . . .

ಶ್ರೀ ವೈ.ಕೆ. ರಾಮಯ್ಯ : ತಾವು ಏನು ಹೇಳುತ್ತಿದ್ದೀರಿ, ಅದರಲ್ಲಿ ಮೂರು ಭಾಗಗಳನ್ನಾಗಿ ಮಾಡಿಕೊಂಡರೆ ಉತ್ತಮ. ಹೇಗೆಂದರೆ, ನಿಗದಿಪಡಿಸಿದ ಹಣವೆಷ್ಟು? ಖರ್ಚಾದಂಥ ಹಣವೆಷ್ಟು? ಮತ್ತು ಬಿಡುಗಡೆ ಮಾಡಿದ ಹಣವೆಷ್ಟು? Let there be three steps. What was the amount earmarked, what was the amount of expenditure and what is the amount that the Government has released. ಈ ತರಹ ಮೂರು ಭಾಗಗಳನ್ನಾಗಿ ಮಾಡಿಕೊಂಡು ಹೇಳಿದರೆ ನನಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : 1985ರಿಂದ 1990ರವರೆಗೆ ಒದಗಿಸಲಾದ ಹಣ 1,109 ಕೋಟಿ ರೂಪಾಯಿಗಳು, ಖರ್ಚಾದ ಹಣ ಅಂದರೆ ಬಿಡುಗಡೆಯಾದ ಹಣ 986 ಕೋಟಿ ರೂಪಾಯಿಗಳು.

ಶ್ರೀ ವೈ.ಕೆ. ರಾಮಯ್ಯ : ಇದರ ಬಗ್ಗೆ ಒಂದು ದಿವಸ ಪೂರ್ತಿ ಅಧಿಕಾರಿಗಳ ಜೊತೆ ವಿಶೇಷ ರೂಪದಲ್ಲಿ ಚರ್ಚೆಗೆ ಬಂದಿದೆ. ಖರ್ಚಾದ ಹಣವೆಂದರೆ ಬಿಲ್ಲಿಗೆ ಏನು ಹಣ ಬಂದಿರುತ್ತದೆ, That is also included in the expenditre.ಅದು ಪೇಮೆಂಟ್ ಆಗಿರುವುದಿಲ್ಲ, ಖರ್ಚಾಗಿರುತ್ತದಷ್ಟೆ. ಅದಕ್ಕೋಸ್ಕರ, ತಾವು ದಯಮಾಡಿ ಅದನ್ನು ಮೂರು ಭಾಗಗಳನ್ನಾಗಿ ಮಾಡಿಕೊಳ್ಳಿ. 984 ಕೋಟಿ ರೂಪಾಯಿಗಳು ಖರ್ಚಾಗಿದ್ದು, ಈ ರೀತಿ ಖರ್ಚಾದ ಹಣದ ಬಿಲ್ಲಿಗೆ ಇನ್ನೂ ಪೇಮೆಂಟ್ ಆಗಿಲ್ಲ. ಖರ್ಚಿನಲ್ಲಿ ಪೇಮೆಂಟ್ ಸೇರುವುದಿಲ್ಲ. ಉದಾಹರಣೆ ಸಿಮೆಂಟ್ ಬುಕ್ ಆಗಿರುತ್ತದೆ, ಪೇಮೆಂಟ್ ಆಗಿರುವುದಿಲ್ಲ. ಅದಕ್ಕೆ ಸಂಬಂಧಿಸಿದ ಬಿಲ್ ಸರ್ಕಾರದ ಮುಂದಿರುತ್ತದೆ. ಖರ್ಚಾಗಿರುತ್ತದೆ ಆದರೆ ಅದು ಬಿಡುಗಡೆಯಾಗಿರುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ನಾನು 1985ರಿಂದ 1990ರವರೆಗಿನ ವಿಚಾರ ಹೇಳುತ್ತಿದ್ದೇನೆ. ಯಾವ ಕಂಟ್ರಾಕ್ಟರ್ ತಾನೆ ಐದು ವರ್ಷಗಳ ಕಾಲ ಸುಮ್ಮನಿರುತ್ತಾನೆ? ತನಗೆ ಬರಬೇಕಾಗಿರ ತಕ್ಕಂಥ ಹಣವನ್ನು ಐದು ವರ್ಷಗಳ ಕಾಲ ಸರ್ಕಾರವನ್ನು ನಂಬಿಕೊಂಡು ಯಾರಾದರೂ ಸರ್ಕಾರದ ಹತ್ತಿರ ಹಣ ಇಟ್ಟಿರುತ್ತಾರೆಯೇ ಖರ್ಚಾದದ್ದು ಎಂದರೆ ಬಿಡುಗಡೆ ಮಾಡಿದ್ದುದು ಬಿಡುಗಡೆ ಮಾಡಿದ್ದುದು ಎಂದರೆ ಖರ್ಚಾದದ್ದು.

ಶ್ರೀ ಎಸ್.ಎಂ.ಕೃಷ್ಣ : 1990ರಿಂದ 1994-95ನೇ ಜುಲೈವರೆಗೆ 2941 ಕೋಟಿ ರೂಪಾಯಿಗಳನ್ನು ನಮ್ಮ ಬಜೆಟ್‌ನಲ್ಲಿ ಅನುದಾನವಾಗಿ ಕಾಣಿಸಿದ್ದೇವೆ. ಅದರಲ್ಲಿ ಸಣ್ಣನೀರಾವರಿ ಮತ್ತು ಇತರೆ ನೀರಾವರಿ ಕೂಡ ಸೇರಿರುತ್ತದೆ. ಇದರಲ್ಲಿ ಖರ್ಚು ಮಾಡಿರತಕ್ಕದ್ದು 2045 ಕೋಟಿ ರೂಪಾಯಿಗಳು. ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಇದರಲ್ಲಿ ಯಾವುದೂ ಬಾಕಿ ಇಲ್ಲ ಇನ್ನು ಮುಂದೆ ಬಾಕಿ ಬರುತ್ತದೆ. ನಾವು ಆ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಿರತಕ್ಕ ಮೂಲ ಉದ್ದೇಶವೇನೆಂದರೆ ನಾವು ಎರಡು ಸಾವಿರ ಇಸವಿಯೊಳಗೆ ಕೃಷ್ಣದ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎಂದು. ಈ ಪ್ರಮಾಣದಲ್ಲಿ ಹೋದರೂ ಸಹ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಮುಂದೆ ಬರತಕ್ಕ ವರ್ಷಗಳಲ್ಲಿ ನಾವು ವಿಶೇಷವಾದಂಥ ಕೆಲವು ನೀತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಕೆಇಬಿ ನವರು ತೆಗೆದುಕೊಂಡಿರುವ 200 ಕೋಟಿ ರೂಪಾಯಿಗಳು ಸಾಲದ ಬಗ್ಗೆ, ಅವರಲ್ಲಿ ಕೆಲವು ಲೋಪಗಳಾಗಿವೆ, ಸಾಲವನ್ನು ತೆಗೆದುಕೊಂಡಿರುವ ವಿಧಾನದಲ್ಲಿಯೂ ಕೂಡ ಲೋಪವಾಗಿದೆ ಎಂದು ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ. ಅದರಲ್ಲಿ ಲೋಪವಾಗಿರುವುದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ನಾವು ಆ ರೀತಿ ಸಾಲವನ್ನು ಪಡೆದುಕೊಳ್ಳುವಾಗ ಸದನಕ್ಕೆ ವಿಷಯವನ್ನು ತಂದು ಸದನದ ಶಿಫಾರಸ್ಸನ್ನು ಪಡೆದು ಕೊಳ್ಳಬೇಕಾಗಿತ್ತು. ಆದರೆ ಮಾರ್ಚ್ ತಿಂಗಳಿನಲ್ಲಿ ಸದನವು ಇದರಲ್ಲಿ ಎಂದು ಕಾಣುತ್ತದೆ. ಒಂದು ಪಕ್ಷ ಇದಿದ್ದರೂ ಸಹ ಲೋಪವಾಗಿದೆ, ಅದಕ್ಕಾಗಿ ನಾನು ಸದನದ ಕ್ಷಮೆಯನ್ನು ಕೇಳುತ್ತೇನೆ 200 ಕೋಟಿ ರೂಪಾಯಿಗಳ ಸಾಲದ ಮೆರಿಟ್ ಬಗ್ಗೆ ಹೇಳುವುದರಿಂದರೆ ಕೇಳುತ್ತೇನೆ. ತಮಗೆ ಗೊತ್ತಿದೆ, ಕಳೆದ 3-4 ವರ್ಷಗಳಿಂದ ಸಿಸ್ಟಂ. ಇಂಪ್ರೂವ್‌ಮೆಂಟ್ ಯಾವ ಪ್ರಮಾಣದಲ್ಲಿ ಆಗಿಧೆ ಎನ್ನುವುದು ಗೊತ್ತಿದೆ. ತಾವು ವಿಷಯ ಸಮಿತಿಯ ಅಧ್ಯಕ್ಷರೂ ಸಹ ಆಗಿದ್ದೀರಿ. ನಾವು ಪ್ರಮಾಣದಲ್ಲಿ ಇದಕ್ಕಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಮಾನ್ಯ ಭೈರೇಗೌಡರಿಗೆ, ಮಾನ್ಯ ವೈ.ಕೆ.ರಾಮಯ್ಯನವರಿಗೆ ಗೊತ್ತಿದೆ. ತುಮಕೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಎಂಥ ಉತ್ಕಟವಾದಂಥ ವಿದ್ಯುತ್ ಕೊರತೆ ಇತ್ತು ಎಂಬುದು ಸಹ ತಮಗೆ ಗೊತ್ತಿದೆ. ಅದನ್ನು ನಿವಾರಣೆ ಮಾಡುವುದಕೋಸ್ಕರ ಸಬ್‌ಸ್ಟೇಷನ್ ಮಾಡತಕ್ಕ, ಹೊಸದಾಗಿ ಟ್ರಾನ್ಸ್‌ಫಾರ್ಮರ್‌ನ್ನು ಅಳಪಡಿಸಿಕೊಳ್ಳತಕ್ಕದನ್ನು ಮಾಡುತ್ತಿದ್ದೇವೆ. ಹಿಂದೆ ನಮಗೆ ವಿಶ್ವ ಬ್ಯಾಂಕ್‌ನಿಂದ ಹಣವನ್ನು ಸಾಲವಾಗಿ ಕೊಡುತ್ತಿದ್ದರು. ಆದರೆ 1993ನೇ ಇಸವಿ ಆಗಸ್ಟ್ ಸೆಪ್ಟಂಬರ್‌ನಿಂದ ವಿಶ್ವ-ಬ್ಯಾಂಕ್‌ನವರು ಸಾಲವನ್ನು ಕೊಡುವುದನ್ನು ಸಸ್‌ಪೆಂಡ್ ಮಾಡಿದ್ದೇವೆಂದು ಮೊದಲು ಹೇಳಿದರು, ಅನಂತರ ಸಾಲವನ್ನು

ಕೊಡುವುದನೇ ಕ್ಯಾನ್ಸಲ್ ಮಾಡಿದ್ದೇವೆಂದು ತಿಳಿಸಿದರು. ಆಗ ನಾವು ಪರ್ಯಾಯ ಯತ್ನಗಳನ್ನೂ ಮಾಡಿದೆವು.consortium of Banks ಒಟ್ಟುಗೂಡಿಸಿ ಅವರುಗಳಿಂದ ಇನ್ನೂರು ಕೋಟಿ ರೂಪಾಯಿಗಳನ್ನು ತರಿಸಿಕೊಳ್ಳಲು ಪ್ರಯತ್ನ ಮಾಡಿದೆವು. ಆ ನಮ್ಮ ಪ್ರಕ್ರಿಯೆಗೆ ಬ್ಯಾಂಕುಗಳು ಸಾಲವನ್ನು ಕೊಡಲು ಮುಂದೆ ಬರಲಿಲ್ಲ. ಅದಕ್ಕಾಗಿ ನಾವು ಎಂಟು ತಿಂಗಳು ಕಾದಿದ್ದು ಪ್ರಯತ್ನ ಮಾಡುತ್ತಿದ್ದೆವು ಆದರೆ ಬ್ಯಾಂಕುಗಳಿಂದ ಅಥವಾ ಪರ್ಯಾಯ ಸಂಸ್ಥೆಗಳಿಂದ ನಮ್ಮ ಪ್ರಕ್ರಿಯೆಗೆ ಯಶಸ್ಸು ಸಿಗದಿದ್ದ ಕಾರಣ, ನಾವು ವಿಧಿ ಇಲ್ಲದೆ ಅನಿವಾರ್ಯವಾಗಿ ಕಲ್ಕತ್ತಾದ ಪಿಯರ್‌ಲೆಸ್ ಸಂಸ್ಥೆಯಿಂದ ಸಾಲವನ್ನು ಪಡೆದುಕೊಳ್ಳಬೇಕಾಗಿ ಬಂತು. ನನ್ನ ಪ್ರಶ್ನೆ ಏನೆಂದರೆ, ನಾವು ಸಾಲವನ್ನು ವಿಶ್ವ ಬ್ಯಾಂಕ್‌ನಿಂದ ತೆಗೆದುಕೊಂಡರೇನು, ಪಿಯರ್‌ಲೆಸ್ ಕಂಪನಿಯಿಂದ ತೆಗೆದು ಕೊಂಡರೇನು? ಬಡ್ಡಿ ವಿಚಾರದಲ್ಲಿ ಮಾತ್ರ ರಿಲವೆಂಟ್ ಆಗುತ್ತದೆ. ವಿಶ್ವ ಬ್ಯಾಂಕ್‌ನ ಸಾಲಕ್ಕೆ ಶೇಕಡಾ 12.50 ಪರ್‌ಸೆಂಟ್ ಬಡ್ಡಿಯಾದರೆ, ನಾವು ಪಿಯರ್‌ಲೆಸ್ ಸಂಸ್ಥೆಯಿಂದ ತೆಗೆದುಕೊಂಡಿರುವ ಸಾಲಕ್ಕೆ ಹದಿನೆಂಟು ಪರ್‌ಸೆಂಟ್ ಬಡ್ಡಿಯಾಗುತ್ತದೆ. ಆದರೆ ನಾವು ಪಡೆದಿರುವ ಸಾಲವನ್ನು ಸರಿಯಾದ ಸಮಯಕ್ಕೆ ವಾಪಸ್ ಮಾಡಿದರೆ ಒಂದುವರೆ ಪರ್‌ಸೆಂಟ್ ಬಡ್ಡಿ ರಿಬೇಟ್ ಸಿಗುತ್ತದೆ.ಹದಿನಾರದಿವರೆ ಪರ್ಸೆಂಟ್ ಬಡ್ಡಿ ಛಾರ್ಜ್ ಮಾಡುತ್ತಿದ್ದಾರೆ. ಪವರ್ ಫೈನಾನ್ಸ್ ಕಾರ್ಪೋರೇಷನ್‌ವರಿಗೂ ಮತ್ತು ಪಿಯರ್‌ಲೆಸ್ ಕಂಪೆನಿಯರು ಕೊಟ್ಟಿರುವಂತಹ ಸಾಲಕ್ಕೆ ಬಡ್ಡಿಯನ್ನು ಹೋಲಿಸಿ ನೋಡಿದಾಗ ನಮಗೆ ಪಿಯರ್‌ಲೆಸ್ ಕಂಪೆನಿಯವರು ಕೊಟ್ಟಿರುವಂತಹ ಸಾಲಕ್ಕೆ ಶೇ.1.ರಷ್ಟು ಬಡ್ಡಿ ಕಡಿಮೆಯಾಗುತ್ತದೆ. ಈ ಫ್ಯಾಕ್ಟನ್ನು ಸದನದ ಮುಂದೆ ಇಡುತ್ತಿದ್ದೇನೆ. ಇನ್ಫರೆಸ್ಸ್ ನೀವು ಡ್ರಾ ಮಾಡಬಹುದು. ನೀವು ಮಾರ್ಚಿ ತಿಂಗಳಲ್ಲಿ ಸಾಲ ತೆಗೆದುಕೊಂಡಿದ್ದೀರಿ. ನಿಮ್ಮ ಖಜಾನೆ ಖಾಲಿಯಾಗಿತ್ತು, ಎಂದು ಹೇಳಿದ್ದೀರಿ. ನಿಜ ನಾನು ನನ್ನ 34 ವರ್ಷಗಳ ಸಾಮಾಜಿಕ ಜೀವನದಲ್ಲಿ ಯಾವಾಗಲೂ ಮಾರ್ಚಿ ತಿಂಗಳಲ್ಲಿ ಖಜಾನೆ ತುಂಬಿರುವುದನ್ನು ನಾನು ಎಲ್ಲೂ ಕೇಳಿಲ್ಲ. ಮಾರ್ಚಿ ತಿಂಗಳು ಇರತಕ್ಕಂಥದ್ದು ಖರ್ಚು ಮಾಡುವುದಕ್ಕೆ ಆ ತಿಂಗಳಲ್ಲಿ ಯಾರು ಖಜಾನೆಯನ್ನು ತುಂಬಿಸಿ ಇಟ್ಟುಕೊಳ್ಳುವುದಿಲ್ಲ. ಇದರ ಅನುಭವ ಮಾನ್ಯ ಸಿಂಧ್ಯಾರವರಿಗೆ, ಚಂದ್ರೇಗೌಡರಿಗೆ, ಇದೆ, ಮಾನ್ಯ ಭೈರೇಗೌಡರು ಇಲ್ಲಿ ಕುಳಿತಿದ್ದರು, ಅವರಿಗೂ ಇದರ ಅನುಭವವಿದೆ, ಶ್ರೀ ರಾಮಯ್ಯನವರಿಗೂ ಅನುಭವವಿದೆ, ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿ ಕುಳಿತಿಲ್ಲ, ಅವರಿಗೆ ಅನುಭವವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕುಳಿತುಕೊಳ್ಳುವಂತಹ ವ್ಯವಸ್ಥೆಯಾದರೆ ಒಂದು ಸಾರಿ ನೋಡೋಣ.

ಶ್ರೀ ಎಸ್.ಎಂ.ಕೃಷ್ಣ : ಯಾವತ್ತಾದರೂ ನೀವು ನಮ್ಮ ಜೊತೆಯಲ್ಲಿ ಬಂದು ಕುಳಿತುಕೊಳ್ಳಬೇಕು ಎಂಬುದೇ ನಮ್ಮ ಆಸೆ. ಆದುದರಿಂದ ಸರ್ಕಾರ ಪಾಪರ್, ದಿವಾಳಿಯಾಯಿತು. ಆದುದರಿಂದ ಮಾರ್ಚಿ ತಿಂಗಳಲ್ಲಿ ರಾತ್ರೋರಾತ್ರಿ ಪಿಯರ್‌ಲೆಸ್ ಕಂಪನಿ, ಮಾರವಾಡಿ ಕಂಪನಿ, ಮತ್ತು ಇನ್ನ್ಯಾವುದೊ ಕಂಪನಿಗಳಿಂದ ಹಣ ತಂದರು...

ಶ್ರೀ ವೈ.ಕೆ. ರಾಮಯ್ಯ : ತಮಾಷೆಯೆಂದರೆ ನಾವೆಲ್ಲ ಅಲ್ಲಿ ಕುಳಿತಿರುವಾಗ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ವಿರೋಧಪಕ್ಷದ ನಾಯಕರಾಗಿ ಆಡಿದ ಮಾತುಗಳನ್ನೇ ನಾವು ಆಡಿದ ಮಾತುಗಳನ್ನು ಇವರು ಅಲ್ಲಿ ಆಡುತ್ತಿದ್ದಾರೆ. ಸ್ಥಾನಗಳು ಬದಲಾವಣೆಯಾದರೂ ಗುಣಗಳು ಬದಲಾವಣೆಯಾಗುವುದಿಲ್ಲ. ನಾವು ಇವತ್ತು ಏನು ಹೇಳುತ್ತೇವೆಯೋ ಈ ಜಾಗದಲ್ಲಿ ನೀವು ಮುಂದಿನಸಾರಿ ಅದನ್ನೇ ಹೇಳುತ್ತೀರಾ..

ಶ್ರೀ ಎಸ್.ಎಂ. ಕೃಷ್ಣ : ನೀವು ಅಂಥಹ ಪರಿಸ್ಥಿತಿ ಒದಗದಿರಲಿ ಎಂದು ನಾನು ನಮ್ಮ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ನೀವು ನಿಮ್ಮ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮದು ಯಾವ ದೇವರು?

ಶ್ರೀ ಎಸ್.ಎಂ.ಕೃಷ್ಣ : ಅದು ಮೂಲಭೂತವಾಗಿ ಎಲ್ಲರಿಗೂ ಜನರೇ ದೇವರು.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ಮಾಡಿಫಿಕೇಷನ್ ಮಾಡೋಣ ನಿಮಗೆ ಕೃಷ್ಣ ದೇವರು ನಮಗೆ ರಾಮಕೃಷ್ಣದೇವರು.

ಶ್ರೀ ಎಸ್.ಎಂ ಕೃಷ್ಣ : ಇದು ನಿಮ್ಮಲ್ಲಿ ತೀರ್ಮಾನವಾಗಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಎರಡು ಮೂರು ದೇವರುಗಳು ಇವೆ. ಮೂರು ನಾಲ್ಕು ದೇವರುಗಳು ಕಿತ್ತಾಡುತ್ತಿವೆ. ಯಾವ ದೇವರೆಂದು ಇನ್ನು ನಿರ್ಧಾರವಾಗಿಲ್ಲ

ಒಬ್ಬ ಮಾನ್ಯ ಸದಸ್ಯರು : ವೈ. ಕೆ. ರಾಮಯ್ಯನವರು ರಾಮಕೃಷ್ಣ ದೇವರನ್ನು ಒಪ್ಪುವುದಿಲ್ಲ

ಶ್ರೀ ಡಿ.ಬಿ. ಚಂದ್ರೇಗೌಡ : ರಾಮಕೃಷ್ಣನೇ ನಮ್ಮ ದೇವರು

ಶ್ರೀ ವಾಟಾಳ್ ನಾಗರಾಜ್ : ಅದೇ ನಿಜವಾದರೆ, ಇನ್ನೊಂದು ದೇವರು ಕಿತ್ತುಕೊಂಡು ಹೋಗುತ್ತದೆ. ಬೇರೆ ಕಡೆಗೆ....

ಶ್ರೀ ಎಸ್.ಎಂ. ಕೃಷ್ಣ : ಮಾರ್ಚಿ 30 ನೇ ತಾರೀಖಿನಲ್ಲಿ ಈ ಹಣವನ್ನು ಟ್ರೆಜರಿಯಲ್ಲಿ ಏಕೆ ಇಟ್ಟಿರಿ. ಎಂದು ಕೇಳಿದ್ದೀರಿ ಅದರಲ್ಲಿ ತಪ್ಪೇನು? ನಮ್ಮ ಟ್ರೆಜರಿಯಲ್ಲಿ ನಾನು ತಂದ ಸಾಲವನ್ನು ಇಡಬೇಕಾದರೆ ಅದಕ್ಕೆ ಬಡ್ಡಿ ಸಿಗುವಂತಿದ್ದರೆ ಏಕೆ ಇಡಬಾರದು ಬ್ಯಾಂಕುಗಳಿಗೆ ಏಕೆ ಮೊರೆಹೋಗಬೇಕು ನಾನು ಕಷ್ಟದಲ್ಲಿದ್ದಾಗ ಬ್ಯಾಂಕಿನವರು ನನ್ನ ರಕ್ಷಣೆಗೆ ಬಂದರೇನು? ಕೆನರಾ ಬ್ಯಾಂಕ್, ವಿಜಯ ಬ್ಯಾಂಕ್ , ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇತರ ಬ್ಯಾಂಕುಗಳನ್ನು ಕೇಳಿದ್ದೇವು . ಅವರು ಯಾರು ನಮ್ಮ ಕಡೆಗೆ ತಿರುಗಿ ನೋಡಲು ಸಿದ್ದವಿಲ್ಲದಿರುವಾಗ ನಾನು ಏಕೆ ೨೦೦ ಕೋಟಿ ರೂಪಾಯಿ ಹಣವನ್ನು ಅವರ ಬ್ಯಾಂಕ್‌ಲ್ಲಿಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಇಬಿ ಅಭಿವೃದ್ಧಿಗಾಗಿ ತಂದ ಸಾಲ ಸರ್ಕಾರ ಗ್ಯಾರಂಟಿ ಮಾತ್ರ ಕೊಟ್ಟಿದೆ.

ಶ್ರೀ ಎಸ್.ಎಂ. ಕೃಷ್ಣ : ಹೌದು, ಸರ್ಕಾರದವರು ನನ್ನ ಸಾಲಕ್ಕೆ ಗ್ಯಾರಂಟಿ ಕೊಟ್ಟರು. ಗ್ಯಾರಂಟಿ ಕೊಡದಿದ್ದರೆ ನನಗೆ ಸಾಲ ಸಿಕ್ಕುತ್ತಿರಲಿಲ್ಲ. ಅದಕ್ಕೋಸ್ಕರ ನಾನು ಟ್ರೆಜರಿಯಲ್ಲಿಟ್ಟೆ, ಮತ್ತೆ ಅವರಿಂದ ಒಂದು ಭರವಸೆ ಪಡೆದೆ. ಏನೆಂದರೆ ನಾನು ಕೊಡತಕ್ಕಂಥ ಹಣಕ್ಕೆ ಬಡ್ಡಿ ಹದಿನಾರೂವರೆ ಪರ್ಸೆಂಟ್ ಅದನ್ನು ಪಿಯರ್‌ಲೆಸ್ ಕಂಪನಿಗೆ ತುಂಬಿಕೊಡಬೇಕೆಂದು ಹೇಳಿದ್ದೆ, ಅದರಂತೆ ಮೊದಲನೆಯ ಕಂತು 4ಕೋಟಿ ರೂಗಳನ್ನು ಕಟ್ಟಿದ್ದಾರೆ. ಈಗ 2ನೇ ಕಂತು ಇನ್ನು 4ಕೋಟಿ ರೂ.ಗಳನ್ನು ಕಟ್ಟಬೇಕಾಗಿದೆ. ಈಗ ಕಟ್ಟುತ್ತಾರೆ. ಅದರಿಂದ ಏನೋ ದೊಡ್ಡ ಪ್ರಮಾದವಾಯಿತು ಎನ್ನತಕ್ಕಂಥ ಗುಲ್ಲು ಎಬ್ಬಿಸತಕ್ಕುಂಥ ಈ ವಾದವೇನಿದೆ ಈ ವಾದದಲ್ಲಿ ತಿರುಳು ಇದೆಯೆ ಎನ್ನುವಂತಹ ಪ್ರಶ್ನೆಗೆ ನಾನು ಉತ್ತರ ಕೊಡುವುದಿಲ್ಲ ಅದನ್ನು ಅಲ್ಲಿಗೆ ಬಿಡುತ್ತೇನೆ. ಇನ್ನು ಮಾನ್ಯ ಬೈರೇಗೌಡರು ವಿದ್ಯುತ್ ವಿಚಾರದಲ್ಲಿ ಪ್ರಸ್ತಾಪಮಾಡಿದ್ದಾರೆ. ಆದರೆ ಸಮಯದ ಅಭಾವದಿಂದ ನಾನು ಕೆಲವೇ ವಿಚಾರಗಳನ್ನು ಮಾತ್ರ ಹೇಳುತ್ತಿದ್ದೇನೆ, ಒಂದು ಕಾಲದಲ್ಲಿ ಸಮಾಜವಾದದ ಸಿದ್ಧಾಂತದ ನೆಲೆವೀಡಾಗಿದ್ದ ರಷ್ಯ, ಚೀನಾ ಇವುಗಳು ಈವತ್ತು ಯಾವ ಪರಿಸ್ಥಿತಿಯಲ್ಲಿ ಇವೆ ಎನ್ನುವುದನ್ನು ನೀವು ನೋಡಿದ್ದೀರಿ. ಚೈನಾದವರೂ ಮಾಡುತ್ತಿರತಕ್ಕಂಥ ಪ್ರಯತ್ನ ಬಂಡವಾಳವನ್ನು ಸ್ವಾಗತಿಸಿರುವುದಕ್ಕೆ ಬಹುಶಃ ಇನ್ನು ಯಾವ ದೇಶದವರು ಕೂಡ ಆ ಪ್ರಮಾಣದಲ್ಲಿ ಲಾಂಚಿಂಗ್ ಮಾಡುತ್ತಿಲ್ಲ. ಈಗ ನಾವೇ ಕೇವಲ ಈ ಪಿಯರ್‌ಲೆಸ್ ಕಂಪನಿಯಿಂದ ತೆಗೆದುಕೊಂಡಿರುವುದಿಲ್ಲ. ಈಗ ಒರಿಸ್ಸಾದಲ್ಲಿ ಜನತಾದಳ ಇದೆ. ವೆಸ್ಟ್ ಬಂಗಾಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಇದೆ. ಕೇರಳಾದಲ್ಲಿ ನಮ್ಮ ಸರ್ಕಾರ ಇದೆ , ಗುಜರಾತ್‌ನಲ್ಲಿ ನಮ್ಮ ಪಕ್ಷ ಇದೆ. ನಾಗಲಾಂಡ್‌ನಲ್ಲಿ ಇದೆ.

ಶ್ರೀ ಪಿ.ಜಿ. ಆರ್ ಸಿಂಧ್ಯ : ಈಗ ಒರಿಸ್ಸಾ ಸರ್ಕಾರ ತೆಗೆದುಕೊಂಡಿದ್ದಾರೆ,ವೆಸ್ಟ್ ಬಂಗಾಲ್ ಸರ್ಕಾರ ತೆಗೆದುಕೊಂಡಿದ್ದಾರೆ. ಅದು ಬೇರೆ ವಿಚಾರ. ನಾವು ಕೇಳುತ್ತಿರುವುದು KEB is an autonomous body just like any other public sector, like KSRTC NGEF etc., ಅವರು ತಂದಿರತಕ್ಕಂತಹ ಸಾಲವನ್ನು ನೀವು ಸರ್ಕಾರಕ್ಕೆ ತೆಗೆದುಕೊಳ್ಳಬಹುದೇ ಎನ್ನುವುದು ಇದರಲ್ಲಿ ಪ್ರಶ್ನೆ. ಏಕೆ ತೆಗೆದುಕೊಂಡಿರಿ?

ಶ್ರೀ ಎಸ್.ಎಂ.ಕೃಷ್ಣ : ಈಗ ತೆಗೆದುಕೊಂಡ 200ಕೋಟಿ ರೂಪಾಯಿಗಳಲ್ಲಿ 96ಕೋಟಿ ರೂಪಾಯಿಗಳನ್ನು ಕೆ.ಇ.ಬಿ ಯಲ್ಲಿ ಖರ್ಚುಮಾಡಿದ್ದೇವೆ. ಎಲ್ಲೆಲ್ಲಿ ಹೊಸ ಉಪಸ್ಟೇಷನ್ ಮಾಡಬೇಕು ಅದಕ್ಕೆ, ಈಗ ನಿಮ್ಮ ಕ್ಷೇತ್ರದಲ್ಲಿ ಒಂದು ಉಪಸ್ಟೇಷನ್ ಆಗುತ್ತಿದೆ. ಪ್ರಯಾರಿಟಿ ಮೇಲೆ ನಿಮಗೆ ಸಿಕ್ಕಿದೆ. ಪ್ರೆಯಾರಿಟಿ ಸಿಗದೆ ಇರುವವರು ಬಹಳಷ್ಟು ಜನ ಇದ್ದಾರೆ. ಅವರಿಗೆಲ್ಲಾ ಈಗ ಆಗುತ್ತದೆ. ಆ ಖರ್ಚನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಕೇಳುತ್ತಿರುವುದಿಷ್ಟೇ, ವಿದ್ಯುಚ್ಛಕ್ತಿ ಮಂಡಲಿಗೆ ಹಣಕಾಸಿನ ಕೊರತೆ ಇರುವುದರಿಂದಾಗಿ 16 ಅಥವಾ 18 ಪರ್‌ಸೆಂಟ್ ಬಡ್ಡಿ ಕೊಟ್ಟು ನೀವು ಸಾಲವನ್ನು ತೆಗೆದುಕೊಂಡು ಬಂದಿದ್ದೀರಿ. ಕೆಇಬಿಗೆ ನೀವು ತೆಗೆದುಕೊಂಡು ಬಂದಿರುವ ಬಗ್ಗೆ ಪರ್ಸೆಂಟೇಜ್ ಬಗ್ಗೆ ಅಥವಾ ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ತೆಗೆದುಕೊಂಡಿದ್ದರೆ ವರ್ಲ್ಡ್ ಬ್ಯಾಂಕ್‌ನಿಂದ ತೆಗೆದುಕೊಂಡಿದ್ದರೆ ಎಷ್ಟೊಂದು ವ್ಯತ್ಯಾಸ ಆಗುತ್ತಿತ್ತು ಎನ್ನುವುದನ್ನು ಹೇಳಿದ್ದೀರಿ. ನಾವು ಕೇಳುತ್ತಿರತಕ್ಕಂಥಾದ್ದು ಮಾರ್ಚ್ ತಿಂಗಳಿನಲ್ಲಿ ಟ್ರೆಜರಿ ಖಾಲಿ ಮಾಡುವುದಕ್ಕೆ ಇರುವುದು. ಇದೆಲ್ಲಾ ಗೊತ್ತಿರುವ ವಿಚಾರವೇ ತಾವು ಹೇಳಿರುವುದು ಸರಿ. ನೀವು ಆ ದುಡ್ಡನ್ನು ಹೇಗೆ ತೆಗೆದುಕೊಂಡಿದ್ದೀರಿ? ನಿಮಗೆ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆಯೇ?

ಶ್ರೀ ಎಸ್.ಎಂ. ಕೃಷ್ಣ : ಅಲ್ಲಿ ಆಗಿರುವ ಲೋಪಕ್ಕೋಸ್ಕರ ನಾನು ಕ್ಷಮಾಪಣೆ ಆಗಲೇ ಕೇಳಿದ್ದೇನೆ, ಆ ವಿಚಾರಗಳಲ್ಲಿ ನಾನು ಸೀದಾ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಮಾನ್ಯ ಕೃಷ್ಣಾರವರೇ, ವೈಯಕ್ತಿಕವಾಗಿ ತಮ್ಮ ಬಗ್ಗೆ ನಮಗೆ ಬಹಳ ದೊಡ್ಡ ಅಭಿಪ್ರಾಯ ಇದೆ. ಕೆಇಬಿಯವರು 10ಕೋಟಿಗಿಂತ ಹೆಚ್ಚಿಗೆ ಸಾಲ ತೆಗೆದುಕೊಳ್ಳಬೇಕಾದರೆ ಅದಕ್ಕೆ ಈ ಸದನದಲ್ಲಿ ಪ್ರಸ್ತಾವನೆಯನ್ನು ಮಂಡಿಸಿ ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಅದಕ್ಕೆ ಕ್ಷಮಾಪಣೆಯನ್ನು ಕೇಳುತ್ತೇನೆ ಎಂದು ಹೇಳಿದಿರಿ ಅಲ್ಲಿಗೆ ನಾವು ಅದನ್ನು ನಿಲ್ಲಿಸಿದ್ದೇವೆ. ನಾವು ಅದಲ್ಲಾ ಕೇಳಿದ್ದುದು. ಆ ದುಡ್ಡನ್ನು ಇದಕ್ಕೆ ಹೇಗೆ ಉಪಯೋಗಿಸಿಕೊಂಡಿರಿ ಎಂದು.

ಶ್ರೀ ಎಸ್.ಎಂ.ಕೃಷ್ಣ : ಆ ವಿಷಯವನ್ನು ನಾನು ಅಲ್ಲಿಗೆ ಬಿಟ್ಟುಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರಕ್ಕೆ ಕಷ್ಟ ಇತ್ತು ಅದಕ್ಕೆ ಉಪಯೋಗ ಮಾಡಿಕೊಂಡೆವು ಎಂದು ಹೇಳಿಬಿಡಿ.

ಶ್ರೀ ಎಸ್.ಎಂ. ಕೃಷ್ಣ : ನಮ್ಮ ದೇಶದಲ್ಲಿ ಕಷ್ಟ ಇಲ್ಲದೇ ಇರುವಂಥಹ ಸರ್ಕಾರ ಯಾವುದಿದೆ? ಅಮೇರಿಕಾ ದೇಶ ಸಂಪದ್ಭರಿತವಾದಂತಹ ದೇಶ. ಇವತ್ತು ಅಲ್ಲಿ ಬಿಲ್ ಕ್ಲಿಂಟನ್‌ನ ಪಾಪ್ಯುಲಾರಿಟಿ rating ಗಮನಿಸಿ. ನಾನು ಹೇಳುವ ವಿಚಾರ ಏನಂದರೆ ಯಾವುದೇ ಇರಲಿ ಯಾವುದೇ ದೇಶವಿರಲಿ, ಇವತ್ತು ವಿಶ್ವದಲ್ಲಿ ಈ ಹಣಕಾಸಿನ ವಿಚಾರದಲ್ಲಿ ದೊಡ್ಡ ವ್ಯತ್ಯಾಸ ಉಂಟಾಗುತ್ತಿದೆ. ಕೇಂದ್ರ ಸರ್ಕಾರಕ್ಕೂ ಅದರ ಕಾವು ಇದೆ. ಇಲ್ಲದೆ ಇದ್ದರೆ ನಾವು ಈ ಪ್ರಮಾಣದಲ್ಲಿ ಈ ರೀತಿ ಖಾಸಗೀಕರಣ ಏಕೆ ಮಾಡುತ್ತಿದ್ದೆವು. ಖಾಸಗಿ ಬಂಡವಾಳಕ್ಕೆ ಎಲ್ಲೂ ಇಲ್ಲದ ಕಿಮ್ಮತ್ತು ಏಕೆ ಬರಬೇಕಾಗಿ ಬಂತು. ಆದುದರಿಂದ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು, ಬೇರೆ ಅನ್ಯಥಾ ಭಾವಿಸಬಾರದು. ಪವರ್ ಪ್ರಾಜೆಕ್ಟ್ ಬಗ್ಗೆ ಮಾನ್ಯ ಭೈರೇಗೌಡರು ಅಪಾರವಾದ ಕಾಳಜಿಯನ್ನು ವಹಿಸಿದ್ದಾರೆ. ಚೈನಾ ದೇಶದಲ್ಲಿ ಇವತ್ತು ಅವರಲ್ಲಿ ಹಾಕುತ್ತಾ ಇರತಕ್ಕಂಥ

ಬಂಡವಾಳ ಅದು. it is a mind boggling sum. ಮಾನ್ಯ ದೇಶಪಾಂಡೆಯರು 40 ಸಾವಿರ ಕೋಟಿ ರೂಪಾಯಿಗಳ ಔದ್ಯಮಿಕ ಬಂಡವಾಳ ಎಂದು ಹೇಳಿದರು. ಪ್ರಧಾನ ಮಂತ್ರಿಗಳಾಗಲೀ ನಮ್ಮ ಮುಖ್ಯಮಂತ್ರಿಗಳಾಗಲೀ, 40 ಸಾವಿರ ಕೋಟಿ ರೂಪಾಯಿ ಬಂದು ಬಿಟ್ಟಿದೆ ಎಂದು ಹೇಳಿಲ್ಲ. ಕ್ಯಾಬಿನ್‌ಟ್‌ನಲ್ಲಿ 5 ಮಿಲಿಯನ್ ಟನ್ ಕೆಪಾಸಿಟಿ ಸಿಮೆಂಟ್ ಪ್ಲಾಂಟ್‌ನ್ನು ಅಪ್ರೂವ್ ಮಾಡಿದ್ದೇವೆ and then 7,000 MGW of power to be generated over a period of 7 years and then divide it by Rs.4 crores. ಈ ಒಂದು ಅಂಕಿ ಅಂಶಗಳನ್ನು ಹೊಂದಿಸಿಕೊಂಡು ಒಂದು ಅಂದಾಜು ಮಾಡಿದ್ದೇವೆ. 40 ಸಾವಿರ ಕೋಟಿ ರೂಪಾಯಿಗಳು ಉದ್ದಿಮೆಯಲ್ಲಿ ಬಂಡವಾಳ ಬರುತ್ತದೆ. ನಮ್ಮ ವಿದ್ಯುತ್ ಖಾಸಗೀಕರಣ ಮಾಡುವುದರಿಂದ ಇಷ್ಟೊಂದು ಮೆಗಾವ್ಯಾಟ್ ಉತ್ಪಾದನೆ ಮಾಡಲು ಖಾಸಗಿಯವರು ಮುಂದೆ ಬಂದಿದ್ದಾರೆ. ಆದ್ದರಿಂದ ನೀವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ನಿರುದ್ಯೋಗಿಗಳ ಸಂಖ್ಯೆ ತೆಗೆದುಕೊಂಡು ನೀವು ತೋರಿಸಿ ಎಂದು ಹೇಳಿದರೆ....

ಶ್ರೀ ಆರ್.ವಿ. ದೇಶಪಾಂಡೆ : ಪಿ.ಎಂ.ರವರು ಹೇಳಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ : ಪಿ.ಎಂ.ರವರು ಹೇಳಿದ್ದಾರೆ ಎಂದರೆ ಮೊಯಿಲಿಯವರು ಹೇಳಿದ್ದಾರೆ 40 ಕೋಟಿ ರೂಪಾಯಿಗಳ ಬಂಡವಾಳ ಕರ್ನಾಟಕಕ್ಕೆ ಬರುತ್ತಾ ಇದೆ ಎಂದು. ಹೌದು ಬರುತ್ತಾ ಇದೆ. It is because of liberalisation. ಆ ಕಾಂಟೆಸ್ಟ್‌ನಲ್ಲಿ ಇದನ್ನು ರೆಫರ್ ಮಾಡಿದರೇ ಹೊರತು ಅನ್ಯತಾ ಅಲ್ಲ .....

ಶ್ರೀ ಸಿ. ಭೈರೇಗೌಡ : ನಾನು ಹೇಳತಕ್ಕಂಥಾದ್ದು ಖಾಸಗಿಯವರಿಗೆ ಥರ್ಮಲ್ ಸ್ಟೇಷನ್ ವಿದ್ಯುತ್‌ನ್ನು ಕೊಡಿ. ಜಲವಿದ್ಯುತ್ ಅತ್ಯಂತ ಕಡಿಮೆ ದರದಲ್ಲಿ ಉತ್ಪತ್ತಿಯಾಗತಕ್ಕಂಥದ್ದು. ಶಾಖೋತ್ಪನ್ನದ ವಿದ್ಯುತ್ ಬಹಳ ಕಷ್ಟ ಇದೆ. ಪ್ರತಿ ನಿಮಿಷವೂ ಕೂಡ ಅಲ್ಲಿ ಸಮಸ್ಯೆ ಇದೆ. ಆದುದರಿಂದ ಈ ದೇಶದ ಬಗ್ಗೆ. ನಮ್ಮ ಬಗ್ಗೆ ಕಾಳಜಿ ಇರತಕ್ಕಂತಹ ಖಾಸಗಿಯವರಿಗೆ ಶಾಖೋತ್ಪನ್ನದ್ದನ್ನು ದಯವಿಟ್ಟು ಕೊಡಿ. ಹೈಡ್ರೋ ಸ್ಟೇಷನ್ ಏಕೆ ಕೊಡುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ : ನಾನು ಒಂದು ಹಂತದಲ್ಲಿ ತಮಗೆ ತಿಳಿದದಿರುವ ಹಾಗೆ ಈ ಕದ್ರ ಕೊಡಸಳ್ಳಿ ಗೇರುಸೊಪ್ಪೆ ಅವುಗಳ ಖಾಸಗೀಕರಣ ಮಾಡಬೇಕೆಂದು ಹೊರಟ್ಟಿದ್ದೆವು. ಆದರೆ ಅನಂತರ ನಿಮ್ಮಂಥವರ ಮಾರ್ಗದರ್ಶನ ಸಿಕ್ಕಿತು. ನಮಗೆ ಖಾಸಗೀಕರಣ ಮಾಡಬೇಡಿ. ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ಬಹಳ ದೊಡ್ಡ ದೊಡ್ಡ ಇಂಜಿನಿಯರುಗಳು ಇದ್ದಾರೆ. ತಂತ್ರಜ್ಞರೂ ಇದ್ದಾರೆಂದು ಹೇಳಿದ್ದೀರಿ. ಪತ್ರವನ್ನೂ ಬರೆದಿದ್ದೀರಿ ಆದ್ದರಿಂದ ನಮಗೆ ಜ್ಞಾನೋದಯವಾಯಿತು. ಆಗ ಅದನ್ನು ನಾವು ಅಲ್ಲಿಗೆ ಬಿಟ್ಟುಬಿಟ್ಟೆವು. ಕರ್ನಾಟಕ ಪವರ್ ಕಾರ್ಪೊರೇಷನ್ನೇ. ಇವುಗಳೆಲ್ಲವನ್ನೂ ಮಾಡಬೇಕು

ಎನ್ನುವ ನಿರ್ಣಯವನ್ನು ತೆಗೆದುಕೊಂಡೆವು. ಅಂದರೆ ಈ ಸರ್ಕಾರ ನಿಮ್ಮ ಭಾವನೆಗಳಿಗೆ ಹಾಗೂ ಟೀಕೆಗಳಿಗೆ ಸ್ಪಂದಿಸುವುದಕ್ಕೆ ಸಿದ್ಧವಾಗಿರತಕ್ಕ ಸರ್ಕಾರ ಎನ್ನುವುದಕ್ಕೆ ಇದೊಂದು ನಿದರ್ಶನ ಖಾಸಗೀಕರಣವನ್ನು ಬಿಟ್ಟುಬಿಟ್ಟು, ಈಗೆಲ್ಲಾ ಪವರ್ ಕಾರ್ಪೊರೇಷನ್ ಮಾಡಬೇಕು ಎಂದು ಹೇಳಿ. ಈಗ 600-700 ಕೋಟಿ ರೂಪಾಯಿಗಳು ನಮಗೆ ಬಂಡವಾಳ ಬೇಕು. ಈಗ ಭೈರೇಗೌಡರು ಹೇಳುತ್ತಾರೆ ಆ ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ 5 ಮತ್ತು 6 ನೇ ಘಟಕವನ್ನು ಖಾಸಗೀಕರಣಕ್ಕೆ ಕೊಡಬೇಡಿ ಎಂದು. ಬೆಳಿಗ್ಗೆ ಪ್ರಶ್ನೆ ಬಂದಿತ್ತು ತಾವು ಇರಲಿಲ್ಲ ಅಂತ ಕಾಣಿಸುತ್ತದೆ, ನಾನು ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ ಈ ದಿಸೆಯಲ್ಲಿ ಆಪ್ಷನ್ಸ್‌ನನ್ನು ಕೂಡ ಓಪನ್ನಾಗಿ ಇಟ್ಟುಕೊಂಡಿದ್ದೇವೆ, ಜಲ ವಿದ್ಯುತ್ ಇರಬಹುದು, ಅಥವಾ ಶಾಖೋತ್ಪನ್ನ ಸ್ಥಾವರಗಳಿರಬಹುದು, ಈ ರಾಜ್ಯದ ಹಿತದೃಷ್ಟಿಯಿಂದ ನಮ್ಮ ಸಂಪನ್ಮೂಲಗಳನ್ನು ನಾವು ಅಳತೆಗೊಳನ್ನಾಗಿಟ್ಟುಕೊಂಡು ಯೋಗ್ಯವಾದಂತಹ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಪವರ್ ಇವಾಕ್ಯುಯೇಷನ್ ನಿಮ್ಮ ಏನು ಅನುಮಾನಗಳಿವೆ. ಆ ಅನುಮಾನಗಳು ನನಗೂ ಇತ್ತು. ಮೊನ್ನೆ ತಾನೇ ಪವರ್ ಕಾರ್ಪೊರೇಷನ್ನಿನ ಬೋರ್ಡ್ ಮೀಟಿಂಗ್ ನಡೆಯಿತು, ಆ ಬೋರ್ಡ್ ಮೀಟಿಂಗ್ ನಮಗೆ ಸಮಜಾಯಿಶಿಯಾಗಿದೆ, ಸಮಾಧಾನವಾಗಿ, ಆ ಇವೆಕ್ಯುಯೆಷನ್ 4ನೇ ಯೂನಿಟ್ ಏನು ಡಿಸೆಂಬರ್ ತಿಂಗಳಿನಲ್ಲಿ ರೆಡಿಯಾಗುತ್ತದೆ 210 ಮೆಗಾವ್ಯಾಟನ್ನು ನಮ್ಮ ಗ್ರಿಡ್ ಸಮನ್ವಯಗೊಳಿಸುವುದಕ್ಕೆ ಬೇಕಾದಂಥ ಎಲ್ಲಾ ಸಿದ್ದತೆಗಳನ್ನು ಕೂಡ ಕರ್ನಾಟಕ ವಿದ್ಯುತ್‌ಚಕ್ತಿ ಮಂಡಲಿ ಮಾಡಿದೆ ಎಂಬ ಭರವಸೆಯನ್ನು ಈ ಸದನಕ್ಕೆ ನಾನು ಕೊಡುತ್ತೇನೆ.

ಶ್ರೀ ಸಿ. ಭೈರೆಗೌಡ : ಅಲ್ಲಿ ಮಾಡತಕ್ಕಂಥದ್ದು ಸುಲಭ ಏಕೆಂದರೆ ಅಲ್ಲೇ ಲೈನಿದೆ ಆದರೆ ಬೆಂಗಳೂರಿನವರೆಗೆ ಬರಬೇಕಲ್ಲ ಅದು ಮುಖ್ಯ. Load Centre is Bangalore. ಆ ಕಡೆ ಅಲ್ಲ, ಇಲ್ಲಿಯವರೆಗೂ ಬರತಕ್ಕಂಥದ್ದಕ್ಕೆ ನನ್ನ ಮಾಹಿತಿ ಪ್ರಕಾರ ಟ್ರಾನ್ಸ್‌ಮಿಷನ್ ಲೈನು ಆಗಿಲ್ಲ ಅದನ್ನು ದಯವಿಟ್ಟು ಹೇಳಿ.

* ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸಭಾಧ್ಯಕ್ಷರೆ ಇವತ್ತು ಬಹಳ ಕಡಿಮೆ ಸಮಯದಲ್ಲಿ ಯೂ ಕೂಡ ನಾನು ....

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮಗೆ ಅನುಮಾನಕ್ಕಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಯವರೂ ಮಾನ್ಯ ಎಸ್.ಎಂ.ಕೃಷ್ಣಾರವರೂ ಖಾಸಗೀಕರಣದ ಬಗ್ಗೆ ಮಾತನಾಡುತ್ತಿದ್ದೀರಲ್ಲ, ಇದರ ಬಗ್ಗೆಯೇ ಬಹಳಷ್ಟು ಅನುಮಾನಗಳಿವೆ. 1967ರಲ್ಲಿ ನೀವು ಏನು ಮಾತನಾಡುತ್ತಿದ್ದಿರಿ, 1971ರಲ್ಲಿ ಏನು ಮಾತನಾಡುತ್ತಿದ್ದೀರಿ 82ರಲ್ಲಿ ತಾವು ಏನು ಮಾತನಾಡುತ್ತಿದ್ದಿರಿ ಎಂಬುದನ್ನು ನಾನು ತತ್ವದ ದೃಷ್ಟಿಯಿಂದ ಹೇಳುತ್ತಿದ್ದೇನೆ. 67ರಲ್ಲಿ ಏನು ನಮಗೆ ಅನುಕೂಲವಾಗಿತ್ತು ಆಗ ನಮಗೆ ಮುಂದಾಲೋಚನೆ ಇರಲಿಲ್ಲವೆ? 71 ರಲ್ಲಿ ಇರಲಿಲ್ಲವೆ? ಈಗ ಇದ್ದಕ್ಕಿದ್ದಂತೆ 92ರಲ್ಲಿ ಇದು ಹೇಗೆ ಹುಟ್ಟಿಕೊಂಡಿತು? ಇವತ್ತು ಬೆಳಿಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಈ ಪ್ರಶ್ನೆ ಬಂದಿತ್ತು ಡಿಮ್ಯಾಂಡ್ಸ್ ಬಗ್ಗೆ

ಸಮಯವಿಲ್ಲದೆ ನಾನು ಮಾತನಾಡಲಿಲ್ಲ. ಕೇಂದ್ರದಲ್ಲಿ ಹೊಸ ಸರ್ಕಾರ ಬಂದು 3 ವರ್ಷಗಳಾಯಿತು; ಅವರು ಈ ಆರ್ಥಿಕ ನೀತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ. ನಾನು ಈ ವಿಚಾರದಲ್ಲಿ ಮಾನ್ಯ ಮೊಯಿಲಿಯವರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಅನೇಕಸಾರಿ ಅಪ್ರೋಚ್ ಮಾಡಿದ್ದರೂ ನಮಗೆ ಬಂದಿರುವುದಾದರೂ ಏನು? ನಾವು ಇದನ್ನು ಯೋಚನೆ ಮಾಡೋಣ. ಖಾಸಗೀವರು ಯಾವ ಉದ್ದೇಶದಿಂದ ಇಲ್ಲಿಗೆ ಬರುತ್ತಾರೆ? ಅಮೆರಿಕಾದಲ್ಲಿ ನಿರುದ್ಯೋಗ ಸಮಸ್ಯೆ ಇದೆಯೆಂದು ನೀವೇ ಹೇಳಿದಿರಿ ಅಲ್ಲಿರತಕ್ಕ ನೀಗ್ರೋಗಳಿಗೆ ಕ್ಲಿಂಟನ್ ಗವರ್ನ್‌ಮೆಂಟ್ ಕೆಲಸವನ್ನು ಕೊಡುವುದಕ್ಕಾಗುವುದಿಲ್ಲ. ಅನ್ನವನ್ನೂ ಕೊಡುವುದಿಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿರುವ ಬಡವರಿಗೆ ಅವರು ಹೇಗೆ ಸಹಾಯ ಮಾಡತ್ತಾರೆ? ಖಾಸಗೀಕರಣವೆಂದು ಹೇಳಿದಕೂಡಲೇ ಇಲ್ಲಿರತಕ್ಕ ಬಡತನ, ನಿರುದ್ಯೋಗ ಎಲ್ಲವೂ ಹೊರಟುಹೋಗುತ್ತದೆಯೇ? ನಿಜವಾಗಿಯೂ ಹೆಚ್ಚಾಗುತ್ತದೆಂಬುದು ತಮಗೂ ಕೂಡ ಗೊತ್ತಿರತಕ್ಕ ವಿಚಾರ. ಇವತ್ತು ಏನೋ ಒಂದು ಸಂದರ್ಭ ಬಂದಿದೆ, ತಾವು ಅಲ್ಲಿ ಕುಳಿತಿದ್ದೀರಿ, ಉತ್ತರವನ್ನು ಏನೋ ಕೊಡಬೇಕು ಅದನ್ನು ನಾವೂ ಕೂಡ ಕೇಳಿಕೊಂಡು ಹೋಗುತ್ತೇವೆ ಅಷ್ಟೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಬಹಳ ಕಡಿಮೆ ಸಮಯದಲ್ಲಿಯೇ ಮಾನ್ಯವಿರೋಧಪಕ್ಷದವರಿಂದ ಬಹಳ ಉಪಯೋಗವಾದಂಥ ಸಲಹೆಗಳು ಬಂದಿವೆ, ಮತ್ತು ಒಳ್ಳೆಯ ಚರ್ಚೆ ಕೂಡ ನಡೆದಿದೆ ಇದಕ್ಕಾಗಿ ವಿಶೇಷವಾಗಿ ನಾನು ವಿರೋಧಪಕ್ಷದ ನಾಯಕರು ಮತ್ತು ಸದಸ್ಯರನ್ನು ಅಭಿನಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು ಚರ್ಚೆಯನ್ನು ಮಾಡಿಲ್ಲ ಅಭಿನಂದನೆ ಏತಕ್ಕೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳುವಾಗ ಮಾನ್ಯ ವಾಟಾಳ್ ನಾಗರಾಜ್‌ರವರನ್ನೂ ಸೇರಿಸಿ ಅಭಿನಂದಿಸುತ್ತಿದ್ದೇನೆ. ನಾನೂ ಕೂಡ ಬಹಳ ಕಡಿಮೆ ಸಮಯವನ್ನು ತೆಗೆದುಕೊಂಡು ಉತ್ತರ ನೀಡುತ್ತೇನೆ. ಏಕೆಂದರೆ ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ವಿವರವಾಗಿ, ಸಮರ್ಪಕವಾಗಿ ಉತ್ತರವನ್ನು ಕೊಟ್ಟಿರುವುದರಿಂದ ಆ ವಿಚಾರಗಳನ್ನು ನಾನು ಪುನರುಚ್ಚಾರಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಕೊಡುವ ಅಂಕಿಅಂಶಗಳನ್ನು ನಮ್ಮ ಸರ್ಕಾರ ಸೃಷ್ಟಿ ಮಾಡಿ ಕೊಡುತ್ತಿದೆ ಎಂದು ತಾವು ಯಾರೂ ಕೂಡ ದಯವಿಟ್ಟು ತಿಳಿದುಕೊಳ್ಳಬಾರದು. ಈ ಪ್ರತಿಯನ್ನು ನಾನು ತಮಗೇ ಕೊಡುತ್ತೇನೆ. ಪ್ಲಾನಿಂಗ್ ಕಮಿಷನ್ ನಮ್ಮ ಅಧೀನದಲ್ಲಿ ಇರುವಂಥಾದ್ದಲ್ಲ. ಪ್ಲಾನಿಂಗ್ ಕಮಿಷನ್‌ನವರು ಕೊಟ್ಟಂಥ ಅಂಕಿಸಂಖ್ಯೆಗಳನ್ನು ತಾವೂ ಕೂಡ ವೆರಿಫೈ ಮಾಡಬಹುದು. ಮಾನ್ಯ ವೀರಪ್ಪಮೊಯಿಲಿಯವರು ಬಹಳ ಮಾರ್ಮಿಕವಾಗಿ ಮೋಡಿ ಮಾಡಿ ಅಂಕಿಅಂಶಗಳನ್ನು ಕೊಡುತ್ತಾರೆ, ಇದು ಕೇವಲ ಭರವಸೆಗಳು, ಕೇವಲ ಮಾತಿನಲ್ಲಿ ಹೇಳುತ್ತಾರೆ ಎಂಬ ಅನುಮಾನದಿಂದ ತಾವು ಮಾತನಾಡಬಹುದು. ಮಾನ್ಯ ಸದಸ್ಯರಾದ ರಾಮಯ್ಯನವರೂ ಕೂಡ ಒಂದು ಕಡೆ ಹೊಗಳಿ ಇನ್ನೊಂದು ಕಡೆ ನಮ್ಮ

ಅಂಕಿಅಂಶಗಳ ಬಗ್ಗೆ ತೆಗಳಿದ್ದೀರಿ. ತಮಗೆ ಗೊತ್ತಿರುವಂತೆ 92-93ರಲ್ಲಿ ನವೆಂಬರ್ ತಿಂಗಳಲ್ಲಿ ನಾನು ಅಧಿಕಾರಕ್ಕೆ ಬಂದು ಮುಖ್ಯಮಂತ್ರಿ ಆದಮೇಲೆ ಅಂದರೆ ನಮ್ಮ ಸರ್ಕಾರ ಬಂದವೇಲೆ 1915 ಕೋಟಿ ರೂಪಾಯಿ ಯೋಜನೆ ಇದ್ದರೆ, 1971 ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡಿದ್ದೇವೆ. ತಮಗೆ ಗೊತ್ತಿರಬಹುದು ನವೆಂಬರ್ ಕೊನೆಯ ಹೊತ್ತಿಗೆ 777 ಕೋಟಿ ರೂ. ಮಾತ್ರ ಯೋಜನೆಯಲ್ಲಿ ಖರ್ಚಾಗಿದೆ. ಇದು 8 ತಿಂಗಳಲ್ಲಿ. ಅನಂತರ ಕೇವಲ 4 ತಿಂಗಳಲ್ಲಿ 1200 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ನೀವು ನಮಗೆ ಇದರ ಬಗ್ಗೆ ಸರ್ಟಿಫಿಕೇಟ್‌ನ್ನು ಕೊಡಿ ಅಥವಾ ಕೊಡದೇಹೋಗಿ. ನಮ್ಮ ಅಂಕಿಸಂಖ್ಯೆಗಳನ್ನು ತಮ್ಮ ಮುಂದಿಡುತ್ತಿದ್ದೇವೆ. ಇನ್ನು ತಮಗೆ ಗೊತ್ತಿರಬಹುದು. It is very interesting. Ranking in per capita plan outlay, according to this, ಇದು ನಾನು ಸೃಷ್ಟಿ ಮಾಡಿದಂಥ ಅಂಕಿಸಂಖ್ಯೆಗಳಲ್ಲ. 1992-93ರಲ್ಲಿ ಈ ರಾಷ್ಟ್ರದಲ್ಲಿ ನಮ್ಮದ್ದು 5ನೇ ಸಾಧನ. ನಮ್ಮದು ಆಗ ಪರ್-ಕ್ಯಾಪಿಟಾ ಪ್ಲಾನ್ ಔಟ್‌ಲೇ 415 ಕೋಟಿ ರೂಪಾಯಿ ಇತ್ತು. ಕೊನೆಯದು ಮಹಾರಾಷ್ಟ್ರ, ಮೊದಲನೆಯ ಸ್ಥಾನದಲ್ಲಿದ್ದುದು ಪಂಜಾಬ್. ನಾನು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ತಾವು ತಿಳಿದುಕೊಳ್ಳಬೇಕು, ನಮ್ಮ ರಾಜ್ಯ 5ನೇ ಸ್ಥಾನದಲ್ಲಿದ್ದುದ ಪ್ಲಾನ್ ಪರ್‌ಫಾರ್ಮೆನ್ಸ್ ಪ್ರಕಾರ 1ನೇ ಸ್ಥಾನಕ್ಕೆ ಹೋಯಿತು. 41 5 ರೂ. ಇದ್ದುದು 646 ರೂ ಪರ್-ಕ್ಯಾಪಿಟಾಕ್ಕೆ ಹೋಯಿತು. 92-93ರಲ್ಲಿ 414 ರೂ. ಮಹಾರಾಷ್ಟ್ರದ್ದು ಇದ್ದುದು 499ಕ್ಕೆ ಮಾತ್ರ ಏರಿದೆ. ಇದನ್ನು ಗಮನಿಸಬೇಕು. 94-95ರಲ್ಲಿ ನಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದೇವೆ. 646 ರೂ. ನಿಂದ 711 ರೂ. ಗೆ ಏರಿದ್ದೇವೆ. ಇದು 93-94, ಮತ್ತು 94-95ಕ್ಕೆ ಸಂಬಂಧಪಟ್ಟಂತೆ ಹೇಳುತ್ತಿರುವುದು. ಈ ಕಾಪಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ನೀವು ರೆಸಲ್ಯೂಶನ್‌ನನ್ನು ನಮ್ಮ ಪರವಾಗಿ ಮಾಡುತ್ತೀರೋ ಬಿಡುತ್ತೀರೋ, ಅಭಿನಂದಿಸುತ್ತಿರೋ ಇಲ್ಲವೋ ಅದು ತಮಗೆ ಬಿಟ್ಟಿದ್ದು. ನಾನು ಅದನ್ನು ನಿರೀಕ್ಷಣೆ ಮಾಡುವುದಿಲ್ಲ. ಇದು ನಮ್ಮ ಕರ್ನಾಟಕ ರಾಜ್ಯದ ಜನತೆಯ ಶಕ್ತಿ ಇದು ನಮ್ಮ ಶಕ್ತಿಎಂದು ನಾನು ಹೇಳುವುದಿಲ್ಲ . ಪ್ಲಾನ್ ಔಟ್‌ಲೇನಲ್ಲಿ ನಮ್ಮ ರಾಜ್ಯದ್ದು ಮೊದಲನೆಯ ಸ್ಥಾನದಲ್ಲಿದೆ. ಇನ್ನುಳಿದ ವಿಚಾರಗಳ ಬಗ್ಗೆ ಅನಂತರ ಹೇಳುತ್ತೇನೆ. ಈಗ ಇದನ್ನು ವಿಸ್ತಾರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಬ್ಯಾಂಕ್‌ಪ್ಟ್ ಆಗಿದೆ ಎಂದು ತಾವು ಸಂಶಯವನ್ನು ವ್ಯಕ್ತಪಡಿಸುತ್ತಲೇ ಬಂದಿದ್ದೀರಿ. ಈ ಸರ್ಕಾರ ಬ್ಯಾಂಕ್ರಪ್ಟ್ ಆಗಿದ್ದರೆ ಟಾಪ್ ಪೊಸಿಷನ್‌ಗೆ ಹೋಗುವುದಕ್ಕೆ ಹೇಗೆ ಸಾಧ್ಯವಿದೆ? ನಾವು ಅಷ್ಟು ಹಣವನ್ನು ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಅಥವಾ ಭರವಸೆಗಳ ಸುರಿಮಳೆಯಲ್ಲಿ ನಾವು ಬದುಕ್ಕಿದ್ದರೆ, ಅಥವಾ ಆದರಿಂದಲೇ ಉಸಿರಾಡುತ್ತಿದ್ದರೆ ಇವತ್ತು ಈ ಟಾಪ್ ಪೊಸಿಷನ್‌ಗೆ ಹೇಗೆ ಹೋಗುವುದಕ್ಕೆ ಸಾಧ್ಯ? ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟಂಥ ವಿವರಗಳು ನನ್ನ ಹತ್ತಿರ ಇದೆ. ಈಗ ಇದನ್ನೆಲ್ಲ ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಸಾಧನೆಯನ್ನು 94-95ರಲ್ಲಿ ನಾವು ಸಾಧನೆ

ಮಾಡುವುದಕ್ಕೆ ಸಾಧ್ಯತೆ ಇದೆ. ಈ ಮಾತು ಸೂರ್ಯನು ಎಷ್ಟು ಸತ್ಯವೋ ಅಷ್ಟೇ ಇದೂ ಸತ್ಯ. ನಮ್ಮ ಕರ್ನಾಟಕದಲ್ಲಿ ಅದ್ವಿತೀಯವಾದ ಪ್ಲಾನ್ ಫರ್‌ಫಾರ್ಮೆನ್ಸ್‌ನ್ನು ಮಾಡಿದ್ದರೆ ಇದು ಮೊದಲನೇ ಸಾರಿ. ಇಡೀ ದೇಶದಲ್ಲಿ ನಾವು ಮೊದಲನೇ ಸ್ಥಾನವನ್ನು ಹೊಂದಿರುವುದು. ಇದನ್ನು ಮಾನ್ಯ ಪ್ರಧಾನ ಮಂತ್ರಿಗಳೂ, ಪ್ಲಾನಿಂಗ್ ಕಮಿಷನ್‌ನವರೂ ವಿಮರ್ಶೆ ಮಾಡಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಬಂದು ಕೇವಲ ಬಾಯಿಮಾತಿಗೆ ಹೊಗಳಿಹೋಗಿದ್ದಾರೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಅವರ ಹತ್ತಿರ ಎಲ್ಲಾ ಅಂಕಿ ಸಂಖ್ಯೆಗಳೂ ಇವೆ. ಆದರೆ ಈ ಅಂಕಿಸಂಖ್ಯೆಗಳನ್ನು ಚುನಾವಣೆಗಾಗಿ ಮಾಡಿದ್ದಲ್ಲ., ಇದು ವಾಸ್ತವವಾದುದ್ದು. ತಮಗೆ ಒಂದೇ ಒಂದು ಉದಾಹರಣೆ ಕೊಡುವುದಾದರೆ, ನಿಮ್ಮಲ್ಲಿ ಕೆಲವರು ಅರ್ಥಶಾಸ್ತ್ರವನ್ನು ಓದಿಕೊಂಡು ಬಂದಿರುವರಿದ್ದೀರಿ. ಮಾನ್ಯ ಚಂದ್ರೇಗೌಡರು ಪಾರ್ಲಿಮೆಂಟ್‌ನಲ್ಲಿ ಸದಸ್ಯರಾಗಿದ್ದರು. ಇಲ್ಲೂ ಕೂಡ ಸದಸ್ಯರಾಗಿದ್ದೀರಿ ಅನೇಕರು

ಅಧಿಕಾರದಲ್ಲಿದ್ದೀರಿ ಅರ್ಥಶಾಸ್ತ್ರದ ಒಂದೇ ಒಂದು ಸರಳ ತತ್ವವನ್ನು ತಮಗೆ ಹೇಳುತ್ತೇನೆ. ತಮಗೆ ಇದನ್ನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಉದಾಹರಣೆಗೆ ರೆವಿನ್ಯೂ ಡಿಫಿಸಿಟ್ ಮತ್ತು ರೆವಿನ್ಯೂ ಸರ್ಪ್ಲಸ್. ಸಂಪನ್ಮೂಲದ ಆದಾಯವಿದ್ದರೆ ರಾಜಸ್ವ ಲೆಕ್ಕದಲ್ಲಿ ಫೈನಾನ್ಸ್ ಮಾಡಬಹುದು. ರೆವಿನ್ಯೂ ಅಕೌಂಟ್ಸ್‌ನಲ್ಲಿ ಸರ್ಪ್ಲಸ್ ಇದ್ದರೆ ಪ್ಲಾನ್‌ನ್ನು ಫೈನಾನ್ಸ್ ಮಾಡಬಹುದು. ರೆವಿನ್ಯೂ ಅಕೌಂಟ್ಸ್‌ನಲ್ಲಿ ಡಿಫಾಸಿಟ್ ಇದ್ದರೆ ಪ್ಲಾನ್‌ಗಳಿಗೆ ಹೇಗೆ ಫೈನಾನ್ಸ್ ಮಾಡುವುದಕ್ಕೆ ಸಾಧ್ಯ? ಇದು ಬಹಳ ಸರಳವಾಗಿದೆ. 87-88ರಿಂದ ನನ್ನ ಹತ್ತಿರ ಅಂಕಿಸಂಖ್ಯೆಗಳಿವೆ. 87-88ರಲ್ಲಿ ರೆವಿನ್ಯೂ ಡಿಫಿಸಿಟ್-110 ಕೋಟಿ ರೂ. 88-89 ರಲ್ಲಿ 39 ಕೋಟಿ ರೂ ; 89-90ರಲ್ಲಿ-147 ಕೋಟಿ ರೂ ; 90-91ರಲ್ಲಿ77ಕೋಟಿ ರೂ ; 91-92ರಲ್ಲಿ-179ಕೋಟಿ ರೂ ; 92-93ರಲ್ಲಿ -17- ಕೋಟಿ ರೂ ;93-94ರಲ್ಲಿ ರಿವೈಸ್ ಎಸ್ಟಿಮೇಟ್ಸ್ ಪ್ರಕಾರ ಇಡೀ ಕರ್ನಾಟಕದ ಚರಿತ್ರೆಯಲ್ಲಿ ಮೊದಲನೇಯ ಸಾರಿಗೆ ಪ್ಲಸ್ 213 ಕೋಟಿ ರೂ.ಗಳು ; ಮತ್ತು 94-95ರಲ್ಲಿ ಪ್ಲಸ್ 220 ಕೋಟಿ ರೂ.ಗಳು ನೀವೇ ಹೇಳಿ ಇದು ಆರ್ಥಿಕವಾಗಿ ಸಬಲವೋ? ದುರ್ಬಲವೋ? ರೆವಿನ್ಯೂ ಸರ್ಪ್ಲಸ್ ಇದ್ದರೆ ಆ ರಾಜ್ಯ ಆರ್ಥಿಕವಾಗಿ ಸಬಲವಾಗಿದೆ ಎಂದು ಅರ್ಥ. ರೆವಿನ್ಯೂ ಡಿಫಿಸಿಟ್ ಇದ್ದರೆ ಆ ರಾಜ್ಯ ಆರ್ಥಿಕವಾಗಿ ದುರ್ಬಲಾಗಿದೆ ಎಂದು ಅರ್ಥವಾಗುತ್ತದೆ. ಇದು ಅರ್ಥಶ್ರಾದ ಮೊದಲನೆಯ ಸರಳ ತತ್ವ . ತಮಗೆ ಬೇಕಾದರೆ ಈ ಅಂಕಿಅಂಶಗಳ ಪಟ್ಟಿಯನ್ನು ಕಳುಹಿಸಿಕೊಡುತ್ತೇನೆ. ನಾವು ಒಳ್ಳೆಯ ಕೆಲಸ ಮಾಡಿರುವುದರ ಬಗ್ಗೆ ನೀವು ನಮ್ಮನ್ನು ಶಹಭಾಸ್, ಶಹಭಾಸ್, ಶಹಭಾಸ್ ಎಂದು 3 ಸಾರಿ ಹೇಳುವಂಥ ಮೆಟೀರಿಯಲ್ಸ್ ನಮ್ಮ ಹತ್ತಿರವಿದೆ. ಆದರೆ ನೀವು ಏನು ಮಾಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ವಿಸ್ತಾರವಾಗಿ ಹೇಳಲು ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಒತ್ತಾಯ ಮಾಡಿ ಇವರಿಂದ ಶಹಭಾಸಗಿರಿಯನ್ನು ತೆಗೆದುಕೊಳ್ಳಬೇಡಿ.

SRI M.VeerappA Moily : I am proud of my State. I am proud of the people of the State. We are capable. The only thing is that we have to channelise the energy of these people. We have to empower the people of Karnataka, which is possible to unlees the energy. Karnataka will stand on the top. This is my belief. I am not claiming credit. ನಮ್ಮ ಜನರಲ್ಲಿ ಆ ಶಕ್ತಿ ಇದೆ. ಈ ಕ್ರೆಡಿಟ್ ನಿಮಗೂ ಬರುತ್ತದೆ. ಕರ್ನಾಟಕ ನಂಬರ್ 1 ಎಂದು ತಲೆ ಎತ್ತಿ ದೆಹಲಿಯಲ್ಲಿ ಅಥವಾ ರಾಷ್ಟ್ರದಲ್ಲಿ ತಿರುಗಾಡಬೇಕಾದರೆ ನಿಮಗೂ ಹೆಮ್ಮೆ ಇದೆ. ನಾವು ಮಾಡಿದ್ದೇವೆ. ಮಾಡದೇ ಇದ್ದರೆ ಇವತ್ತು ಶಹಭಾಸ್‌ಗಿರಿ ಬೇಡ., ಏನೂ ಬೇಡ. ಆದರೆ ಮಾಡಿದ್ದಾರೋ ಇಲ್ಲವೋ ಎಂಬ ಪ್ರಶ್ನೆ. ಪರ್ಫಾರ್ಮೆನ್ಸ್ ನೋಡಿ. We have done it . This is a government which performs. We have performed. do you require any other criterion for this? ಇದೊಂದು ವಿಚಾರ. ಇರಿಗೇಷನ್ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಪುನಃ ಇಂದು ಸಣ್ಣ ಅನ್‌ಲೈಸ್ ಮಾಡಿ ಹೇಳುತ್ತೇನೆ ಅವರು ಹೇಳಿದ್ದನ್ನೆ. ಯಾವ ಸರ್ಕಾರವನ್ನು ಮಾಡುವುದಕ್ಕೆ ಇರುವುದಿಲ್ಲ. ಆದರೆ ಪ್ರಗತಿ ಆಗಿದ್ದರೆ ಆಗಿದೆ ಎಂಬುದನ್ನು ಒಪ್ಪಿಕೊಳ್ಳುವ ಸೌಜನ್ಯತೆ ನಮಗೆಲ್ಲರಿಗೂ ಕೂಡ ಇರಬೇಕಾಗುತ್ತದೆ. ಆ ವರ್ಷದಲ್ಲಿ ಜನತಾ ಸರ್ಕಾರದ ರೂಲ್‌ನಲ್ಲಿ ಇರಿಗೇಷನ್‌ಗೆ ಖರ್ಚು ಮಾಡಿರುವುದು 1 064.24 ಕೋಟಿ ರೂಪಾಯಿ . ಇರಿಗೇಷನ್ ಖರ್ಚು ಮಾಡಿರುವುದು ಸರಾಸರಿ 177.37 ಕೋಟಿ. ವರ್ಷೇವರ್ಷೇ ಸರಾಸರಿ ತೆಗೆದುಕೊಂಡರೆ ಕಾವೇರಿ, ಕೃಷ್ಣ ಎಲ್ಲಾ ಸೇರಿ ಅವರೇಜ್ ಖರ್ಚು ಮಾಡಿರುವುದು 177.37 ಕೋಟಿ ರೂಪಾಯಿ. ಕಾಂಗ್ರೆಸ್ ಸರ್ಕಾರ ಇದ್ದಾಗ 1989-90 ರಿಂದ 1992-93ರವರೆಗೆ ನಾಲ್ಕು ವರ್ಷಕ್ಕೆ ಒಟ್ಟು 239.26 ಕೋಟಿ ರೂಪಾಯಿ. ಸರಾಸರಿ 4 ವರ್ಷಕ್ಕೆ 59.81 ಕೋಟಿ ರೂಪಾಯಿ. 1993-94ರಲ್ಲಿ ನಾವು 718.86 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಒಂದು ವರ್ಷದ ಸರಾಸರಿ 71 5.86 ಕೋಟಿ ರೂಪಾಯಿ as against the average of Rs. 177.37 Crores. 1994-95ರಲ್ಲಿ 987.95 ಕೋಟಿ ರೂಪಾಯಿ. ಇರಿಗೇಷನ್‌ನಲ್ಲಿ ಇನ್ನೇನು ಮಾಡಬೇಕು ದಯಮಾಡಿ ಹೇಳಿ. ಪವರ್ ಬಗ್ಗೆ ಉಪ ಮುಖ್ಯಮಂತ್ರಿಗಳು ಎಲ್ಲವನ್ನೂ ಹೇಳಿದ್ದಾರೆ. ಫಿಸಿಕಲ್ ಟಾರ್ಗೆಟ್ ಕೂಡ ಸಾಕಷ್ಟು ಹೇಳಲಿಕ್ಕೆ ಇದೆ. ನಾವು ಯಾವುದನ್ನೂ ಅಡಗಿಸಿ ಇಟ್ಟಿಲ್ಲ. Our government is so much transparent. 1993-94ರಲ್ಲಿ ಏನು ಮಾಡಿದ್ದೇವೆ ಈ ತರಹ ಯಾವ ಸರ್ಕಾರ ಬಿಡುಗಡೆ ಮಾಡಿದೆ? Everyhting is in black and white. We have not suppressed.

ಫಿಸಿಕಲ್ ಅಚೀವ್‌ಮೆಂಟ್ ಇದೆ. ಫೈನಾನ್ಷಿಯಲ್ ಅಚೀವ್‌ಮಂಟ್ ಇದೆ. ನಾವೇನು ಮಾಡಿದ್ದೇವೆ ಅದು ನಿಮ್ಮ ಮುಂದಿದೆ. ಇದನ್ನು ವೆರಿಫೈ ಮಾಡಬೇಕು. ಜನತಾ ಆಡಳಿತದಲ್ಲಿ

1983-84ರಿಂದ 1988-89ರವರೆಗೆ ವರ್ಷಕ್ಕೆ ಆವರೇಜ್ ಪವರ್‌ಗೆ ಖರ್ಚು ಮಾಡಿರುವುದು 162.48 ಕೋಟಿ. 1992-93ರವರಗೆ ನಮ್ಮ ಕಾಂಗ್ರೆಸ್ ರೂಲ್‌ನಲ್ಲಿ 417.91 ಕೋಟಿ ಒಂದೇ ವರ್ಷದಲ್ಲಿ 1993-94ರಲ್ಲಿ ಪವರ್ ಸೆಕ್ಟಾರ್‌ನಲ್ಲಿ ನಾವು ಖರ್ಚು ಮಾಡಿರುವುದು 763.42 ಕೋಟಿ ರೂಪಾಯಿ. ಎಲ್ಲಿ ಕಂಪ್ಯಾರಿಷನ್ ಇದೆ? ದಯಮಾಡಿ ಹೇಳಿ. 1 994-95ರಲ್ಲಿ ಅರ್ಧ ವರ್ಷದಲ್ಲಿ 590.62 ಕೋಟಿ ರೂಪಾಯಿ ಇವತ್ತಿನವರೆಗೆ ನಾವು ಖರ್ಚು ಮಾಡಿದ್ದೇವೆ. I will send all these particulars to Mr. Chandre Gowda. I don't mind. You scrutinise it.

ಶ್ರೀ ಡಿ.ಬಿ.ಚಂದ್ರೇಗೌಡ : ಕಂಪ್ಯಾರಿಸನ್‌ಗೆ ನಾನು ಅನಗತ್ಯವಾಗಿ ಮಧ್ಯಪ್ರವೇಶ ಮಾಡುವುದಿಲ್ಲ. ಆದರೆ ಕಂಪ್ಯಾರಿಸನ್ ಮಾಡುವಾಗ ಒಟ್ಟು ಖರ್ಚಾದ ಮೊಬಲಗನ್ನು ಮಾತ್ರ ಹೇಳಬೇಡಿ. Total budgetary provision, departmental division and the percentage, ಅದು ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ I don't argue on the figures. I just want to know the percentage of money spent every year. ಜನತಾ ರೂಲ್ ಇರಬಹುದು ಕಾಂಗ್ರೆಸ್ ರೂಲ್ ಇರಬಹುದು.

Sri M. Veerappa Moily : I am sorry. The average of 4 years is upto 92-93 is not Rs. 59.81 crores, but it is Rs. 358.20 crores. ಇದೊಂದು ಮಿಸ್ಟೇಕ್ ಆಗಿದೆ. And the increase is 102 persent and not 30 percent or 20 percent.

ಶ್ರೀ ಡಿ.ಬಿ. ಚಂದ್ರೇಗೌಡ : ಬಜೆಟ್ ಇನ್‌ಕ್ರೀಸ್ ಎಷ್ಟು?

ಶ್ರೀ ಎಂ. ವೀರಪ್ಪಮೊಯಿಲಿ : ದಯಮಾಡಿ ಕಣ್ಣಿದ್ದು ಕುರುಡರಾಗಬೇಡಿ. ಕಣ್ಣಿದ್ದು ಕುರುಡರಾಗತಕ್ಕ ಕೆಲಸವನ್ನು ತಾವು ಮಾಡುವುದು ಬೇಡ. ಟ್ಯಾಕ್ಸ್ ಕಲೆಕ್ಷನ್‌ಲ್ಲಿಯೂ ಕೂಡ, 1993-94ರಲ್ಲಿ ಅದರ ಬಗ್ಗೆ ಮಾತು ಹೇಳುತ್ತೇನೆ ಹೆಚ್ಚು ಹೇಳುವುದಿಲ್ಲ. ಈ ವರ್ಷ ಇನ್‌ಕ್ರಿಸ್ ಆಫ್ ಕಲೆಕ್ಷನ್ ಅದನ್ನು ಹೇಳುತ್ತೇನೆ. ಮಾನ್ಯ ದೇಶಪಾಂಡೆಯವರೆ, ಹಳಿಯಾಳಕ್ಕೆ ಹೋಗಿ ಭಾಷಣ ಮಾಡುವುದು ಧಾರವಾಡಕ್ಕೆ ಹೋಗಿ ಭಾಷಣ ಮಾಡುತ್ತಿರಿ ನಾನು ನಿಮಗೆ ಹೇಳುತ್ತೇನೆ tax collection for the year 1994-95- first five months - my collection in Commercial Taxes is 945 crores compared to 860 crores previous year..

ಎಲ್ಲಾ ಪರ್ಸೆಂಟೇಜ್ ನನ್ನ ಹತ್ತಿರವಿದೆ ಏನೂ ಗಾಬರಿಯಾಗಬೇಕಾಗಿಲ್ಲ. 1992-93ರಲ್ಲಿ ಗ್ರೋತರೇಟ್ 9 ಪರ್ಸೆಂಟ್ ಇದ್ದರೆ 1993-94ರಲ್ಲಿ 23 ಪರ್ಸೆಂಟ್ ಗ್ರೋತ್‌ರೇಟ್ ಇದೆ. ಎಕ್ಸೈಜ್‌ನಲ್ಲಿ 1991-92ರಲ್ಲಿ 1857ಕೋಟಿ ಇದ್ದರೆ, ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ

1992-93ರಲ್ಲಿ 2028 ಕೋಟಿ. 1993-94ರಲ್ಲಿ 2573.31 ಕೋಟಿ ಎಕ್ಸೈಜ್‌ನಲ್ಲಿ ಇದ್ದರೆ ಈ ವರ್ಷದ ಟಾರ್ಗೆಟ್ 3285 ಕೋಟಿ ರೂಪಾಯಿ. ದಯಮಾಡಿ ನೋಡಿ , ಎಕ್ಸೈಜ್‌ನಲ್ಲಿ 1991-92ರಲ್ಲಿ ಕಲೆಕ್ಷನ್, 510.32 ಕೋಟಿ, 1992-93ರಲ್ಲಿ ಗ್ರೋತ್‌ರೇಟ್ ಎಷ್ಟು ಗೊತ್ತೆ? 98 ಪರ್ಸೆಂಟ್. 1992-93ರಲ್ಲಿ 515.33 ಕೋಟಿ, 1993-94ರಲ್ಲಿ ಇನ್‌ಕ್ರೀಸ್ ಆಗಿದೆ 24.83 ಪರ್ಸೆಂಟ್ ಅಂದರೆ 639.16 ಕೋಟಿ ರೂಪಾಯಿ. as against 515.33 crores --. ಈ ವರ್ಷ 806.92 ಕೋಟಿ. ಅದೇ ಪ್ರಕಾರ ಕಲೆಕ್ಷನ್ ಅದೇ ತರಹ ಇದೆ. ತಮಗೆ ಹೇಳುವುದು ಇದ್ದರೆ, ನಮ್ಮ ಗ್ರೋತ್‌ರೇಟ್, ಮಾನ್ಯ ದೇಶಪಾಂಡೆಯವರೆ ಮನಸ್ಸು ಇಟ್ಟು ಕೇಳಬೇಕು.,

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ರಿಸೋರ್ಸ್ ಮಾಬಲೈಸೇಷನ್ ಬಗ್ಗೆ ಹೇಳುತ್ತಿದ್ದಾರೆ. ತಮಗೆ ನಾನು ವಿನಂತಿ ಮಾಡುತ್ತೇನೆ, ಅವೇನೆಂದರೆ ಕಳೆದ 5 ತಿಂಗಳಲ್ಲಿ ಅಂದರೆ ಏಪ್ರಿಲ್‌ನಿಂದ ಆಗಸ್ಟ್ ತಿಂಗಳ ತನಕ ತಮ್ಮ ರಿಸೋರ್ಸ್ ಮೊಬಲೈಸೇಷನ್ ಪರ್ಸೆಂಟೇಜ್ ಮತ್ತು ಕಲೆಕ್ಷನ್ ಬಗ್ಗೆ ನಾನು ಕೇಳುತ್ತಿರುವುದು ತಮ್ಮ ಟಾರ್ಗೆಟ್ ಏನು? ಇವತ್ತು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 1994-95ರಲ್ಲಿ ನಿಮ್ಮ ಟಾರ್ಗೇಟ್ ಏನು? 3400 ಚಿಲ್ಲರೆ ಕೋಟಿ ರೂಪಾಯಿ ಇದೆ. 5 ತಿಂಗಳಿನಲ್ಲಿ ನಿಮ್ಮ ಕಲೆಕ್ಷನ್ 900 ಕೋಟಿ ಎಂದು ಹೇಳಿದ್ದೀರಿ. You have not reached 25%. How can you expect that. Your target is 3400 crores and in five months you have collected not even 25%. 12 ತಿಂಗಳುಗಳಲ್ಲಿ 5 ತಿಂಗಳದು 27-28 ಪರ್ಸೆಂಟ್ ಆಗಿದೆ.

SRI M.Veerappa Moily : I will give you the figures. 1-12-92ರಿಂದ 30-9-93 ರವರೆಗೆ ಗ್ರೋತ್‌ರೇಟ್ 14.36 ಪರ್ಸೆಂಟೇಜ್. 1-12-93ರಿಂದ 30-9-94 ರವರೆಗೆ growth rate is 33.28%. How do you answer? ದಯಮಾಡಿ ಹೇಳಿ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ 33-34 ಪರ್ಸೆಂಟ್ ಗ್ರೋತ್‌ರೇಟ್ ಒಂದು ಪಿರಿಯಡ್‌ಲ್ಲಿ ಇದ್ದದ್ದು ಇದ್ದರೆ I will just keep of. What more you require? you want 50-100%? With all the constraints we would moblise this kind of resources. These are all open to you . I am not exaggerating the resource position.. ಅಬಕಾರಿ ಇಲಾಖೆಯಲ್ಲಿಯೂ ಕೂಡ ಅದೇ ರೀತಿಯಲ್ಲಿ ನಾವು ವಿಶೇಷವಾದ ಕೆಲವು ಸಾಧನೆಗಳನ್ನು ಮಾಡಿದ್ದೇವೆ. 25 ಪರ್ಸೆಂಟ್ ಅರ್ರ್ಯಾಕ್ ಶಾಪ್‌ಗಳನ್ನು ಕಡಿಮೆ ಮಾಡಿ ಹೆಚ್ಚು ಕುಡಿಯತಕ್ಕ ಪ್ರಶ್ನೆಯಲ್ಲ, We have plugged the loopholes. We have introduced a sort of honesty. 1989-90 ರಲ್ಲಿ 570 ಲಕ್ಷ ಲೀಟರ್ ಅರ್ರ್ಯಾಕ್ ಹೋಗುತ್ತಾ ಇತ್ತು, ಇವತ್ತು 1993-94ರಲ್ಲಿ 797 ಲಕ್ಷ ಲೀಟರ್ is the

highest in the history of Karnataka. ಕನ್ಸೂಮರ್ಸ್ ಜಾಸ್ತಿಯಾಗಿಲ್ಲ 25 ಪರ್ಸೆಂಟ್ ಅರ್‍ಯಾಕ್ ಶಾಪ್‌ಗಳನ್ನು ರೆಡ್ಯುಸ್ ಮಾಡಿದ್ದೇವೆ. We managed these things... ಸೆಕೆಂಡ್, ಥರ್ಡ್, ಫೋರ್ತ್ ಇದನ್ನೆಲ್ಲ ನಿಲ್ಲಿಸಿರುವುದರಿಂದ ಇದು ಸಾಧ್ಯವಾಯಿತು. ಎಲ್ಲಾ ಕಡೆ ನಮ್ಮ ಎನ್‌ಫೋರ್ಸ್‌ಮೆಂಟ್ ಇದೆ. 1992-93ರಲ್ಲಿ ಅರ್‍ಯಾಕ್ ರೆವಿನ್ಯೂ 376ಕೋಟಿ ಇದ್ದರೆ it has jumped to 474 crores --and increase is 20%. 474 ಕೋಟಿ ರೂಪಾಯಿ ರೆವಿನ್ಯೂ ಅರ್‍ಯಾಕ್‌ನಲ್ಲಿ ಇನ್‌ಕ್ರೀಸ್ ಆಗಿದೆ. 26 ಪರ್ಸೆಂಟ್ ಅರ್‍ಯಾಕ್ ರೆವಿನ್ಯೂ ಯಾವ ಕಾಲದಲ್ಲಿಯೂ ಕೂಡ ಆಗಲಿಲ್ಲ. 98ಕೋಟಿ ರೂಪಾಯಿ ಹಣ ಎಲ್ಲಿ ಹೋಗುತ್ತದೆ? ಅರ್‍ಯಾಕ್ ಬೆಲೆ ಕಡಿಮೆ ಮಾಡಿದ್ದೇವೆ. With all that I have saved 98 crores. ಈ ಹಣ ಬೇರೆ ಕಡೆ ಹೋಗುತ್ತಿದೆ. ಅದು ನೇರವಾಗಿ ಇವತ್ತು ಸರ್ಕಾರದ ಖಜಾನೆಗೆ ಬರುತ್ತಿದೆ. Is it sin to collect 98 crores more? 98 ಪರ್ಸೆಂಟ್ ಇವತ್ತು ಕಲೆಕ್ಟ್ ಮಾಡಿ ಅದು ಖಜಾನೆಗೆ ಬರುತ್ತಾ ಇದೆ. ಬೇರೆ ದಾರಿಯಿಲ್ಲದೆ ನೇರವಾಗಿ ಸರ್ಕಾರದ ಖಜಾನೆಗೆ ಬರುತ್ತಿದೆ. 60 ಕೋಟಿ ರೂಪಾಯಿ ಬಾಟ್ಲಿಂಗ್ ಕಂಟ್ರಾಕ್ಟ್ ಇತ್ತು, ಯಾವ ಬಾಟ್ಲಿಂಗ್ ಮಾಡುತ್ತಿದ್ದರೋ ಗೊತ್ತಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಫಸ್ಟ್ ಟೈಮ್ we have done it. We have Nationalised Bottling Contract. 60 ಕೋಟಿ ರೂಪಾಯಿ ಬೇರೆ ದಾರಿ ಹಿಡಿಯುತ್ತಾ ಇತ್ತು. ಅದು ಇವತ್ತು We have conserved it.. ಎಕ್ಸೈಜ್‌ನಲ್ಲಿ ನ್ಯೂ ಪಾಲಿಸಿ ಮಾಡಿದ್ದೇವೆ. ನಾವು ಉಗ್ರಕ್ರಮವನ್ನು ಸೆಕೆಂಡ್ಸ್ ಮೇಲೆ ತೆಗೆದುಕೊಂಡಿದ್ದೇವೆ. ಇಷ್ಟು ಮಾತ್ರವಲ್ಲದೆ ತಮಗೆ ಗೊತ್ತಿದೆ, ಮಾನ್ಯ ವಾಟಾಳ್‌ನಾಗರಾಜ್‌ರವರೆ 13,730 ಅರ್‍ಯಾಕ್ ಶಾಪ್‌ಗಳು ಇದ್ದವು ಅದನ್ನು ನಾವು 1 0 ಸಾವಿರಕ್ಕೆ ಇಳಿಸಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್ : ನನಗೆ ನೀವು ಹೇಳುತ್ತಿರುವುದು, ನಾನು ಕುಡಿಯುವುದಿಲ್ಲವೆಂದು ಹೇಳುತ್ತಿರಾ?

ಶ್ರೀ ಎಂ. ವೀರಪ್ಪಮೊಯಿಲಿ : ಅದರ ಅರ್ಥ ಕುಡಿಯುತ್ತಾರೆಂದು ಅಲ್ಲ, ದಯಮಾಡಿ ಕ್ಷಮಿಸಿ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಕುಡಿಯುವುದು,ಸೇದುವುದು ಇವೆಲ್ಲ ಜ್ಞಾನಗಳು,ಜೊತೆಗೆ ವೈಯಕ್ತಿಕವಾದ ವಿಚಾರಗಳು. ಕುಡಿಯುತ್ತಿದ್ದರೆ ಕುಡಿಯುತ್ತೇನೆಂದು ಹೇಳುತ್ತೇನೆ ಅದರಲ್ಲಿ ಮುಚ್ಚುಮರೆಯೇನು? ಹಿಪಾಕ್ರಸಿ ಏನು?

ಶ್ರೀ ವಾಟಾಳ್‌ನಾಗರಾಜ್ : ಕುಡಿಯುತ್ತಿರುವುದರಿಂದ ಸರ್ಕಾರಕ್ಕೆ ಆದಾಯ 600 ಕೋಟಿ ಬರುತ್ತದೆ ಇವರು ಕುಡಿಯುವುದನ್ನು ನಾನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಎಂದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು 24ಪರ್ಸೆಂಟ್ ಗ್ರೋತ್‌ರೇಟ್ ಎಕ್ಸೈಜ್ ರೆವಿನ್ಯು is it not a commendable increase? 23 ಪರ್ಸೆಂಟ್ ರೆವಿನ್ಯೂ ಕೂಡಿದ್ದೇವೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಕೂಡ ಅದೇ ರೀತಿ ರೆವಿನ್ಯೂ ಇನ್‌ಕ್ರೀಸ್ ಮಾಡಿದ್ದೇವೆ. I must compliment my officers and my people who have done this job. This means Karnataka Administration is capable of performing, provided you give that kind of a Leadership. As Chief Minister I must first be honest so that I can expect form them. It should start from me. ಇದೇ ಪ್ರಕಾರ ಐಎಂಎಲ್‌ನಲ್ಲಿ 1989-90ರಲ್ಲಿ 36ಕೋಟಿ ಇತ್ತು, 1991-92ರಲ್ಲಿ 42ಕೋಟಿ ,1992-93ರಲ್ಲಿ 78ಕೋಟಿ it is highest collection.. ಐ.ಎಂ.ಎಲ್.ನಲ್ಲಿ 38-40 ಕೋಟಿ, ಮತ್ತೆ ಅರಾಕ್‌ನಲ್ಲಿ 98 ಕೋಟಿ ರೂಪಾಯಿ.

7.30 ಪಿಎಂ

ಶ್ರೀ ಸಿ. ಭೈರೇಗೌಡ : 1989 ರಿಂದ ಇಲ್ಲಿಯುವರೆಗೂ ನೀವೇ ಅಧಿಕಾರದಲ್ಲಿರತಕ್ಕಂಥವರು. 1991-92ರಲ್ಲಿ 40 ಕೋಟಿ ಜಾಸ್ತಿಯಾಯಿತು, ಎಲ್ಲಿ ಹೋಗುತ್ತಿತ್ತು ಎಂದರೆ, ಇದಕ್ಕೆ ನೀವೇ ಉತ್ತರ ಹೇಳಬೇಕು. ಅದೇ ಪ್ರಕಾರ ರಾಜಶೇಖರಮೂರ್ತಿಯವರ ಎಕ್ಸೈಸ್ ಮಿನಿಸ್ಟರ್ ಆಗಿದ್ದಾಗ ಎಷ್ಟು ಜಾಸ್ತಿಯಾಯಿತು, ಆಮೇಲೆ ಎಷ್ಟು ಕಡಿಮೆಯಾಯಿತು ಎಂಬುದು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಂದು ಕಡೆ ಅರಾಕ್‌ಬಾಟ್ಲಿಂಗ್ ಕಂಟ್ರಾಕ್ಟ್‌ನಲ್ಲಿ 60 ಕೋಟಿ, ಮತ್ತೊಂದು ಕಡೆ ಅರಾಕ್‌ನಲ್ಲಿ 98 ಕೋಟಿ, ಮತ್ತೊಂದು ಕಡೆ ಐ.ಎಂ.ಎಲ್ ನಲ್ಲಿ 48 ಕೋಟಿ. ಇವತ್ತು ನಾವು ನೇರವಾಗಿ ಖಜಾನೆಯ ದಾರಿ ಹಿಡಿದಿದ್ದೇವೆ. Is it my sin to do that. If it is not a sin I think I deserve some compliments from the Leader of Opposition. We have done And this cannot be done without a honest administration. I cannot do this if I also indulge in corruption or any one of our people indulge in corruption. This could be done by honest administration, performing good administration which is given. Atleast devil got it share. Even if I am devil I must share all the complimnets...

ಎಷ್ಟೆಷ್ಟು ಡಿಸ್ಟಲರಿ ಯಾರು ಯಾರು ಕೊಟ್ಟರು ಎಂಬ ಪಟ್ಟಿ ಬೇಕಾದರೆ ನಾನು ಸರ್ಕ್ಯುಲೇಟ್ ಮಾಡುತ್ತೇನೆ. I have not given a single new distilleries in my regime. Not even a single wine shop, not even

a single Brewery I have given. Rather we have reduced all those things...

ನಮಗೆ ಗೊತ್ತಿದೆ, ಟೋಪಿಯೋಕೊ ಹೆಸರಿನಲ್ಲಿ ಡಿಸ್ಟಲರಿ ಕೊಡುತ್ತಾ ಇದ್ದರು. ಬಿಜಾಪುರದಲ್ಲಿ ಟೋಪಿಯೋಕೊ ಬೆಳೆಸುವುದೇ ಇಲ್ಲ. ಕರ್ನಾಟಕದಲ್ಲಿ ಸ್ವಲ್ಪ ಬಂದಿದ್ದರೆ, ಸೌತ್ ಕೆನರಾ ಅಥವಾ ಕೊಡಗಿನಲ್ಲಿ ಸ್ವಲ್ಪ ಟೋಪಿಯೋಕೋ ಇರಬಹುದು ಟೋಪಿಯೋಕೋ ಹೆಸರಿನಲ್ಲಿ, ನನ್ನ ಪ್ರಕಾರ ಸುಮಾರು 14 ಡಿಸ್ಟಲರಿಗಳನ್ನು ಕೊಡಲಾಗಿದೆ. ಎಲ್ಲಿದೆ ಟೋಪಿಯೋಕೋ ಸರ್ಕಾರಕ್ಕೆ ಬರೀ ಟೋಪಿ ಹಾಕುತ್ತಿದ್ದರು ಟೋಪಿಯೋಕೋ ಏನಿಲ್ಲ ಈ ರಾಜ್ಯದ ಜನತೆಗೆ ಟೋಪಿ ಹಾಕುವುದಕ್ಕೆ ಟೋಪಿಯೋಕೋ ಅಷ್ಟೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಮೇಲೆ ನಾವು ಚಾಲೆಂಜ್ ಮಾಡಿಲ್ಲ. ಸುಮ್ಮನೆ ಏಕೆ ಹೇಳುತ್ತಿದ್ದೀರಿ.

ಶ್ರೀ ಸಿ. ಭೈರೇಗೌಡ : ಇದಕ್ಕೆ ನಾವು ಯಾರು ಕಾರಣಕರ್ತರಲ್ಲ. ಇದಕ್ಕೆ ನೀವೇ ಉತ್ತರ ಕೊಡಬೇಕಾಗಿರತಕ್ಕಂಥಾದ್ದು.

ಶ್ರೀ ಆರ್.ವಿ. ದೇಶಪಾಂಡೆ : ಈಗ ನಿಮ್ಮ ಬ್ರದರ್ ಸ್ಟೇಟ್ ಬ್ರದರ್ ಆಗಿಬಿಟ್ಟಿದ್ದಾರೆ. ಆದ್ದರಿಂದ ಅವರಿಗೇನು ನಾವು ಹೇಳುವುದು. ಯಾರು ಏನು ಮಾಡಿದ್ದಾರೆ ಎಂದು ನೀವೇ ಸ್ಪಷ್ಟವಾಗಿ ಹೇಳಿಬಿಡಿ.

ಶ್ರೀ ಕೆ.ಹೆಚ್ ರಂಗನಾಥ್ : ಷೇಕ್ ಹ್ಯಾಂಡ್ ಮಾಡಿಬಿಟ್ಟೀರಿ ಸ್ವಲ್ಪ ಹುಶಾರಾಗಿರಿ ಎಂದು.

ಶ್ರೀ ಆರ್.ವಿ.ದೇಶಪಾಂಡೆ : ನಾವು ಷೇಕ್‌ಹ್ಯಾಂಡ್ ಮಾಡುವುದು ಕಷ್ಟ. ಏಕೆಂದರೆ, ನೀವೂ ರಾಜೀವ್‌ಗಾಂಧಿ, ಇಂದಿರಾಗಾಂಧಿ ಫೋಟೋ ಹಾಕುತ್ತಿದ್ದೀರಿ, ಅವರೂ ಅದೇ ಫೋಟೋಗಳನ್ನು ಹಾಕುತ್ತಿದ್ದಾರೆ. ಹಾಗಾಗಿ ನೀವು ಯಾವಾಗ ಒಂದಾಗುತ್ತೀರಿ ಬೇರೆಯಾಗುತ್ತಿರಿ ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಹೆಚ್ ರಂಗನಾಥ್ : ನೀವು ಸ್ವಲ್ಪ ಹುಶಾರಾಗಿರಿ ಎಂದು ಹೇಳಿದೆ ಅಷ್ಟೆ. ರೈಲ್ವೆ ಒಳಗಡೆ ಹಾಕಿರುತ್ತಾರೆ ದೊಂಗಲು ಇದ್ದಾರೆ ಎಚ್ಚರಿಕೆ ಎಂದು. ಅದಕ್ಕೆ ನೀವು ಸ್ವಲ್ಪ ಹುಶಾರಾಗಿರಿ.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದೇ ಒಂದು ವರ್ಷದಲ್ಲಿ 120 ಕೋಟಿ ರೂಪಾಯಿ ಹೆಚ್ಚು ಮಾಡಲಾಗಿದೆ . Which year you have got? Infaltion ಕಡಿಮೆಯಾಗಬೇಕಾಗಿತ್ತು, ಅದೇ ಲೆಕ್ಕಾಚಾರ. 17 ಪರ್ಸೆಂಟ್ ಇದ್ದುದು, ನಮ್ಮ ಕಾಲದಲ್ಲಿ 9-10 ಪರ್ಸೆಂಟ್‌ನಲ್ಲಿ ಇದೆ. 126 crores increase ಇವತ್ತು, ಈ ವರ್ಷ we have stepped up, ಈ ವರ್ಷ ನಾವು ಎಕ್ಸೈಸ್

ಡಿಪಾರ್ಟ್‌ಮೆಂಟ್‌ನಲ್ಲಿ 806 ಕೋಟಿ ರೂಪಾಯಿ ವಸೂಲ್ಮಾಡಬೇಕೆಂದು ಹೇಳಿದ್ದೇವೆ. First quarter ಮೂರೇ ತಿಂಗಳಲ್ಲಿ, 160 ಕೋಟಿ ರೂಪಾಯಿ ಎಕ್ಸೈಸ್‌ನಲ್ಲಿ ಈ ವರ್ಷ ಕಲೆಕ್ಟ್ ಮಾಡಿದ್ದೇವೆ. as compared to 130 crores in the last year 1993-94 that means ಸುಮಾರು 30 ಕೋಟಿ ರೂಪಾಯಿ ಜಾಸ್ತಿ, ರೆವಿನ್ಯೂ ಕಲೆಕ್ಟ್ ಮಾಡಿದ್ದೇವೆ. revenue recepits and ಬಾಕಿ ಕರೆಂಟ್ ಅರಿಯರ್ಸ್‌ನಲ್ಲಿ ಯಾವುದೂ ಬಾಕಿ ಇಡುವುದಕ್ಕಾಗುವುದಿಲ್ಲ. ಏಕೆಂದರೆ, ಗ್ಯಾರಂಟಿ ಇರುತ್ತದೆ, ಇದು ತಮಗೆ ಗೊತ್ತಿದೆ. ಇದು ಬಹಳ ಡೀಟೈಲ್ಸ್. ಇದೇ ಕರೆಂಟ್ ಅರಿಯರ್ಸ್‌ನಲ್ಲಿ ಯಾರು ಮಾಡಲಿಕ್ಕಾಗುವುದಿಲ್ಲ. ಏಕೆಂದರೆ, ತಮಗೆ ಗೊತ್ತಿದೆ. For the first time inthe history of Bangalore, ಬೆಂಗಳೂರು ಕಂಟ್ರಾಕ್ಟನ್ನು ರದ್ದುಮಾಡಿದಂಥ ಇಚ್ಛಾ ಶಕ್ತಿ ನಮ್ಮ ಸರ್ಕಾರಕ್ಕೆ ಅಲ್ಲದೆ, ಬೇರೆ ಯಾರಿಗೂ ಇಲ್ಲ. ಮಾನ್ಯ ಭೈರೇಗೌಡರೇ ಹೇಳಿ; ಬೆಂಗಳೂರು ಅರಾಕ್ ಕಂಟ್ರಾಕ್ಟನ್ನೇ ಕ್ಯಾನಲ್ಸ್ ಮಾಡಿದಂಥ ಇನ್ನೊಂದು ಸರ್ಕಾರ ಕರ್ನಾಟಕದಲ್ಲಿ ಹಿಂದೆ ಇದ್ದಿದ್ದರೆ, ದಯಮಾಡಿ ಹೇಳಿ, I have cancelled it because my loyalty is to this sacred Vidhanasoudha, my loyalty is not other people that is undivided loyalty goes to the Government Treasury, ದೇವರಿಗೆ ಯಾವ ರೀತಿಯಲ್ಲಿ ಹುಂಡಿ ಹಾಕುತ್ತೇವೆಯೋ ಹಾಗೆಯೇ ಸರ್ಕಾರದ ಹಣ ಹುಂಡಿ ಇದ್ದಹಾಗೆ. I have given that sacred place to this Vidhanasoudha. My loyalty absolutely to the people of Karnataka, to this Vidhanasoudha and my treasury and not to the people who are making the so called lobbies. My lobby is people, my lobby is treasury, mylobby is this House. I have not surrendered and yielded even at the cost of losing my chair. I will never yeild to those people..

ಶ್ರೀ ಸಿ.ಭೈರೇಗೌಡ : ನೀವು ಕೆಲವು ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದ್ದೀರಿ. ಈ ಸದನದಲ್ಲಿ, ಒಳ್ಳೆಯ ಕೆಲಸ ಮಾಡಿರುವುದನ್ನು ಹೇಳಿದ್ದೀರಿ. ಈ ಸದನದಲ್ಲಿ ತಮಗೆ ಶಹಭಾಸ್‌ಗಿರಿಯನ್ನು ಕೊಟ್ಟಿದ್ದೇನೆ. ಅದು ಕೂಡ ನಿಜ. ಅದು ಕಡತದಲ್ಲಿ ಇದೆ. ಈ ವರ್ಷ ಏನಾಗಿದೆ, ಬೆಂಗಳೂರಿನಲ್ಲಿ ಇವತ್ತು ಸಾರಾಯಿ ಮಾರಾಟ ಕಡಿಮೆಯಾಗಿದೆ. ಇವತ್ತು ನಾವು 5ನೇ ತಾರೀಖಿನಲ್ಲಿದ್ದೇವೆ, ಹೋದ ತಿಂಗಳು ಎಷ್ಟು ಸಾರಾಯಿ ಖರ್ಚಾಯಿತು. ಮತ್ತೆ ಹೋದ ವರ್ಷ ಎಷ್ಟು ಖರ್ಚಾಯಿತು ಎಂಬ ಲೆಕ್ಕಕೊಡಿ. ಬೆಂಗಳೂರು ನಗರದ್ದೇ ಕೊಡಿ ಗೊತ್ತಾಗುತ್ತದೆ.

SRI M. VEERAPPA MOILY : Even Bangalore details are with me.. ಆದರೆ, ಬಹಳ ಸಮಯ ಹಿಡಿಯತ್ತದೆ. ಬೆಂಗಳೂರು ಮತ್ತು ಪ್ರತಿ

ಜಿಲ್ಲೆಯ ಬಗ್ಗೆಯೂ ನನ್ನ ಹತ್ತಿರ ರೆಕಾರ್ಡ್ ಇದೆ. ಆಮೇಲೆ, ಈಗ ಸನ್ಮಾನ್ಯ ಚಂದ್ರೇಗೌಡರು ಇಲ್ಲಿ ಇಲ್ಲ. ನಮ್ಮ ನೆಚ್ಚಿನ ನಾಯಕರಾದಂಥ, ಪ್ರಧಾನಿ, ನರಸಿಂಹರಾಯರು ಮೊನ್ನೆ ಬಂದರು. ಅವರು ಒಂದು ಮಾತು ಹೇಳಿದರು. ಮೊಯ್ಲಿಯವರು ಹೇಳಿದರು, 40 ಸಾವಿರ ಕೋಟಿ ಇನ್‌ವೆಸ್ಟ್‌ಮೆಂಟ್ ಆಗಿದೆ ಎಂದು, ಅದನ್ನು ಸನ್ಮಾನ್ಯ ನರಸಿಂಹರಾಯರು ಹೇಳಿಬಿಟ್ಟರು. Yes, we have said. It is a document of the CMI , New Delhi., ಏಕೆಂದರೆ ನೀವು ಹೇಳುತ್ತೀರಿ. ಮೊಯ್ಲಿಯವರು ಏನೋ ಬರುಡೆ ಬಿಡುತ್ತಿದ್ದಾರೆ, ಈಗ ಅದರ global theory. ಆಗುತ್ತಿದೆ. ಆದ್ದರಿಂದ, ಇದು ಏನಾಗುತ್ತದೆ, ನೀವು ಹೇಳುತ್ತಲೇ ಇರುತ್ತೀರಿ. ಅದು ಜನಗಳಿಗೆ ಕಿವಿಯಲ್ಲಿ ಬಾರಿಸುತ್ತಲೇ ಇರುತ್ತದೆ. Central Monitoring Indian Economy, Bombay. They have given a report. Volume I , December, 93. I am not referring to the latest.. ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದರು. ಇವತ್ತು ಕ್ಯಾಬಿನೆಟ್‌ನಲ್ಲಿ, we cleared a project of about 1600 crores. practically every week we are clearing about 2,000 to 3,000 crores . ಸಿ.ಎಂ.ಐ.ಇ. ನನ್ನ ರೆಕಾರ್ಡ್ ಅಲ್ಲ . ಅದರ ಪ್ರಕಾರ, As on December, 93. This is Investment projects in Karnataka proposed and under implementation as at October 1993.. This is an independent body. Page 6. We are now placed in 3rd place in Industrial Development. AndhraPradesh, Maharastra, Karnataka. ನಮ್ಮದು ಎಷ್ಟು ಎಂದು ಹೇಳಿದರೆ, 20,460 ಕೋಟಿ,ಎಲೆಕ್ಟ್ರಿಸಿಟಿ 14,022 ಕೋಟಿ ಅಲ್ಲಿಗೆ ಎಷ್ಟಾಯಿತು. 34,022 ಕೋಟಿ both in electricity and power.. ಕನ್ನಡಿಗರ ಸಮೃದ್ಧಿ, ಕರ್ನಾಟಕದ ಸಮೃದ್ಧಿ.

ಶ್ರೀ ಆರ್.ವಿ. ದೇಶಪಾಂಡೆ : ಬಂಗಾರಪ್ಪನವರೂ ಸಹ ಅಮೇರಿಕಾಕ್ಕೆ ಹೋಗಿ 2 ಸಾವಿರ, 3 ಸಾವಿರ ಕೋಟಿ ಪ್ರಾಜೆಕ್ಟ್ ತಂದರು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಹೆಮ್ಮೆ ಇದೆ. ಆದರೆ ನೀವೇನು ಮಾಯಮಂತ್ರದಲ್ಲಿ ಹೇಳುತ್ತಿದ್ದೀರೋ ನಮಗೆ ಅರ್ಥವಾಗುತ್ತಿಲ್ಲ. ಪ್ರತಿ ಕ್ಯಾಬಿನೆಟ್‌ನಲ್ಲೂ 200 ಕೋಟಿ, 300 ಕೋಟಿ, 600ಕೋಟಿ. ಇದು ಎಲ್ಲಿಗೆ ಹೋಗುತ್ತಿದೆ. ನೀವು ಹೇಳುತ್ತಿರುವುದು ನಮಗೆ ಅರ್ಥವಾಗುತ್ತಾ ಇಲ್ಲ.

ಶ್ರೀಎಂ.ವೀರಪ್ಪಮೊಯಿಲಿ : ನಾನು ಅಂಕಿಸಂಖ್ಯೆ ಕೊಡುತ್ತಿದ್ದೇನೆ, ಇದು ಸೆಂಟ್ರಲ್ ಮಾನಿಟರಿಂಗ್ ಎಕಾನಮಿ (ಸಿ.ಎಂ.ಐ.ಇ) ಅವರದು. ಇದರಲ್ಲಿ ಒಟ್ಟು ಎಲೆಕ್ಟ್ರಿಸಿಟಿ ರೈಲ್ವೆ ಇನ್‌ವೆಸ್ಟ್‌ಮೆಂಟ್ ಅದು ಸೇರಿಸಲಿಲ್ಲ. ಅದೂ ಕೂಡ ಇದೆ. Investment of Indian railyways has not been included. ಈಗ ಸಾಕಷ್ಟು ಬ್ರಾಡ್‌ಗೇಜ್

ಆಗುತ್ತಿದೆ. ರೈಲ್ವೆಯಲ್ಲಿ ಕೂಡ ಸಾವಿರಾರು ಕೋಟಿ ರೂಪಾಯಿ ಇನ್‌ವೆಸ್ಟ್‌ಮೆಂಟ್ ಆಗುತ್ತಿದೆ. That is not given here. ಇರಿಗೇಶನ್ ಕೂಡ ಪಬ್ಲಿಕ್‌ಸೆಕ್ಟಾರ್ ಇನ್‌ವೆಸ್ಟ್‌ಮೆಂಟ್‌ಗೆ ಹಾಕುತ್ತಾರೆ ಅದು 6,389 crores of Rupees. The number of projects is - 146. Even according to the statistics of the CMI the investment is Rs. 40,866 crores as on December 1993. Now, we are in the month of September. So, we have added upon it. ಅದು ನಾವು ಸೇರಿಸಲಿಲ್ಲ. ನಿನ್ನೆ ನಾವು ಕ್ಲಿಯರ್ ಮಾಡಿದ್ದುದು ಹೇಳಲಿಲ್ಲ. ಉಳಿದ ಇನ್‌ವೆಸ್ಟ್‌ಮೆಂಟ್ ಪ್ರೊಫೈಲ್ ಬಂದಿದ್ದು ಹೇಗೆ ಅದಕ್ಕೆ ನಾನು ಹೇಳಿದೆ it is leaving electricity. The proposed projects and under implementation of projects in the industrial sector it self comes to Rs. 40,000 crores. ಮಂಗಳೂರು ಆಯಿಲ್ ರೀ ಫೈನರಿಯ ಒಂದು ಎರಡು ಉದಾಹರಣೆ ಹೇಳಿಬಿಡುತ್ತೇನೆ ಏಕೆಂದರೆ ಎಲ್ಲಾ ನಮ್ಮ ಕಣ್ಣಿಗೆ ಕಾಣತಕ್ಕಂಥಾದ್ದು ಅನೇಕ ಇವೆ ಆದರೆ ಎರಡು ಉದಾಹರಣೆ ಮಾತ್ರ ಹೇಳುತ್ತೇನೆ. ನಾನು ಪಟ್ಟಿಪಟ್ಟಿ ಹೇಳಬಹುದು ಇಂತಹ ಕೈಗಾರಿಕೆ ಇಲ್ಲಿ ಆಗಿದೆ ಇಷ್ಟು ಇಂಡಸ್ಟ್ರಿ ಆಗಿದೆ, ಇಲ್ಲಿ ಬರುತ್ತಿದೆ ಇಂತಹ ಒಂದು ಸ್ಟೇಟ್‌ನಲ್ಲಿದೆ ಎಂದು ಹೇಳಬಹುದು. It will take another one hour only on industry. ತಮಗೆ ಗೊತ್ತಿದೆ ಅಧ್ಯಕ್ಷರೇ when I took over as the Chief Minister, ಒಂದು ಹಿಡಿ ಮಣ್ಣು ತೆಗೆಯಲಿಲ್ಲ. ಮಂಗಳೂರು ಆಯಿಲ್ ರೀಫೈನ್‌ರಿ ಟನ್ ಇತ್ತು. 3 ಮಿಲಿಯನ್ ಟನ್ ಇದ್ದದ್ದು because of the climate and the environment created by us they moved to 9 million tonnes. 3 ಮಿಲಿಯನ್ ಟನ್ ಇದ್ದದ್ದು 9 ಮಿಲಿಯನ್ ಟನ್ ಕೆಪ್ಯಾಸಿಟಿಗೆ ಇನ್‌ಕ್ರಿಜ್ ಮಾಡಿದ್ದಾರೆ. ನೀವು ದಯಮಾಡಿ ಹೋಗಿ ನೋಡಬೇಕು ಇವತ್ತು. We handed over the land. ನಾವು ಜಮೀನು ಕೊಟ್ಟಿದ್ದೇವೆ. ಅದೇ ರೀತಿ ಎಲ್ಲಾ ರೀತಿಯ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದೇವೆ. Within a period of 1 1/2 years they have completed 55% of the work and in the next coming year i.e., 1995 the project will be comissioned. Can it be done without a vibrant policy of the State Government? That is why all the investors (from home and abroad) are inspired by the climatic condition of Karnataka as far as setting up industries are concerned. They can see the living example. 55% of the civil work is over and in 1995 they are going to commission the project. ಇದು ಭರವಸೆಯೇ ಇದು ಸುಳ್ಳಾ ಇದು. Is it not sufficient to show that the industrial climate is good in our State?

ವಿಜಯನಗರ ಸ್ಟೀಲ್ ಪ್ಲಾಂಟ್ ಎಷ್ಟು ವರ್ಷ 20-25 ವರ್ಷಗಳಿಂದ ನಾವು ತೀರ್ಮಾನ ತೆಗೆದುಕೊಳ್ಳುತ್ತಿದ್ದೆವು ಆಗುತ್ತಿರಲಿಲ್ಲ. ಇವತ್ತು ವಿಜಯನಗರ ಸ್ಟೀಲ್ ಪ್ಲಾಂಟ್ ಮಾಡಲು ಜಿಂದಾಲ್‌ನರು ಕೆಲಸ ಶುರು ಮಾಡಿದ್ದಾರೆ. The work has been commenced and it is going in a big speed. It may be started in 1995. Shares have been issued. Now, I come to Information and Technological part. ಅವರು ಇಲ್ಲಿ ಮಾಡಬೇಕೆನ್ನುವ ಅಪೇಕ್ಷೆ ಇರಲಿಲ್ಲ ಸುಮಾರು 540 ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಪ್ರತಿ ವರ್ಷ 2500 ಕೋಟಿ ರೂಪಾಯಿಗಳ ಟರ್ನ್ ಒವರ್ ಬೆಂಗಳೂರು ಇನ್‌ಫರ್ಮೆಶನ್ ಟೆಕ್ನಾಲಜಿಕಲ್ ಪಾರ್ಟ್ ಇಲ್ಲಿ ಬಂದಂತಹ ಡೆಲಿಗೇಷನ್ ಇಲ್ಲಿ ಮಾಡಬೇಕೆಂದು ಬಂದಿದ್ದು ಅಲ್ಲ ಬೇರೆ ರಾಜ್ಯದಲ್ಲಿ ಮಾಡಬೇಕೆಂದು ಬಂದಿದ್ದರು. They were inspired by the industrial climate. can you imagaine that within a period of 4 months the project was lined up. The Singapore Prime Minister came here, laid the the foundation stone and launched the project. Today 50% of the places (project) have booked in the global market. The land has been handed over and the company has been registered. ಈ ಸ್ಪೀಡ್‌ನಲ್ಲಿ ನಾವು ಹೋಗುತ್ತಿದ್ದೇವೆ. Apart from electricity projects, ಎಲೆಕ್ಟ್ರಿಸಿಟಿ ಪ್ರಾಜೆಕ್ಟ್ ಬಗ್ಗೆ ಈಗಾಗಲೇ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ Within 2-3 years we are going to be self-suuficient in the field of power generation, system improvement ect., About 2000 MW more of power could be generated and regenerated within 1 1/2 years which has never happened in the hisotry of Karnataka. ಇದು ನಡೆದಿದೆ ಇವತ್ತು ಏನು ನಮ್ಮ ಪ್ರಧಾನಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ It is something more than what he has said. It is not based on mere hallow statement of Mr. Moily, it is based on the statement issued by an independent agency. ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ಕೂಡ ನಾವು ಸಾಕಷ್ಟು ಕೆಲಸ ಮಾಡಿದ್ದೇವೆ. ದೊಡ್ಡ ಪಟ್ಟಿ ಹೇಳಬಹುದು. ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಅದಕ್ಕೆ ಸ್ಥಾನಮಾನ ಕೊಟ್ಟಿದ್ದೇವೆ. ಕನ್ನಡ ಜಾಗೃತಿ ವರ್ಷ ಮಾಡಿದ್ದೇವೆ. ಒಂದನೇ ಏಪ್ರಿಲ್‌ನಿಂದ ಹೊರಡಿಸಲಾದ ಎಲ್ಲಾ ಆದೇಶ ಸುತ್ತೋಲೆ ಅಧಿಕೃತಜ್ಞಾಪನಾಪತ್ರ ಕನ್ನಡದಲ್ಲಿ ಇರತಕ್ಕಂಥಾದ್ದು ಎಂದು ಮಾಡಿದ್ದೇವೆ. ಒಂದನೇ ಜೂನ್ 93ರಿಂದ ಕಡತಗಳನ್ನು ಕನ್ನಡದಲ್ಲಿ ನಿರ್ವಹಿಸತಕ್ಕದ್ದು ಮತ್ತು ಟಿಪ್ಪಣಿಗಳು ಕನ್ನಡದಲ್ಲಿ ಇರತಕ್ಕದ್ದು ಆಗಸ್ಟ್ 15,93ರ ನಂತರ ಸಚಿವರು ಮತ್ತು ಅಧಿಕಾರಿಗಳಿಗೆ ಬರುವ ಕಡತಗಳಲ್ಲಿ ಟಿಪ್ಪಣಿಗಳು ಕನ್ನಡದಲ್ಲಿ ಇರದಿದ್ದರೆ ಕಡತಗಳನ್ನು ಹಿಂದಿರಿಗಿಸಲು ಕಟ್ಟುನಿಟ್ಟಾದ ಸೂಚನೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ನೋಡಿ ಕೃಷಿ ಇಲಾಖೆ ಕೈ ಪಿಡಿ ಇಂಗ್ಲೀಷ್‌ನಲ್ಲಿದೆ. ಇದು 1994-95ನೇ ಸಾಲಿನದ್ದು. ನಾವು ಹೇಳುವುದನ್ನು ಕೇಳುವಷ್ಟು ತಾಳ್ಮೆ ಇಲ್ಲವಲ್ಲ ಮುಖ್ಯಮಂತ್ರಿಗಳು ಕನ್ನಡದ ಬಗ್ಗೆ ಹೇಳುತ್ತಿರುವಾಗ ನನ್ನ ಒಂದು ಉದಾಹರಣೆಯನ್ನು ಕೇಳಲು ತಾಳ್ಮೆ ಇಲ್ಲವಲ್ಲ ಏಕೆ?

ಶ್ರೀ ಎಚ್.ಎಂ .ರೇವಣ್ಣ : ವಾಟಾಳ್ ನಾಗರಾಜ್‌ರವರೇ ನೋಡಿ ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಎರಡೂ ಇಲ್ಲ. ಏಕೆ ನೀವು ಸುಮ್ಮನೆ ಕುಂಟು ನೆಪ ಮಾಡಿಕೊಂಡು ಆಟ ಆಡುತ್ತಿದ್ದೀರಿ. ಇದೆಲ್ಲಾ ಸರಿ ಇಲ್ಲ ಹೇಳುವುದನ್ನು ಒಪ್ಪಿಕೊಳ್ಳಿ ಸುಮ್ಮನೆ.

ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಈಗ ನಾನು ಒಂದನೆ ಕ್ಲಾಸ್‌ನಿಂದ 4ನೇ ಕ್ಲಾಸ್‌ವರೆಗೆ ಕನ್ನಡದ ಮಾಧ್ಯಮದಲ್ಲಿಯೇ ಇರಬೇಕು ಆಂಗ್ಲಮಾಧ್ಯಮ ಶಾಲೆ ಕೊಡಬಾರದು ಎಂದು ಮಾಡಿದ್ದೇವೆ. ಕಟ್ಟುನಿಟ್ಟಾದ ಒಂದು ನಿರ್ಣಯವನ್ನು ಕೂಡ ನಾವು ಮಾಡಿದ್ದೇವೆ. ಈಗ ಒಬ್ಬರು ಜಪ್ರಿ ಸ್ಯಾಚ್ ಅಂತ ಹೇಳಿ , ಇಂಟರ್‌ನ್ಯಾಷನಲ್ ಎಕಾನಾಮಿಕ್ಸ್, ಇಂಡಸ್ಟ್ರಿ ಬಗ್ಗೆ ಹೇಳುವುದಿದ್ದರೆ, ಲಿಬರ್‌ಲೈಸ್ ಪಾಲಿಸಿ ಏನು ಮಾಡಿದ್ದೇವೆ. ಅದರ ಬಗ್ಗೆ ಅವರು ಒಂದೇ ಒಂದು ನಗರದ ಉದಾಹರಣೆ ಕೊಟ್ಟಿದ್ದಾರೆ. ಇಡೀ ಭಾರತ ದೇಶದಲ್ಲಿ ಬೆಂಗಳೂರು ಇವತ್ತು ಬಂಡವಾಳ ನಿರೀಕ್ಷೆ ಮಾಡುವುದರಲ್ಲಿ ಅತ್ಯಂತ ಆಕರ್ಷಕವಾದಂತಹ ಪ್ರದೇಶ ಎಂದು ಹೇಳುವಂಥಾದ್ದು ನಾನು ಅಲ್ಲ ಇವತ್ತು ಜಪ್ರಿಸ್ಯಾಚ್ ಅಂತ ಹೇಳಿ a known international economist. It has appeared in Times of India. ಇದು ಮ್ಯಾಗ್‌ಜೈನ್‌ನಲ್ಲಿ ಬಂದಿದೆ. ಟೈಮ್ಸು ಆಫ್ ಇಂಡಿಯಾದಲ್ಲಿಯೂ ಕೂಡ ಬಂದಿದೆ. ಶಿಕ್ಷಣದ ವಿಚಾರದಲ್ಲಿ ಬಹುಶಃ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಟೀಚರ್ಸ್ ಅಪಾಯಿಂಟ್‌ಮೆಂಟ್ ಕಳೆದ 18-20 ವರ್ಷಗಳಿಂದ ಆರ್ಥಿಕ ನಿರ್ಭಂದ ಇತ್ತು. ಟೀಚರ್ಸ್ ಅಪಾಯಿಂಟ್‌ಮೆಂಟ್ಸ್ ಮಾಡಬಾರದು ಅಥವಾ ಲೆಕ್ಚರ್ಸ್ ಅಪಾಯಿಂಟ್‌ಮೆಂಟ್ ಮಾಡಬಾರದು ಎಂದು ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇದ್ದವು ಉರ್ದು ಟೀಚರ್ಸ್ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದೇವೆ. ದೈಹಿಕ ಶಿಕ್ಷಕರನ್ನು ಅಪಾಯಿಂಟ್ ಮಾಡುತ್ತಿದ್ದೇವೆ ಅಥವಾ ವೈದ್ಯರು ನೇಮಕಾತಿ ಮಾಡುತ್ತಿದ್ದೇವೆ. ತಮಗೆ ಗೊತ್ತಿದೆ ಅಧ್ಯಕ್ಷರೇ ತಾವು ಎಷ್ಟು ಹೋರಾಟ ಮಾಡಿದ್ದೀರಿ ಸ್ಟೈಪೆಂಡರಿ ಗ್ರ್ಯಾಜುಯೇಟ್ಸ್ ಬಗ್ಗೆ ಆದರೆ ಸ್ಥಿರವಾದಂಥಹ ಖಾಯಂ ಮಾಡತಕ್ಕ ಆದೇಶ ಮಾಡಿದಂತಹ ಸರ್ಕಾರ ನನ್ನ ಸರ್ಕಾರ. ಕಾಂಟ್ರಾಕ್ಟ್‌ಟೀಚರ್ಸ್ ಹೋರಾಟ ಮಾಡುತ್ತಿದ್ದರು ಆತ್ಮಾಹುತಿ ಮಾಡುತ್ತಿದ್ದರು ಅವರನ್ನು ಖಾಯಂ ಮಾಡಿ ಸ್ಥಿರವಾದ ಆದೇಶ ಕೊಟ್ಟಂತಹ ಸರ್ಕಾರ ನನ್ನ ಸರ್ಕಾರ. ದಿನಗೂಲಿ ನೌಕರರನ್ನು ಖಾಯಂ ಮಾಡಿ 60 ಸಾವಿರ ಜನರನ್ನು ಖಾಯಂ ಮಾಡುವುದಕ್ಕೆ ಆದೇಶ ಕೊಟ್ಟಂತಹ ಸರ್ಕಾರ ನನ್ನ ಸರ್ಕಾರ. 1982-83ರಿಂದ ವಿಶ್ವವಿದ್ಯಾನಿಲಯದಲ್ಲಿ

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಗಂಡದ ವಿದ್ಯಾರ್ಥಿಗಳು ಪ್ರಥಮ ರ್‍ಯಾಂಕಿನಲ್ಲಿ ಬರತಕ್ಕಂಥ ವಿದ್ಯಾರ್ಥಿಗಳು ಏನು ಇದ್ದಾರೆ ಅವರನ್ನು ನೇರವಾಗಿ ನೇಮಕಾತಿ ಮಾಡತಕ್ಕಂಥಾದ್ದು 82ರಿಂದ ಹೇಳುತ್ತಾ ಬಂದಿದ್ದೇವೆ, ಆದರೆ ಪ್ರಥಮವಾಗಿ ಅನುಷ್ಠಾನ ಮಾಡಿದಂತಹ ಸರ್ಕಾರ ನನ್ನ ಸರ್ಕಾರ. 18 ಜನ ಮುನ್ಸೀಫ್‌ಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಿಂದ ನೇರವಾಗಿ ಆಯ್ಕೆ ಮಾಡಿ ಆದೇಶ ಕೊಟ್ಟಂತಹ ಸರ್ಕಾರ ನನ್ನ ಸರ್ಕಾರ. ಹೆಗಡೆಯವರು ಭಾಷಣ ಮಾಡಿ ಹೇಳಿದರು ಒಂದೂ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಆಗಲಿಲ್ಲ. ಅನೌನ್ಸ್ ಎಲ್ಲರೂ ಮಾಡಿದ್ದಾರೆ. ಆದರೆ ಅನುಷ್ಠಾನ ಮಾಡಿದವರು ಯಾರು ಎನ್ನುವುದನ್ನು ನೆನಪು ಇಟ್ಟುಕೊಳ್ಳಬೇಕು. ಅದೇ ಪ್ರಕಾರ ರೂರಲ್ ವಾಟರ್ ಸಪ್ಲೈ ಸ್ಕೀಂ, ಆರ್‌ಡಿಪಿಆರ್‌ನಲ್ಲಿನ ಕಾರ್ಯಕ್ರಮಗಳು, ಗ್ರಾಮೀಣ ನೀರು ಸರಬರಾಜು ಯೋಜನೆಗಳು - ಅದರಲ್ಲಿಯೂ ಕೂಡ ವಿಶೇಷವಾಗಿ ನೆಮ್ಮದಿ ಕಾರ್ಯಕ್ರಮ, ಬಹುಶಃ ಇಡೀ ರಾಷ್ಟ್ರದಲ್ಲಿ E.S. ಕಾರ್ಯಕ್ರಮ ಇರಬಹುದು, ಆದರೆ ES ಕಾರ್ಯಕ್ರಮ ಎಲ್ಲಿಲ್ಲ ಅಲ್ಲಿ ನೆಮ್ಮದಿ ಕಾರ್ಯಕ್ರಮ ಕೊಟ್ಟಿದ್ದುದು ಕರ್ನಾಟಕ ರಾಜ್ಯ ಮಾತ್ರ. We have released the money. I am very sorry. You will have to withdraw your words. ಮಲೆನಾಡು ಅಭಿವೃದ್ಧಿ ಎಂದು ಎಲ್ಲರೂ ಭಾಷಣ ಮಾಡುತ್ತ ಬಂದರು, ಈಗ ಹಣ ಬರಲಿಲ್ಲವಾ ಆ ಬೋರ್ಡಿಗೆ? ಬಂದಿದೆ. ಅದೇ ಪ್ರಕಾರ ನೆಮ್ಮದಿ ಕೂಡ ಬಂದಿದೆ. ಮೊದಲಬಾರಿಗೆ ಮಲೆನಾಡು ಅಭಿವೃದ್ಧಿ ಮಂಡಿಲಿಯನ್ನು ಅನುಷ್ಠಾನ ಮಾಡಿದ ಸರ್ಕಾರ ನಮ್ಮದು, ಹಣ ಬಿಡುಗಡೆ ಮಾಡಿದ ಸರ್ಕಾರ ನಮ್ಮದು. ಆದ್ದರಿಂದ ಜವಾಹರ್ ರೋಜ್ಗಾರ್ ಯೋಜನೆ, ಅದಕ್ಕೆ 92-93ರಲ್ಲಿ ಒದಗಿಸಿದ ಅನುದಾನ 133 ಕೋಟಿಯಾದರೆ 1993-94ರಲ್ಲಿ 160.70 ಕೋಟಿ. ನಮ್ಮ ಸಾಧನೆ ಇಲ್ಲದಿದ್ದರೆ ಜವಾಹರ್ ರೋಜ್‌ಗಾರ್ ಯೋಜನೆಗೆ ಕೇಂದ್ರದವರು ಹಣ ಬಿಡುಗಡೆ ಮಾಡುವುದಿಲ್ಲ. ನಮ್ಮ ಸಾಧನೆ ಮೇಲೆ ಅವರು ಬಿಡುಗಡೆ ಮಾಡುತ್ತಾರೆ. ಅದೇ ಪ್ರಕಾರ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಕೂಡ 35.22 ಕೋಟಿ 92-93ರಲ್ಲಿದ್ದರೆ 43.16 ಕೋಟಿ, 23 ಪರ್ಸೆಂಟ್ ಮತ್ತು ಗ್ರಾಮೀಣ ಪ್ರದೇಶದ ಮಹಿಳೆ ಮಕ್ಕಳ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಗಾತ್ರ 110 ಪರ್ಸೆಂಟ್ ಇನ್‌ಕ್ರೀಸಾಗಿದೆ. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾರ್ಯಕ್ರಮ our increase is 40% ಇವತ್ತು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಗಳಿಗೆ the increase is 29%. ಆದ್ದರಿಂದ 92-93ರವರೆಗೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ನಾನು ಪ್ರಾಮುಖ್ಯತೆ ಕೊಟ್ಟಿದ್ದುದನ್ನು ದಾಖಲೆಗಳಲ್ಲಿ ಇವತ್ತು ನೋಡಬಹುದು. 92-93ರಲ್ಲಿ 27-23 ಕೋಟಿ ಆದರೆ 93-94ರಲ್ಲಿ 35.19 ಕೋಟಿ ನಾವು ಬಿಡುಗಡೆ ಮಾಡಿದ್ದೇವೆ. ಅದೇ ರೀತಿ ಯಾವ ಕ್ರಮ ಆದರೂ ತೆಗೆದುಕೊಳ್ಳಿ. ಜವಾಹರ್ ರೋಜ್ಗಾರ್ ಯೋಜನೆಯಲ್ಲಿ 61 ಪರ್ಸೆಂಟ್ ಇನ್‌ಕ್ರೀಸಾಗಿದೆ. ಒಂದು ವೇಳೆ ಕೇಂದ್ರದ ಕಾರ್ಯಕ್ರಮಗಳನ್ನು ನಾವು ಸರಿಯಾಗಿ ಅನುಷ್ಠಾನ ಮಾಡದೇ ಇದ್ದರೆ ಕೇಂದ್ರಸರ್ಕಾರ ಹಣ ಬಿಡಿಗಡೆ ಮಾಡುವುದಿಲ್ಲ ವಾಟಾಳ್ ನಾಗರಾಜ್‌ರವರೇ. 160.70 ಕೋಟಿ ಇದ್ದರೆ

ಈ ವರ್ಷ 258.65 ಕೋಟಿ ನಮಗೆ ಬರುತ್ತಿದೆ. ಹೀಗೆ ಎಲ್ಲ ಕಾರ್ಯಕ್ರಮಗಳ ಬಗ್ಗೆಯೂ ನಾನು ಪ್ರತ್ಯೇಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಬೇಕಾದರೆ ಏನು ಇಲ್ಲಿ ಹೇಳಿದ್ದೇನೆ ಬರವಣಿಗೆಯಲ್ಲಿಪುಸ್ತಕ ರೂಪದಲ್ಲಿ ಕರ್ನಾಟಕದ ಎಲ್ಲ ಜನರಿಗೂ ಹಂಚುತ್ತೇನೆ.

ಶ್ರೀ ವಾಟಾಳ್ ನಾಗಾರಾಜ್‌ಃ ನೀವು ಸಾಹಿತಿಗಳು, ಒಬ್ಬ ಕನ್ನಡ ಸಾಹಿತಿ ಬಂಡವಾಳ ಇಲ್ಲದ ಬಡಾಯಿ ಎಂದು ಬರೆದ ಪುಸ್ತಕ ಓದಿದ್ದೀರೋ?

ಶ್ರೀ ಎಂ. ವೀರಪ್ಪ ಮೊಯಿಲಿಃ ಪಾಪ ಅವರ ಕೊಡ ಯಾವಾಗಲೂ ಕೂಡ ಬರಿದಾಗೇ ಉಳಿಯುತ್ತದೆ ಆದರೆ ನಮ್ಮ ಕೊಡ ತುಂಬಿ ತುಳುಕುತ್ತದೆ. ನಮ್ಮ ಮನಸ್ಸೂ ತುಂಬಿದೆ. ನಮ್ಮ ಖಜಾನೆ ಕೂಡ ತುಂಬುತ್ತದೆ. ನಾನು ಆಗಾಗಲೇ ಹೇಳಿದ್ದೇನೆ, ಖಜಾನೆ ಅಂದರೇನು? ಖಜಾನೆ ಅಂದರೆ ಬ್ಯಾಂಕಲ್ಲ.

ಶ್ರೀ ಹೆಚ್.ಎಂ. ರೇವಣ್ಣಃ ಅಲ್ಲ 750 ಮನೆಗಳನ್ನು ನಿಮ್ಮ ಕ್ಷೇತ್ರಕ್ಕೆ ಹೆಚ್ಚು ತೆಗೆದುಕೊಂಡಿರುವವರು ನೀವು.

ಶ್ರೀ ವಾಟಾಳ್ ನಾಗರಾಜ್‌ಃ ನಿಮಗೇನು ಹೊಟ್ಟೆಯುರಿಯಾಗಿದೆಯೇ ಗೊತ್ತಿದೆ.......

ಶ್ರೀ ವೀರಪ್ಪ ಮೊಯಿಲಿಃ ಹೌಸಿಂಗ್ ಬಗ್ಗೆ ಮಾತ್ರ ಇವತ್ತು ಹೇಳುತ್ತೇನೆ, ಕಂದಾಯ ಇಲಾಖೆಯವರು ಎಲ್ಲಾ ಇದೆ. ಆದರೆ ಹೌಸಿಂಗ್ ಬಗ್ಗೆ ದಯಮಾಡಿ ಲಾಲಿಸಿ ಕೇಳಬೇಕು. ಜನತಾ ಅವಧಿಯಲ್ಲಿ ಸರಾಸರಿ 6 ವರ್ಷದ ಅವಧಿಯಲ್ಲಿ ಒಟ್ಟು ಮನೆಗಳು ಕಟ್ಟಿದ್ದುದು 47,935. ನಾವು ಆವರೇಜ್ ಮಾಡಿದ್ದು ಎಷ್ಟೆಂದರೆ ಒಂದೇ ವರ್ಷದಲ್ಲಿ 93-94ರಲ್ಲಿ 66,056 ಮನೆಗಳು. ಒಂದು ಲಕ್ಷ ಮನೆಗಳನ್ನು ನಾವು ಒಂದೂವರೆ ವರ್ಷದಲ್ಲಿ ಕಟ್ಟಿಕೊಟ್ಟಿದ್ದೇವೆ. ಅದರಿಂದ ಉತ್ತೇಜನಗೊಂಡು ಈಗ ಎರಡು ಲಕ್ಷ ಮನೆಗಳಿಗೆ ಈಗಾಗಲೇ ಸರ್ಕಾರಿ ಆದೇಶ ಹೊರಡಿಸಿದ್ದೇವೆ. ಆಶ್ರಯ ಅಂಬೇಡ್ಕರ್ ಇಂದಿರಾಅವಾಸ್ ಎಲ್ಲಾ ಸೇರಿ. ನಾವು ಹಣ ಕೊಟ್ಟಿದ್ದರ ಬಗ್ಗೆ, ಏಕೆಂದರೆ ಬರೀ ಆಕಾಶದಲ್ಲಿ ಮನೆ ಕಟ್ಟಿದ್ದೀರಿ ಎಂದು ನೀವು ಹೇಳಬಾರದಲ್ಲ; ನಾವು ಹಣ ಕೊಟ್ಟಿದ್ದೇವೆ. 92-93ರಲ್ಲಿ 30.68 ಕೋಟಿ. ಸೈಟಿಗೆ ಆಶ್ರಯಕ್ಕೆ, ಇಂದಿರಾಅವಾಸ್, ಇಡಬ್ಲ್ಯುಎಸ್‌ಗೆ, ಅದರಲ್ಲಿ 16 ಕೋಟಿ ಕೊಟ್ಟಿದ್ದು ನನ್ನ ಕಾಲದಲ್ಲಿ. ಅಂದರೆ ಆಶ್ರಯದ ಬಗ್ಗೆ ಯಾರು ಭಾಷಣ ಬಹಳ ಮಾಡುತ್ತಾರಲ್ಲ, ನಮ್ಮದು ಆಶ್ರಯಬಂಧು, ವಿಶ್ವ ಬಂಧು, ಅಕ್ಷರಬಂಧು, ಎಲ್ಲ ಬಂಧು, ಅಲ್ಲಿ ಅಕ್ಷರಾನ್ನೂ ಇರಲಿಲ್ಲ ಆಶ್ರಯನೂ ಇರಲಿಲ್ಲ , ವಿಶ್ವನೂ ಇರಲಿಲ್ಲ ಬರೀ ಬಂಧು ಮಾತ್ರ ಉಳಿದಿದೆ. ಈಗ ಗೋಡೆ ಬಂದು ಕಾಂಪೌಂಡ್ ಬಂದಿದೆ. ಆಮೇಲೆ 92-93ರಲ್ಲಿ 30.69 ಕೋಟಿ ಇದ್ದರೆ 93-94ರಲ್ಲಿ ನಾನು 98.99 ಕೋಟಿ ರಿಲೀಸ್ ಮಾಡಿದ್ದೇನೆ. ಯಾವ ಕಾಲದಲ್ಲಾದರೂ ಇಷ್ಟೊಂದು ಹಣ ಬಿಡಿಗಡೆ ಮಾಡಿದ್ದೀರಾ? ಅದಕ್ಕೆ ಮತ್ತೆ 15 ಕೋಟಿ ಸೇರಿಸಿದರೆ ಸುಮಾರು 113ಕೊಟಿ 93-94ರವರೆಗೆ ನಾನೆ ಬಿಡುಗಡೆ ಮಾಡಿದ್ದೇನೆ. 94-94ಗೆ I have provided Rs. 150.16 crores and already released

Rs. 62.89 crores upto July 1994. ಬರೀ ಜುಲೈವರೆಗೆ 62.89 ಕೋಟಿ ನಾನು ರಿಲೀಸ್ ಮಾಡಿದ್ದೇನೆ. As against Rs. 15 crores, in 4 months time, I have released Rs. 62,89 crores. It is on record. The houses are visible. Money is visible. Money is released to respective Deputy Commissioners. ನೇರವಾಗಿ ಜಿಲ್ಲಾಧಿಕಾರಿಗಳಿಂದ ಮನೆ ಕಟ್ಟುವ ಈ ಕಾರ್ಯಕ್ರಮ ನಡೆಯುತ್ತಿದೆ. Is it not my performance? ಬಾಕಿ ವಿಚಾರ ನಾನು ಹೇಳಲು ಅಪೇಕ್ಷಿಪಡುವುದಿಲ್ಲ. ಎರಡು ಮಾತುಗಳನ್ನು ನಾನು ಹೇಳಲು ಅಪೇಕ್ಷೆ ಪಡುತ್ತೇನೆ ಏಕೆಂದರೆ Opening a Public Deposit Account ಪಿಯರ್‌ಲೆಸ್ ಬಗ್ಗೆ ಹೇಳಿದ್ದಾರೆ opening a Public Deposit Account in the Treasury is permitted under the Karnataka Financial Code. ಇದೇನು ಹೊಸದಾಗಿ ಮಾಡಿದ್ದಲ್ಲ ಪ್ರಶ್ನೆ ಏನೆಂದರೆ Whether the money has gone for the development purpose of not? Yes, I have said, I will borrow money or steal money for the development of the State. It might be technical error but can I afford to wait for 10 years? ಬ್ಯಾಂಕಿನಲ್ಲಿ ಕೇಳಿದರೆ ಅವರು ಹಣ ಕೊಡುವುದಿಲ್ಲ ಪ್ರತಿ ಜಿಲ್ಲೆಯಲ್ಲಿ ಸಬ್‌ಸ್ಟೇಷನ್ ಕಟ್ಟುತ್ತೇವೆ, ಲೈನ್ ಕಟ್ಟುತ್ತೇವೆ ಎಂದ ರಒಂದೆರಡು ವರ್ಷವಾದರೂ ಅಲ್ಲಿಂದ ಹಣ ಬರದೇ ಇದ್ದರೆ I must have money and I do not want to keep it as the Hon'ble Deputy Chief Minister said. Money, wherever is available, if it is coming, I will build Karnataka. I am not shy of it. ನಮ್ಮ ಚಂದ್ರೇಗೌಡರು ಕ್ಲಾಸಿಕ್ ಎಕ್ಸಾಂಪಲ್ ಕೊಟ್ಟರು, ಒಂದೂವರೆ ಕೋಟಿ ಬ್ಯಾಂಕಿಗೆ ಕೊಟ್ಟು ಒಂದೂವರೆ ಕೋಟಿ ಅದೇ ದಿವಸ ತೆಗೆದು, ಅದಕ್ಕೂ ಇದಕ್ಕೂ ಏನು ಕಂಪ್ಯಾರಿಸನ್ಃ Money is in the Treasury. The money has gone to development work. I can vouchsafe that not a single pie has gone for payment of salary out of this amount. Every pie is accounted . I would like to have money for KEB. Suppose tomorrow if materials come, they may require another Rs. 100 crores and I must be in a position to pay that. I would like to get more money. ಸುಮಾರು 8700 ಕೋಟಿ ಖರ್ಚು ಮಾಡತಕ್ಕಂತಹ ಸರಕಾರಕ್ಕೆ 200 ಕೋಟಿಯನ್ನು ಯಾರ ಹತ್ತಿರವಾದರೂ ಸಾಲ ತೆಗೆದುಕೊಂಡರೆ ಅದು ಮಹಾ ಆಗುವುದಿಲ್ಲ.

'Dr. Manmohan Singh said, ' Even if I pay Rs. 500 crores, I am confident that Mr. Moily will pay back. ' That kind

of confidence I have built up. That kind of goodwill I have built up. Karnataka people should proud of it. If such a goodwill is there among the people of Karnataka and if anybody builds such a goodwill, we will get money from anywhere. We have that power. Therefore, we need not regret about it ಅದಕ್ಕಾಗಿ ಪಶ್ಚಾತ್ತಾಪ ಪಡಬೇಕಾದ್ದು ಅವಶ್ಯಕತೆ ಇಲ್ಲ. ಅದಕ್ಕಾಗಿ ನಾವು ವಿಶೇಷವಾಗಿ ಖರ್ಚು ಮಾಡಿದ್ದೇವೆ. ಪೆಂಡಿಂಗ್‌ಬಿಲ್ಸ್ ಬಗ್ಗೆ ಹೇಳುತ್ತಿದ್ದೀರಿ. 8700 ಕೋಟಿ ಖರ್ಚು ಮಾಡತಕ್ಕಂತಹ ಶಕ್ತಿ ಇರತಕ್ಕಂತಹ ನನ್ನ ಸರಕಾರಕ್ಕೆ 125 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ ಇದ್ದರೆ ಅದು ಒಂದು ಸಣ್ಣ ಬಿಂದು.

8.00 ಪಿ.ಎಂ

ಪ್ಲಾನ್ ಆರ್ ನಾನ್ ಪ್ಲಾನ್ ಒಟ್ಟು ಸೇರಿ 8700 ಕೋಟಿ ಖರ್ಚು ಮಾಡುವುದಕ್ಕೆ ಶಕ್ತಿ ಇರತಕ್ಕಂತಹ ಸರಕಾರಕ್ಕೆ 128 ಕೋಟಿ ರೂಪಾಯಿ ಅದೂ ಇದೂ ಪೆಂಡಿಂಗ್ ಬಿಲ್ ಇದ್ದರೆ ಇದಕ್ಕೆ ದಿವಾಳಿ ಎಂದು ಹೇಳುವುದೇ? Can you call it a Diwale or Bankruptsy? As on 31/12 in respect of Irrigation, Rs.112.9 crores bills were pending and Rs. 48.02 crores Bills pending in respect of PWD. However, I have cleared all the bills. All outstanding bills I have cleared. As on to-day in respect of Irrigation, Rs.258 crores I have released during the current year from April. Rs. 97 crores I have released for PWD. ಇವತ್ತಿನ ದಿನದ ಇರಿಗೇಷನ್‌ನಲ್ಲಿ 91 ಕೋಟಿ ಇರಬಹುದು, ಲೋಕೋಪಯೋಗಿ ಇಲಾಖೆಯಲ್ಲಿ 45 ಕೋಟಿ ಇರಬಹುದು. ಅಲ್ಲಿ ಕೆಲವು ಕೋಟಿ ಬಾಕಿ ಇದೆ. ಹೇಮಾವತಿ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಬರೀ ಹೊಳೇನರಸೀಪುರ ಬರೀ ಕೆಲವು ಕಡೆಗಳಲ್ಲಿ ಸುತ್ತ ನೀರು ತಿರುಗುತ್ತಿತ್ತು this water is let out. ಇವತ್ತು ಹೊಳೇನರಸಿಪುರದವರಿಗೆ ನೀರು ಕೊಡತಕ್ಕಂತಹ ಶಕ್ತಿ ಇದೆ. ತುಮಕೂರಿಗೆ ನೀರು ಕೊಡತಕ್ಕಂತಹ ಶಕ್ತಿ ನನಗೆ ಇದೆ. ಹಾಸನಕ್ಕೆ ನೀರು ಕೊಡತಕ್ಕಂತಹ ಶಕ್ತಿ ಇದೆ. ಈ ಶಕ್ತಿ ಹೇಗೆ ಬೆಳೆಯಿತು? ಕರ್ನಾಟಕ ರಾಜ್ಯದ ಜನರಿಗೆ ಸರಕಾರಕ್ಕೆ ಆ ಶಕ್ತಿ ಬಂದಿದೆ. ಕಾವೇರಿ ಬಗ್ಗೆ ಭಾವನಾತ್ಮಕವಾಗಿ ಮಾತನಾಡತಕ್ಕಂತಹ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಆರ್ಥಿಕವಾಗಿ ಕರ್ನಾಟಕ ರಾಜ್ಯದ ಜನರನ್ನು ಕಟ್ಟತಕ್ಕಂತಹ ಶಕ್ತಿ ನಮ್ಮ ಸರಕಾರಕ್ಕಿದೆ ಮುಂದೆ ಕೂಡ ಇರುತ್ತದೆ. Yes, I am in a position to provide water. ಎಲೆಕ್ಷನ್ ಸ್ಟಂಟ್ ಅಲ್ಲ. ಇಲ್ಲಿ ಇರತಕ್ಕಂತಹ ಆಧಾರದ ಮೇಲೆ ಹೇಳುತ್ತಿದ್ದೇನೆ. ಆದ್ದರಿಂದ ಇವತ್ತು ಬಹಳ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಒಂದು ವಿಚಾರವನ್ನು ಸ್ಪಷ್ಟವಾಗಿ ಈ ಸಭೆಯ ಮುಂದೆ ಹೇಳಲಿಕ್ಕೆ ಬಯಸುತ್ತೇನೆ. My Government

stood on Four important pillars i.e., 1) Humane, 2) Responsive, 3) Development oriented and 4) Honesty. ಅದು ಒಂದು ಹ್ಯೂಮೇನ್ ರೆಸ್ಪಾನ್ಸೀವ್ ಜನಗಳ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥಾದ್ದು, ಡೆವಲಪ್‌ಮೆಂಟ್ ಓರಿಯೆಂಟೆಡ್ ಪ್ರಗತಿಪರ ಪ್ರಾಮಾಣಿಕತೆ, ಹಾನೆಸ್ಟಿ. ಹ್ಯುಮೆನ್, ರೆಸ್ಪಾನ್ಸಿವ್, ಡೆವಲಪ್‌ಮೆಂಟ್ ಓರಿಯೆಂಟೇಷನ್, ಈ ನಾಲ್ಕು ಸ್ಥಂಭಗಳ ಮೇಲೆ ನಮ್ಮ ಸರಕಾರ ನಿಂತಿದೆ. ಅದು ಭದ್ರವಾಗಿ ನಿಂತಿದೆ. ಮುಂದೆ ಕೂಡ ಭದ್ರವಾಗಿ ನಿಲ್ಲುತ್ತದೆ. ಇಷ್ಟು ಮಾತನ್ನು ಹೇಳಿ ತಾವು ಕೊಟ್ಟಂತಹ ಸಲಹೆಗಳನ್ನು ಸಂಪೂರ್ಣವಾಗಿ ನಾನು ಸ್ವೀಕರಿಸಿದ್ದೇನೆ. ಅದು ಸಲಹೆ ಕೊಟ್ಟಿದ್ದೀರಿ when my Government is responsive, we will act upon all your suggestions.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಒಂದೇ ಪ್ರಶ್ನೆಯನ್ನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಾನು ಭಾಷಣ ಮಾಡುವಾಗ ಇರಲಿಲ್ಲ. ನಾನು ಈ ರಿಸೋರ್‌ಸಸ್ ಮೊಬಿಲೈಜೇಷನ್ ವಿಚಾರದಲ್ಲಿ ಒಂದು ಮಾತನ್ನು ಹೇಳಿದೆ ಮತ್ತು ನಿಮ್ಮ ಅಧಿಕಾರಿಗಳನ್ನು ನಾವು ಮಾತನಾಡುವಾಗ ಕಾಂಪ್ಲಿಮೆಂಟ್ ಮಾಡಿದ್ದೇವೆ. ಒಂದು ಪ್ರಶ್ನೆಯನ್ನು ನಾನು ನಿಮಗೆ ಕೇಳುತ್ತೇನೆ. ಇಷ್ಟೊಂದು ನಿಮ್ಮ ಸಂಪನ್ಮೂಲಗಳೂ ಇದ್ದರೂ ಸಹಾ ಇಷ್ಟು ನಿಮ್ಮ ಅಂಕಿಸಂಖ್ಯೆಯನ್ನು ಹೇಳಿದ್ದೀರಿ. ನೂರಾರು ಕೋಟಿಗಳು ಇಟ್ಟಿದ್ದರೂ ಟ್ರೆಜರಿ ಬ್ಯಾನ್ ಹಾಕತಕ್ಕಂಥ ಅವಶ್ಯಕತೆ ಏತಕ್ಕೆ ಬೀಳುತ್ತದೆ? ಅಲ್ಲಿ ಕೇಳಿದರೆ ಟ್ರೆಜರಿ ಬ್ಯಾನ್‌ಇದೆ ಎಂದು ಹೇಳುತ್ತಾರೆ ಏತಕ್ಕೆ ಟ್ರೆಜರಿ ಬ್ಯಾನ್ ಏತಕ್ಕೆ ಹಾಕುತ್ತಿದ್ದೀರಿ? ನನ್ನ ಪ್ರಶ್ನೆಗೆ ಒಂದು ಉತ್ತರವನ್ನು ಕೊಡಿ. ಟ್ರೆಜರಿ ಏತಕ್ಕೆ ಹಾಕುತ್ತೀರಿ? ರಿಸೋರ್‌ಸಸ್ ಮೊಬಿಲೈಜೇಷನ್ ಆಗಿದೆ, ಆದರೆ ತಮಗೆ ಏನಾಗಿದೆ, ಫೈನಾನ್ಸಿಯಲ್ ಡಿಸಿಪ್ಲಿನನ್ನು ತಾವು ಮುರಿದಿದ್ದೀರಿ. ತಾವು ಏನು ಮುಂಗಡಪತ್ರವನ್ನು ಮಂಡನೆ ಮಾಡಿದಿರಿ, ಆ ಪ್ರಕಾರ ಹೋಗಿದ್ದರೆ ನಿಮಗೆ ಕಷ್ಟವಾಗುತ್ತಿರಲಿಲ್ಲ. ಆದರೆ ಫೈನಾನ್ಸಿಯಲ್ ಡಿಸಿಪ್ಲೀನನ್ನು ಮುರಿದು ತಾವು ಏನು ಭರವಸೆ ಕೊಡುತ್ತಿದ್ದೀರಲ್ಲ, ಆದರಿಂದ ಈ ಕಷ್ಟ ಬರುತ್ತಿದೆ. ರಿಸೋರ್‌ಸಸ್ ಮೊಬಿಲೈಜೇಷನ್ ಇದ್ದರೂ ಏತಕ್ಕೆ ಬ್ಯಾನ್ ಹಾಕುತ್ತೀರಿ ಎಂದು ಹೇಳಬೇಕು. ಎರಡನೆಯದು ತಾನು ಮನೆಗಳ ಬಗ್ಗೆ ಹೇಳಿದರಲ್ಲ, ತಮಗೆ ನಾನು ಒಂದು ರಿಕ್ವೆಸ್ಟ್ ಮಾಡುತ್ತೇನೆ, ಹೌಸಿಂಗ್ ಬೋರ್ಡ್ ಕಡೆಯಿಂದ ಜಿಲ್ಲಾಧಿಕಾರಿಗೆ ಕೊಟ್ಟ ನಂತರ 'ಆಶ್ರಯ' ಮನೆಯ ವಿಚಾರದಲ್ಲಿ ಪ್ರಗತಿಯಾಗಿಲ್ಲ ಎಂದು ನಾನು ಹೇಳುವುದಿಲ್ಲ. ಇಂಪ್ರೂವ್‌ಮೆಂಟ್ ಇದೆ. ಆದರೆ ಈ ಆಶ್ರಯ ಮನೆಯ ಸ್ಟಾಂಡರ್ಡ್ ಏನು ಇದೆಯಲ್ಲ ಬಹಳ ಲೋ ಲೆವಲ್ ಆಫ್ ಸ್ಟಾಂಡರ್ಡ್. ಬಹಳ ಕಳಪೆ ಮಟ್ಟದ ಕೆಲಸ ನಡೆದಿದೆ. ಇದು ನಮಗೂ ನಿಮಗೂ ಸೇರಿದ ವಿಚಾರ. ಈ ಫ್ಲಡ್ಸ್‌ನಲ್ಲಿ ಎಷ್ಟು ಮನೆಗಳು ಬಿದ್ದಿವೆ, ಮನೆ ಕಟ್ಟುವಾಗ ಬಿದ್ದಿದೆ, ಕಟ್ಟಿದ ಮನೆಗಳು ಬಿದ್ದಿದೆ, ಹಾಗಾಗಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ.. ನೆರಳಿನ ಭಾಗ್ಯ ಸ್ಕೀಮ್ ಏನು ತಮ್ಮದು ಇದೆಯಲ್ಲ, ಅದು I frankly admit that it is a

good scheme. ಆ ಸ್ಕೀಮಿನ ಮೇಲೆ ಹೆಚ್ಚಿನ ಒತ್ತಡವನ್ನು ಇಡಿ ಅದು ಬಡಜನರಿಗೂ ಅನುಕೂಲವಾಗುತ್ತದೆ. ಬರ್ಡನ್ ಕೂಡ ಇರುವುದಿಲ್ಲ. ಅದನ್ನು ತಮಗೆ ಅಧ್ಯಕ್ಷರ ಮುಖಾಂತರ ರಿಕ್ವೆಸ್ಟ್ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಬೇಕು ಎಂದು ಹೇಳಿ ಆಲೋಚನೆ ಮಾಡಿದ್ದೆ. ನಿಲ್ಲಿಸಿಬಿಟ್ಟೆ 'ಟ್ರೆಜರಿ' ಎಂದರೆ ಏನು? Treasury is not a Bank. ನಾವು ಡಿಪಾಸಿಟ್ ಅಲ್ಲಿ ಇಡುವುದಿಲ್ಲ. ಯಾರ ಹಣವನ್ನು ಕೂಡ ದಾಸ್ತಾನು ಮಾಡುವುದಿಲ್ಲ. ಟ್ರೆಜರಿ ಎಂದರೆ ಏನು ಎಂದು ಹೇಳಿದರೆ ಕನ್ನಂಬಾಡಿ ಅಣೆಕಟ್ಟಲ್ಲ. ಟ್ರೆಜರಿ ಎಂದರೆ ಕಾಲುವೆ. ನೀರು ಹೋಗತಕ್ಕಂಥ ಕಾಲುವೆ. ಕನ್ನಂಬಾಡಿನ ಅಣೆಕಟ್ಟಿನಲ್ಲಿ ಕೆಲವು ಸಾರಿ ನೀರು ಬರುತ್ತದೆ ಕೆಲವು ಸಾರಿ ತುಂಬುವುದಿಲ್ಲ. ನಮ್ಮ ಕನ್ನಂಬಾಡಿ ಅಣೆಕಟ್ಟು ಯಾವುದು ಎಂದರೆ ಜನರು. ಅಲ್ಲಿಂದ ಕಾಲುವೆಯಲ್ಲಿ ಕೆಲವು ಸಾರಿ ನೀರು ಕಡಿಮೆಯಾಗುತ್ತದೆ. ಕೆಲವು ಸಾರಿ ನೀರು ನಿಂತುಹೋಗಬಹುದು I am telling you because it is a flow. Field channel ಕಾಲುವೆಯಲ್ಲಿ ನೀರು ಬಂದರೆ ನಾವು ಗದ್ದೆಗೆ ನೀರನ್ನು ಬಿಡುತ್ತೇವೆ. ಅಂದರೆ ಫೀಲ್ಡ್‌ಚಾನಾಲ್‌ಗೆ ನೀರು ಹೋಗುತ್ತದೆ. ಫೀಲ್ಡ್ ಚಾನಲ್‌ನಿಂದ ಗದ್ದೆಗೆ ನೀರು ಹೋಗುತ್ತದೆ. Treasury works on that analogy. ಇಡೀ ವರ್ಷದ್ದು ಪರ್‌ಫಾರ್ಮೆನ್ಸ್ ತೆಗೆದುಕೊಳ್ಳಬೇಕು. ಕೆಲವು ಸಂದರ್ಭದಲ್ಲಿ ನಮಗೆ ಲೀನ್ ಪೀರಿಯಡ್ ಇರುತ್ತದೆ. ಕಲೆಕ್ಷನ್ ಕಡಿಮೆಯಾಗಬಹುದು ಅಲ್ಲಿ, ಇದು ನಾವು ದಾಸ್ತಾನು ಮಾಡುವಂಥ ಕೆಲಸವಲ್ಲ. ಹಣದ ದಾಸ್ತಾನು ನಮ್ಮ ಹತ್ತಿರ ಇಲ್ಲ. Even on to-day ನಮ್ಮ ಹತ್ತಿರ ಹಣ ಇರುವುದಿಲ್ಲ. ಕಲೆಕ್ಷನ್ ಬರುತ್ತದೆ, ಮಾಡುತ್ತೇವೆ. ಕಲೆಕ್ಷನ್ ಮಾಡುವುದರಲ್ಲಿ ಟ್ಯಾಕ್ಸ್ ಎಫರ್ಟ್ಸ್ Mobilisation of resource is important ಇದರ ಬಗ್ಗೆ ಒಂದು ಕಾಲದಲ್ಲಿ ಹಣ ಕಡಿಮೆ ಇದ್ದಾಗ ನಮಗೆ ದಿನವೂ ನಾಗಪುರದಿಂದ ಇಂಟಿಮೇಷನ್ ಬರುತ್ತದೆ, ನಿಮ್ಮಲ್ಲಿ ಎಷ್ಟು ಹಣ ಇದೆ, ಮೈನಸ್, ಪ್ಲಸ್ ಎಲ್ಲಾ ಬರುತ್ತದೆ. ನಾವು ಮಾನಿಟರ್ ಮಾಡುತ್ತೇವೆ. Yes, it has to be monitored. ರಿಜರ್ವ್‌ಬ್ಯಾಂಕ್‌ನವರು ಎಲ್ಲಾ ರಾಜ್ಯಕ್ಕೂ ಕೂಡ ಮಾನಿಟರ್ ಮಾಡುತ್ತಾರೆ. ನಾವು ಮಾನಿಟರ್ ಮಾಡುತ್ತೇವೆ. ಪೇಮೆಂಟ್ ಯಾವಾಗ ಹಿಡಿದು ಇಡಬಹುದು? ಯಾವಾಗಲೂ ಕೊಡಬಹುದು, ಇದೆಲ್ಲ ಸಾಮಾನ್ಯವಾಗಿ ನಡೆಯತಕ್ಕಂಥದ್ದು. ಇದೇನು ಯಾವ ಸರ್ಕಾರಕ್ಕೂ ಹೊಸದಲ್ಲ. ಆದರೆ ಯಾವಗಲೂ You must appreciate one thing ಯಾವಾಗಲೂ ಕೂಡ ನಾವು ರಿವರ್ಸ್ ಬ್ಯಾಂಕ್ ನಮ್ಮ ಪೇಮೆಂಟನ್ನು ನನ್ನ ಈ ಅವಧಿಯಲ್ಲಿ ಒಂದು ದಿವಸ ಕೂಡ ನಿಲ್ಲಿಸಿಲ್ಲ. It is a credit to my Govt. ಯಾವಾಗಲೂ ಮಾಡಿಲ್ಲ. ಆದ್ದರಿಂದ ಇದು,ತಮಗೆ ಗೊತ್ತಿರಬಹುದು. ಇಂಥಾದ್ದು ಸುಮಾರು 20 ವರ್ಷದಿಂದ ಇದೆ. ಅದಕ್ಕಿಂತ ಹಿಂದಿನಿಂದಲೂ ಕೂಡ ರಿಸ್ಟ್ರಿಕ್ಟ್ ಮಾಡತಕ್ಕಂಥ ಟೋಟಲ್ ಬ್ಯಾನ್ ಇಲ್ಲ. ರಿಸ್ಟ್ರಿಕ್ಟ್ ಮಾಡುವಂಥದ್ದು ಯಾವಾಗಲೂ ಇದೆ. ಅದೇ ಪ್ರಕಾರ 'ಆಶ್ರಯ' ಮನೆಗಳ ಬಗ್ಗೆ ಕೊಟ್ಟಿದ್ದೀರಿ. ಇದು

ಜಿಲ್ಲಾಧಿಕಾರಿಗಳಿಗೆ ಪುನಃ ನಾವು ಎಚ್ಚರಿಸಿ ಎಲ್ಲಿಯಾದರೂ ಹೆಚ್ಚು ಕಡಿಮೆ ಇದ್ದರೆ ಅದನ್ನು ಸರಿಪಡಿಸುತ್ತೇವೆ. 'ನೆರಳಿನ ಭಾಗ್ಯ' ಬಗ್ಗೆ ತಾವು ಹೇಳಿದರೆ, It has become a very popular programme. ತಮಗೆ ಸ್ವಲ್ಪ ಜಾಸ್ತಿ ಮನೆ ಕೊಟ್ಟು ನಾನಂತೂ ಸಿಕ್ಕಿ ಹಾಕಿಕೊಂಡಿದ್ದೇನೆ. ಆದ್ದರಿಂದ ನೆರಳಿನ ಭಾಗ್ಯದ ವಿಚಾರದಲ್ಲಿ ಸ್ಟೆಪ್ ಅಪ್ ಮಾಡೋಣ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ಹಾಸ್ಯಮಯವಾಗಿ ಯೋಜನೆಯ ಗಾತ್ರ ಹೆಚ್ಚಾಗಿದೆ ಎಂದು ಆ ಕಡೆಯಿಂದ ಮೇಜು ಕುಟ್ಟುವ ರೀತಿಯಲ್ಲಿ ಅಭಿವೃದ್ಧಿಯ ಬಗ್ಗೆ ಹೇಳಿದರು. ಒಂದೇ ಒಂದು ನಿದರ್ಶನವನ್ನು ಈ ಸಮಯದಲ್ಲಿ ನಾನು ಕೊಡುವುದಕ್ಕೆ ಇಚ್ಛಿಸುತ್ತಿದ್ದೇನೆ. ಮುಖ್ಯಮಂತ್ರಿಗಳು ಯೋಜನೆಯ ಗಾತ್ರವನ್ನು ಹೆಚ್ಚಿಗೆ ತೋರಿಸಿದರು. ಇದಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ 46ನೇ ಬೇಡಿಕೆಯಲ್ಲಿ ಐದು ಸಾವಿರ ಲಕ್ಷ ರೂಪಾಯಿಗಳ ಒಂದು ಬೇಡಿಕೆ ಇಟ್ಟಿದ್ದಾರೆ. ಇದು 'ಸಸ್ಪೆನ್ಸ್' 'ಅಮಾನತ್ತು' ಎಂದು ಈ ಯೋಜನೆಯ ಗಾತ್ರವನ್ನು ಇವರು ಹೇಗೆ ಹೆಚ್ಚಿಗೆ ತೋರಿಸುತ್ತಾರೆ, ಈ ಅಂಕಿಸಂಖ್ಯೆಗಳು ಸತ್ಯಕ್ಕೆ ದೂರವಾಗಿವೆ ಎಂದು ಹೇಳುತ್ತೇನೆ ಕಾರಣ, ಈ ಅಮಾನತ್ತುನಲ್ಲಿರತಕ್ಕ ಹಣವನ್ನು ಯಾವುದೇ ಅಭಿವೃದ್ಧಿ ಕೆಲಸಕ್ಕೆ ಖರ್ಚು ಮಾಡುವುದಿಲ್ಲ. ಇದು ಇಟ್ಟಿರತಕ್ಕಂಥದ್ದು ಸಿಮೆಂಟ್, ಸ್ಟೀಲ್ ಇಂಥ ಸಾಮಗ್ರಿಗಳನ್ನು ಕೊಳ್ಳುವುದಕ್ಕೆ ಪ್ರತಿಯೊಂದು ಕೆಲಸಕ್ಕೆ ಅದನ್ನು ಖರ್ಚು ಮಾಡುವಾಗ ಆಯಾ ಎಸ್ಟಿಮೆಟ್‌ನಲ್ಲಿ ಹಣವು ಪುನಃ ಸರ್ಕಾರಕ್ಕೆ ಬರುತ್ತದೆ. ಈ ರೀತಿ It is a recurring amount ಯಾವುದೇ ಅಭಿವೃದ್ಧಿ ಕೆಲಸಕ್ಕೆ, ಯಾವುದೇ ಕಾರ್ಯಕ್ರಮಕ್ಕೆ ಖರ್ಚು ಮಾಡತಕ್ಕಂಥ ಹಣವಿಲ್ಲ ಇದು. ಐದು ಸಾವಿರ ರೂಪಾಯಿಗಳನ್ನು ಯೋಜನೆಯಲ್ಲಿ ಇಟ್ಟು ಪಿಡಬ್ಲ್ಯೂಡಿಗೆ ನಾವು ಈ ಗಾತ್ರವನ್ನು ಹೆಚ್ಚು ಮಾಡುತ್ತೇವೆ ಎಂದು ತೋರಿಸಿದ್ದಾರೆ, ಇದು ಸರ್ಕಾರಕ್ಕೆ ವಾಪಸ್ ಕೊಡತಕ್ಕಂಥ ಹಣ. ಈ ರೀತಿ ಸತ್ಯಕ್ಕೆ ದೂರವಾದಂಥ ಒಂದು ಅಂಶವನ್ನು ಇವರು ಯೋಜನೆಯಲ್ಲಿ ಆಯವ್ಯಯ ಅಂಕಿಸಂಖ್ಯೆಗಳಲ್ಲಿ ಕೂಡಿಸಿಕೊಂಡಿದ್ದಾರೆ. ಇದು ಒಂದನೆಯದು, ಎರಡನೆಯದು ಸರ್ಕಾರದಲ್ಲಿ ಹೇರಳವಾಗಿ ಹಣವಿದ್ದರೆ 84 ಕೋಟಿ ರೂಪಾಯಿ 31-3-93 ಕ್ಕೆ ಬಾಕಿ ಇರತಕ್ಕಂಥ ಲೋಕೋಪಯೋಗಿ ಇಲಾಖೆಯ ಬಿಲ್ಲನ್ನು, 158 ಕೋಟಿ ರೂಪಾಯಿ ನೀರಾವರಿ ಇಲಾಖೆಯದು ಮಾರ್ಚಿ 31 ಕ್ಕೆ ಬಾಕಿ ಇರುವ ಹಣವನ್ನು ಇಂದಿನವರೆಗೆ ಏತಕ್ಕೆ ಕೊಟ್ಟಿಲ್ಲ? ಈ ರೀತಿ ತಪ್ಪು ಅಂಕಿಸಂಖ್ಯೆಗಳನ್ನು ಕೊಟ್ಟು ಗಾತ್ರವನ್ನು ಹೆಚ್ಚಿಗೆ ತೋರಿಸಿದ್ದಾರೆ. ಈ ಐದು ಸಾವಿರ ಲಕ್ಷ ರೂಪಾಯಿಗಳು ಬೋಗಸ್ ಇದೆ ಎಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಕೈಗಾರಿಗಕೆಗಳ ಬಗ್ಗೆ ಬಹಳ ಓಂದು ಸುಂದರವಾದಂಥ ಚಿತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡಿಸಿದ್ದಾರೆ. ಅಂಥ ಒಂದು ಪರಿಸ್ಥಿತಿ ಈ ರಾಜ್ಯದಲ್ಲಿ ಬಂದರೆ ಎಲ್ಲರೂ ಕೂಡ ಸ್ವಾಗತ ಮಾಡುತ್ತೇವೆ.

ಆದರೆ ಇವತ್ತು ಇಲ್ಲಿ ಇರತಕ್ಕಂಥ ಕಾರ್ಖಾನೆಗಳು ಏನು ಇದ್ದಾವೆ ಕೇಂದ್ರಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಕಾರ್ಖಾನೆಗಳು, ರಾಜ್ಯಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಕಾರ್ಖಾನೆಗಳು ಸಮಾಧಿಯಾಗುತ್ತಿದೆ. ಅದನ್ನು ಉಳಿಸುವಂಥ ಪ್ರಯತ್ನ ಏನು ಮಾಡಿದ್ದೀರಿ ಇವತ್ತಿನ ದಿವಸ. ನಾನು ನನ್ನ ಭಾಷಣದಲ್ಲಿ ಏನು ಮಾಡಿದ್ದೀರಿ ಎಂದು ಕೇಳಿದ್ದೇನೆ. ಬಿಇಎಂಎಲ್ ಆಗಲಿ, ಹೆಚ್‌ಎಂಟಿ ಆಗಲಿ, ಮತ್ತೆ ಐಟಿಐಯಾಗಲಿ, ನಿಮ್ಮ ಎನ್‌ಜಿಇಎಫ್ ಆಗಲೀ ಇವೆಲ್ಲವೂ ಕೂಡ ಸಮಾಧಿಯಾಗುತ್ತಿವೆ. ಅದನ್ನು ಏನು ಮಾಡಿದ್ದೀರಿ ಎಂದು ತಾವು ದಯವಿಟ್ಟು ಹೇಳಿ. ಜೊತೆಗೆ ನಿಮ್ಮ ಸಂಪುಟದ ಉಪಸಮಿತಿ ಒಂದನ್ನು ಮಾಡಿದ್ದೀರಿ. ಈ ಭೂ ಹಗರಣಗಳ ಬಗ್ಗೆ ಎಷ್ಟು ದಿವಸ ಅದನ್ನು ಬದಿಗಿಡುತ್ತೀರಿ? ಆ ಸಂಪುಟದ ಉಪಸಮಿತಿಗೆ ಅದನ್ನು ಕಳುಹಿಸಿರತಕ್ಕಂಥದ್ದು ಅದನ್ನು ಸಮಾಧಿ ಮಾಡುವುದಕ್ಕೋ ಅಥವಾ ಈ ರಾಜ್ಯದ ಜನತೆಯ ಮುಂದೆ ನಿಜಾಂಶ ಏನು ಎಂದು ತಿಳಿಸುವುದಕ್ಕೋ ದಯವಿಟ್ಟು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು 7ನೇ ತಾರೀಖು ಸ್ವಲ್ಪ ವಿವರವಾದಂಥ ಉತ್ತರವನ್ನು ಕೊಡುತ್ತೇನೆ. ಏಕೆಂದರೆ ಅದಕ್ಕೆ ಸಮಯ ಹಿಡಿಯುತ್ತದೆ. ಭೂ ಹಗರಣ, ಯಾವ ಹಗರಣವೂ ಇಲ್ಲ. ನನ್ನ ಕಾಲದಲ್ಲಿ ಯಾವ ಹಗರಣವೂ ಕೂಡ ಆಗಿಲ್ಲ ಯಾರಿಗೂ ಭೂಮಿ ಕೊಟ್ಟಿದ್ದು ಇಲ್ಲ, ಹಗರಣವೂ ಆಗಿಲ್ಲ. ನನ್ನ ಸರ್ಕಾರಕ್ಕೆ ಸಂಬಂಧಪಟ್ಟಂಥ ಯಾವ ಹಗರಣವೂ ಕೂಡ ಇಲ್ಲ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕೇಳುತ್ತೇನೆ. ಅವರು ಕೇಳಬೇಕಾಗುತ್ತದೆ. ಅವರು ಅಷ್ಟು ವೀರಾವೇಶದಿಂದ ಭಾಷಣವನ್ನು ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಸಣ್ಣ ಪ್ರಶ್ನೆ. ಅವರು ಹೇಳಿದರು; ಇಲ್ಲಿ ಕುಳಿತಿರುವವರೆಲ್ಲರೂ ಆರ್ಥಿಕ ತಜ್ಞರು, ಆರ್ಥಿಕವಾಗಿ ತಿಳಿದುಕೊಂಡಿರುವವರಿದ್ದಾರೆಂದು. ನಾನು ತಜ್ಞನಲ್ಲ. ಪರೀಕ್ಷೆಗೆ ಮಾತ್ರ ಸ್ವಲ್ಪ ಓದಿಕೊಂಡಿದ್ದೆ. ಯೋಜನಾ ಗಾತ್ರವನ್ನು ಕಡಿತ ಮಾಡಿಲ್ಲವೆಂದು ಹೇಳಿದ್ದೀರಿ. ಮತ್ತು ಅದೇ ಸಂದರ್ಭದಲ್ಲಿ ಅಬಕಾರಿ ಬಾಬ್ತಿನಲ್ಲಿ ಶೇಕಡ 24ರಷ್ಟು ಹೆಚ್ಚಾಗಿದ್ದು ಹಾಗೆಯೇ ವಾಣಿಜ್ಯ ತೆರಿಗೆಯಲ್ಲೂ ಶೇಕಡ 20ರಷ್ಟು ಹೆಚ್ಚಾಗಿದೆಯೆಂದು ಹೇಳಿದ್ದೀರಿ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. However, what was the increase in the plan size ಇದನ್ನು ಸರಳವಾಗಿ ಕೇಳುತ್ತೇನೆ. ಇದಕ್ಕೆ ಉತ್ತರ ಹೇಳಿದರೆ ಹೇಳಿ, ಬಿಟ್ಟರೆ ಬಿಡಿ. Your increase in the Plan size was 58% . I want to know, whether your augmentation of resources was 58% or not. That is al l simple question I want to ask you. ಎರಡನೆಯದಾಗಿ, ಆರ್ಥಿಕ ಸ್ಥಿರತೆಗೆ ನಿಮಗೆ

ಆದರೆ ಇವತ್ತು ಇಲ್ಲಿ ಇರತಕ್ಕಂಥ ಕಾರ್ಖಾನೆಗಳು ಏನು ಇದ್ದಾವೆ ಕೇಂದ್ರಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಕಾರ್ಖಾನೆಗಳು, ರಾಜ್ಯಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಕಾರ್ಖಾನೆಗಳು ಸಮಾಧಿಯಾಗುತ್ತಿದೆ. ಅದನ್ನು ಉಳಿಸುವಂಥ ಪ್ರಯತ್ನ ಏನು ಮಾಡಿದ್ದೀರಿ ಇವತ್ತಿನ ದಿವಸ. ನಾನು ನನ್ನ ಭಾಷಣದಲ್ಲಿ ಏನು ಮಾಡಿದ್ದೀರಿ ಎಂದು ಕೇಳಿದ್ದೇನೆ. ಬಿಇಎಂಎಲ್ ಆಗಲಿ, ಹೆಚ್‌ಎಂಟಿ ಆಗಲಿ, ಮತ್ತೆ ಐಟಿಐಯಾಗಲಿ, ನಿಮ್ಮ ಎನ್‌ಜಿಇಎಫ್ ಆಗಲೀ ಇವೆಲ್ಲವೂ ಕೂಡ ಸಮಾಧಿಯಾಗುತ್ತಿವೆ. ಅದನ್ನು ಏನು ಮಾಡಿದ್ದೀರಿ ಎಂದು ತಾವು ದಯವಿಟ್ಟು ಹೇಳಿ. ಜೊತೆಗೆ ನಿಮ್ಮ ಸಂಪುಟದ ಉಪಸಮಿತಿ ಒಂದನ್ನು ಮಾಡಿದ್ದೀರಿ. ಈ ಭೂ ಹಗರಣಗಳ ಬಗ್ಗೆ ಎಷ್ಟು ದಿವಸ ಅದನ್ನು ಬದಿಗಿಡುತ್ತೀರಿ? ಆ ಸಂಪುಟದ ಉಪಸಮಿತಿಗೆ ಅದನ್ನು ಕಳುಹಿಸಿರತಕ್ಕಂಥದ್ದು ಅದನ್ನು ಸಮಾಧಿ ಮಾಡುವುದಕ್ಕೋ ಅಥವಾ ಈ ರಾಜ್ಯದ ಜನತೆಯ ಮುಂದೆ ನಿಜಾಂಶ ಏನು ಎಂದು ತಿಳಿಸುವುದಕ್ಕೋ ದಯವಿಟ್ಟು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು 7ನೇ ತಾರೀಖು ಸ್ವಲ್ಪ ವಿವರವಾದಂಥ ಉತ್ತರವನ್ನು ಕೊಡುತ್ತೇನೆ. ಏಕೆಂದರೆ ಅದಕ್ಕೆ ಸಮಯ ಹಿಡಿಯುತ್ತದೆ. ಭೂ ಹಗರಣ, ಯಾವ ಹಗರಣವೂ ಇಲ್ಲ. ನನ್ನ ಕಾಲದಲ್ಲಿ ಯಾವ ಹಗರಣವೂ ಕೂಡ ಆಗಿಲ್ಲ ಯಾರಿಗೂ ಭೂಮಿ ಕೊಟ್ಟಿದ್ದು ಇಲ್ಲ, ಹಗರಣವೂ ಆಗಿಲ್ಲ. ನನ್ನ ಸರ್ಕಾರಕ್ಕೆ ಸಂಬಂಧಪಟ್ಟಂಥ ಯಾವ ಹಗರಣವೂ ಕೂಡ ಇಲ್ಲ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕೇಳುತ್ತೇನೆ. ಅವರು ಕೇಳಬೇಕಾಗುತ್ತದೆ. ಅವರು ಅಷ್ಟು ವೀರಾವೇಶದಿಂದ ಭಾಷಣವನ್ನು ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಸಣ್ಣ ಪ್ರಶ್ನೆ. ಅವರು ಹೇಳಿದರು; ಇಲ್ಲಿ ಕುಳಿತಿರುವವರೆಲ್ಲರೂ ಆರ್ಥಿಕ ತಜ್ಞರು, ಆರ್ಥಿಕವಾಗಿ ತಿಳಿದುಕೊಂಡಿರುವವರಿದ್ದಾರೆಂದು. ನಾನು ತಜ್ಞನಲ್ಲ. ಪರೀಕ್ಷೆಗೆ ಮಾತ್ರ ಸ್ವಲ್ಪ ಓದಿಕೊಂಡಿದ್ದೆ. ಯೋಜನಾ ಗಾತ್ರವನ್ನು ಕಡಿತ ಮಾಡಿಲ್ಲವೆಂದು ಹೇಳಿದ್ದೀರಿ. ಮತ್ತು ಅದೇ ಸಂದರ್ಭದಲ್ಲಿ ಅಬಕಾರಿ ಬಾಬ್ತಿನಲ್ಲಿ ಶೇಕಡ 24ರಷ್ಟು ಹೆಚ್ಚಾಗಿದ್ದು ಹಾಗೆಯೇ ವಾಣಿಜ್ಯ ತೆರಿಗೆಯಲ್ಲೂ ಶೇಕಡ 20ರಷ್ಟು ಹೆಚ್ಚಾಗಿದೆಯೆಂದು ಹೇಳಿದ್ದೀರಿ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. However, what was the increase in the plan size ಇದನ್ನು ಸರಳವಾಗಿ ಕೇಳುತ್ತೇನೆ. ಇದಕ್ಕೆ ಉತ್ತರ ಹೇಳಿದರೆ ಹೇಳಿ, ಬಿಟ್ಟರೆ ಬಿಡಿ. Your increase in the Plan size was 58% . I want to know, whether your augmentation of resources was 58% or not. That is al l simple question I want to ask you. ಎರಡನೆಯದಾಗಿ, ಆರ್ಥಿಕ ಸ್ಥಿರತೆಗೆ ನಿಮಗೆ

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 36 - ಭಾರಿ ಮತ್ತು ಮಧ್ಯಮ ನೀರಾವರಿ

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) (ಉಪ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1 995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಭಾರಿ ಮತ್ತು ಮಧ್ಯಮ ನೀರಾವರಿ' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 330,05,83,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1052,81,28,000 ರೂಪಾಯಿಗಳಿಗೆ ಮೀರದ ವೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 50 (ವಿದ್ಯುಚ್ಛಕ್ತಿ ಯೋಜನೆಗಳು)

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) (ಉಪ ಮುಖ್ಯಮಂತ್ರಿಗಳ ಪರವಾಗಿ) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 101,92,94,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 425, 15,00,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 39 - (ಚುನಾವಣೆಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 49,53,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 40- (ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,99,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 41- (ಸಚಿವಾಲಯ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 31,68,75,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ : 43- (ಸಾಮಾನ್ಯ ಆಡಳಿತ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿಸಾಮಾನ್ಯ ಆಡಳಿತ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 73,14,45,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,10,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 57- (ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ)

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 157,87,73,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 58- (ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 536,35,27,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 17- (ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 101,83,86,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 18- (ಖಜಾನೆ ಆಡಳಿತ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಆಡಳಿತಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,58,33,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 19 (ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 464,48,98,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 20- (ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ , ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,67,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,25,45,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 22- (ಇತರೇ ವಿವಿಧ ಸೇವೆಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 45,58,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,85,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 3- (ಪಶುಸಂಗೋಪನಾ)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿಪಶುಸಂಗೋಪನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 89,09,82,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ : 10- (ಸಕ್ಕರೆ ಕೈಗಾರಿಕೆಗಳು)

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಕ್ಕರೆ ಕೈಗಾರಿಕೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 20,01,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,00,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ,

''31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 39, 40, 41, 43, 57, 58, 17, 18, 19, 20, 22, 3, 10, 36, 50 ಮತ್ತು 35ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಮತ್ತು ಬಂಡವಾಳ ಖಾತೆಯಲ್ಲಿ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳ ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ 39 - ಚುನಾವಣೆಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಚುನಾವಣೆಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 49,53,50,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 40 - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,99,50,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 41- ಸಚಿವಾಲಯ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಚಿವಾಲಯಕ್ಕೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 31,68,75,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 43 - ಸಾಮಾನ್ಯ ಆಡಳಿತ, ಇತ್ಯಾದಿ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾಮಾನ್ಯ ಆಡಳಿತ, ಇತ್ಯಾದಿ 'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 73,14,45,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,10,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 57 - ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1 57,87,73,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 58 - ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 536,35,27,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 17 - ವರಮಾನ ತೆರಿಗೆ,ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1 00,83,86,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 18 - ಖಜಾನೆ ಆಡಳಿತ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ' ಖಜಾನೆ ಆಡಳಿತ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,58,33,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 19 - ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 464,48,98,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 20 - ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1 2,67,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,25,45,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 22 - ಇತರ ವಿವಿಧ ಸೇವೆಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಇತರೆ ವಿವಿಧ ಸೇವೆಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,58,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 5,85,00,0000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 3 - ಪಶುಸಂಗೋಪನಾ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪಶುಸಂಗೋಪನೆಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 89,09,82,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 10 - ಸಕ್ಕರೆ ಕೈಗಾರಿಕೆಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಕ್ಕರೆ ಕೈಗಾರಿಕೆಗಳು' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 20,01,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,00,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 36 - ಭಾರಿ ಮತ್ತು ಮಧ್ಯಮ ನೀರಾವರಿ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಭಾರಿ ಮತ್ತು ಮಧ್ಯಮ ನೀರಾವರಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 330,05,83,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1052,81,28,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 50- ವಿದ್ಯುಚ್ಛಕ್ತಿ ಯೋಜನೆಗಳು

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಿದ್ಯುಚ್ಛಕ್ತಿ ಯೋಜನೆಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾಕ್ಕೆ ರಾಜಸ್ವ ಖಾತೆಯಲ್ಲಿ 101,92,94,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 425,15,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ 35 - ಸಣ್ಣ ನೀರಾವರಿ

''ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಣ್ಣ ನೀರಾವರಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 56,29,50,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 57,31,39,000 ರೂಪಾಯಿಗಳಿಗೆ ಮೀರದ ಮೊತ್ತವನ್ನು

(ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

1994ರ ಕರ್ನಾಟಕ ಧನ ವಿನಿಯೋಗ (ನಂ.3) ನಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1 994ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೆನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''1994ರ ಕರ್ನಾಟಕ ಧನ ವಿನಿಯೋಗ 9ನಂ.3 ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇವೆ.

ಅನುಬಂಧ I

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1994ರ ಕರ್ನಾಟಕ ಧನ ವಿನಿಯೋಗ (ನಂ.3) ವಿದೇಯಕ ಪರ್ಯಾವಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''1994ರ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ಮತ್ತು 3

ಅಧ್ಯಕ್ಷರು : ''ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸ್ಪಟ್ಟಿತು